ಅಧ್ಯಾತ್ಮಗ್ರಂಥಾವಳಿ

ಶ್ರೀಮನ್ನೃಸಿಂಹಸರಸ್ವತೀತೀರ್ಥರವರ

# ವೇದಾಂತ ಡಿಂಡಿಮ

(ಭಾವಾರ್ಥ, ವಿವರಣೆಗಳೊಡನೆ)

ಬರೆದವರು :
ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು

ಕ್ರಮಾಂಕ. ೪೭

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - 573211
ದೂ : 08175 - 273820

2004

## ಪೀಠಿಕೆ

''ವೇದಾಂತಡಿಂಡಿಮ''ವು ಪ್ರಸ್ಥಾನತ್ರಯಭಾಷ್ಯಗಳಿಗಿಂತಲೂ ಹೆಚ್ಚಾಗಿ ಜನಾನುರಾಗಕ್ಕೆ ಪಾತ್ರವಾಗಿರುವ ಚಿಕ್ಕಪ್ರಕರಣಗಳಲ್ಲಿ ಒಂದಾಗಿದೆ. ಇದು ಇಷ್ಟೊಂದು ಜನಮನೋರಂಜಕ ವಾಗಿರುವದಕ್ಕೆ ಮುಖ್ಯ ಕಾರಣಗಳು ಯಾವವೆಂದರೆ : ಇದರ ಶೈಲಿಯು ಅತ್ಯಂತಲಲಿತ ವಾಗಿರುವದು, ಮತ್ತು ನಮ್ಮೆಲ್ಲರಲ್ಲಿಯೂ ಇದ್ದುಕೊಂಡಿರುವ ಸಾಕ್ಷಿಸ್ವರೂಪನಾದ ಆತ್ಮನೇ ಇಡಿಯ ಬ್ರಹ್ಮಾಂಡಕ್ಕೆಲ್ಲ ಆಧಾರವಾಗಿರುವ ಪರಮಾರ್ಥಸತ್ಯವಾದ ಬ್ರಹ್ಮವು - ಎಂಬುದನ್ನು ನಿಃಸಂಶಯವಾಗಿ ಮನಗಾಣಿಸಿಕೊಟ್ಟಿರುವ ಪ್ರತಿಪಾದನಾಕ್ರಮ - ಇವುಗಳೇ ಆಗಿವೆ.

ಈ ಗ್ರಂಥವನ್ನು ಬರೆದವರು ಯಾರು? ಎಂಬ ಬಗ್ಗೆ ಸಂಶಯವಿದೆ. ಈ ಗ್ರಂಥಕರ್ತೃಗಳಾದ ನೃಸಿಂಹತೀರ್ಥರು 'ಭೇದಧಿಕ್ಕಾರ'ವನ್ನು ಬರೆದು ಪ್ರಸಿದ್ಧರಾಗಿರುವ ಇದೇ ಹೆಸರಿನ ಗ್ರಂಥಕರ್ತರಲ್ಲ ; ಏಕೆಂದರೆ ಭೇದಧಿಕ್ಕಾರಕರ್ತರು ನರಸಿಂಹೋಪಾಸಕರೆಂದು ಆ ಗ್ರಂಥದಿಂದ ಗೊತ್ತಾಗಿದೆ. 'ವೇದಾಂತಸಾರ'ವೆಂಬ ಸಂಸ್ಕೃತಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆದವರು ಕೃಷ್ಣಾನಂದಶಿಷ್ಯರೆಂದು ಗೊತ್ತಾಗಿರುವದರಿಂದ ಅವರೂ ಬೇರೊಬ್ಬರೇ ಆಗಿರುತ್ತಾರೆ. ಇನ್ನು 'ಭಗವತ್ಪಾದರಚಿತೋ ಭವಗ್ರಂಥಿವಿಭೇದನಃ। ದ್ವೈತಾದ್ರಿಶತಧಾರೋಽಯಂ ಜೀಯಾದ್ವೇದಾಂತಡಿಂಡಿಮಃ'॥ ಎಂಬ ಶ್ಲೋಕವೊಂದು ಕೆಲವು ಮುದ್ರಿತಪುಸ್ತಕಗಳ ಆದಿಯಲ್ಲಿ ಕಾಣಬರುತ್ತದೆ. ಅದನ್ನು ಯಾರೋ ಬರೆದು ಸೇರಿಸಿರಬೇಕೆಂಬುದು ಸ್ಪಷ್ಟವಾಗಿಯೇ ಇದೆ.

ಈ ಗ್ರಂಥವು ಉತ್ತರ-ದಕ್ಷಿಣಭಾರತಗಳಲ್ಲಿ ದೇವನಾಗರಿಯಲ್ಲಿಯೂ ದೇಶಭಾಷೆಗಳ ಬೇರೆಬೇರೆಯ ಲಿಪಿಗಳಲ್ಲಿಯೂ ಅಚ್ಚಾಗಿದ್ದು ಪ್ರಚಾರದಲ್ಲಿತ್ತಾದರೂ ಅನೇಕ ಅಶುದ್ಧಿಗಳಿಂದ ಕೂಡಿತ್ತು. ಅನೇಕ ಬೇರೆ ಬೇರೆಯ ಮುದ್ರಿತ ಪುಸ್ತಕಗಳನ್ನು ಸಂಗ್ರಹಿಸಿ, ಪಾಠಭೇದಗಳನ್ನು ತೋರಿಸಿ, ಶುದ್ಧವಾದ ಪಾಠಗಳನ್ನು ಕೆಲವೆಡೆಯಲ್ಲಿ ಸ್ವತಃ ಕಲ್ಪಿಸಿ 'ಭಾವಬೋಧಿನೀ' ಎಂಬ ಸರಳವ್ಯಾಖ್ಯಾನವನ್ನು ಜೋಡಿಸಿ ಸಂಸ್ಕೃತಭಾಷೆಯಲ್ಲಿ 1935ರಲ್ಲೇ ಕಾರ್ಯಾಲಯದ ಮೂಲಕ ಪ್ರಕಟಿಸಿತ್ತು[1] ಆ ಸಂಸ್ಕೃತ ಗ್ರಂಥದ ಸಾರವನ್ನು ಉಪಯೋಗಿಸಿಕೊಂಡು, ಈ ಎರಡನೆಯ ಮುದ್ರಣದಲ್ಲಿ ಕನ್ನಡದ ಅನುವಾದವನ್ನೂ ವಿವರಣೆಯನ್ನೂ ಬರೆದಿದೆ. ವಿಷಯ ವಿಭಾಗವನ್ನು ಸೂಚಿಸುವ ತಲೆಬರಹಗಳನ್ನೂ ಜೋಡಿಸಿದೆ. ಈ ನನ್ನ ಅಲ್ಪಸೇವೆಯನ್ನು ಶ್ರೀಶಂಕರಭಗವತ್ಪಾದರ ಚರಣಾರವಿಂದಗಳಲ್ಲಿ ಭಕ್ತಿ ಪೂರ್ವಕವಾಗಿ ಸಮರ್ಪಿಸಿರುತ್ತೇನೆ.

1957 ಇತಿ- ನಾರಾಯಣಸ್ಮರಣೆಗಳು,

ಗ್ರಂಥಕರ್ತ

1. ಪುನಃ 2002ರಲ್ಲಿ ಇದರ ಎರಡನೆಯ ಮುದ್ರಣವು ಹೊರಬಂದಿದೆ. ಕಾರ್ಯಾಲಯದಲ್ಲಿ ಪುಸ್ತಕಗಳು ದೊರೆಯುತ್ತವೆ.

## ಮುನ್ನುಡಿ (ನಾಲ್ಕನೆಯ ಮುದ್ರಣಕ್ಕೆ)

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಈ ಗ್ರಂಥವನ್ನು ಪ್ರಥಮಬಾರಿಗೆ 1933ರಲ್ಲಿ ಮೂಲಶ್ಲೋಕ ಹಾಗೂ ಅರ್ಥ ಸಮೇತ ಅಧ್ಯಾತ್ಮ ಪ್ರಕಾಶಕಾರ್ಯಾಲಯದ ಮೂಲಕ ಪ್ರಕಟಿಸಿದ್ದರು. ಅನಂತರ 1957ರಲ್ಲಿ, 1985ರಲ್ಲಿ ಈ ಗ್ರಂಥದ ಮರು ಮುದ್ರಣಗಳಾಗಿವೆ. ಆ ಪ್ರತಿಗಳೆಲ್ಲ ಮಾರಾಟವಾದ್ದರಿಂದ ಈಗಿನ ಮುದ್ರಣವನ್ನು, ಪ್ರಕಟನೆಯ ಸಂಪೂರ್ಣವೆಚ್ಚವನ್ನು ವಹಿಸಿದ ಹೊಳೆನರಸೀಪುರದ ದೊಡ್ಡಮನೆ ವೆಂಕಟರಾಮಯ್ಯನವರ ದ್ವಿತೀಯ ಪುತ್ರರಾದ ದಿವಂಗತ ಎನ್. ಕೃಷ್ಣಪ್ಪನವರ ನೆನಪಾಗಿ, ಬೆಂಗಳೂರಿನಲ್ಲಿರುವ ಅವರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿಯವರ ಮತ್ತು ಮಕ್ಕಳಾದ ಶ್ರೀ ಎನ್ ವೆಂಕಟೇಶ್‌ರವರ ಸಹಾಯದಿಂದ ಹೊರತರಲಾಗಿದೆ. ಅಧ್ಯಾತ್ಮಸಾಹಿತ್ಯ ಪ್ರಚಾರಸೇವೆಗಾಗಿ ಉದಾರವಾಗಿ ಧನಸಹಾಯವನ್ನು ನೀಡಿರುವ ಮೇಲ್ಕಂಡ ದಾನಿಗಳಿಗೆ ನಮ್ಮ ಸಂಸ್ಥೆಯ ಪರವಾಗಿ ಕೃತಜ್ಞತಾಪೂರ್ವಕವಾದ ಅಭಿನಂದನೆಗಳು. ವಾಚಕರು ಎಂದಿನಂತೆ ಈ ಗ್ರಂಥವನ್ನು ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸಲಾಗಿದೆ.

ಹೊಳೆನರಸೀಪುರ. — ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,
ತಾ|| 15-6-1994 — ಅಧ್ಯಾತ್ಮಗ್ರಂಥಾವಳಿಯ ಸಂಪಾದಕ

## ಪ್ರಕಾಶಕರ ಬಿನ್ನಹ (ಐದನೆಯ ಮುದ್ರಣಕ್ಕೆ)

ಬ್ರಹ್ಮಜ್ಞಾನವೊಂದರಿಂದಲೇ ಮುಕ್ತಿ ಎನ್ನುವ ಮೂಲತತ್ತ್ವವನ್ನು , ಅದನ್ನು ಸಾಧಿಸುವ ಬಗೆಯನ್ನು ಈ 'ವೇದಾಂತ ಡಿಂಡಿಮ'ವು ನಿಚ್ಚಳವಾಗಿ ನಗಾರಿಯಂತೆ ಸಾರುತ್ತಲಿದೆ. ಸಾಮಾನ್ಯರಿಗೂ ಸಹಿತ ಇದರೊಳಗಿನ ತಿರುಳ ಸವಿಯೂ, ವೇದಾಂತದ ಮುಖ್ಯ ಜೀವಾಳವೂ ಸುಲಭವಾಗಿ ದೊರೆಯಲಿ, ಸುತ್ತಲಿನ ಹತ್ತು ಜನರೂ ವೇದಾಂತದ ಹಾದಿಯಲ್ಲಿ ಸಾಗಿ ಜ್ಞಾನಕ್ಕೆ ಬೇಕಾದ ಸಾಧನೆಯನ್ನು ಮಾಡಲಿ, ಮುಕ್ತಿಯನ್ನು ದೊರಕಿಸಿಕೊಳ್ಳಲಿ ಎಂಬ ಕರುಣೆ ಉಪಕಾರದ ಕಳಕಳಿಯಿಂದ ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳು ಅರ್ಥದೊಡನೆ ವಿವರಣೆಯನ್ನೂ ಸೇರಿಸಿ ಗ್ರಂಥ ವಿಷಯವನ್ನು ಮತ್ತಷ್ಟು ಸ್ಫುಟಗೊಳಿಸಿದ್ದಾರೆ.

ಶ್ರೀ ಶ್ರೀಗಳ ವೇದಾಂತ ಪ್ರಸಾರದ ಮಹದುದ್ದೇಶದಿಂದ ಆಕರ್ಷಿತರಾದ ಉದಾರ ಚಿತ್ತರಾದ ವಿಶಾಲ ಹೃದಯರಾದ ಶ್ರೀ ಕೆ.ಎಲ್.ನಾಗರಾಜರಾಯರು ಮುಕ್ತಹಸ್ತದಿಂದ, ಅವರ ಮಗ ಡಾ|| ಗಿರಿಯವರು ಉತ್ಸಾಹದಿಂದ, ಕಾರ್ಯಲಯಕ್ಕೆ ಸಹಕಾರ ನೀಡುತ್ತಲಿದ್ದಾರೆ. ಸದ್ಗೃಹಸ್ಥರೂ, ಸರಳ ಸಂಪನ್ನರೂ, ಸದ್ಭಕ್ತರೂ ಆದ ತಮ್ಮ ತಂದೆ ಶ್ರೀ ಕೋಡಿಹಳ್ಳಿ

ಶ್ರದ್ಧಾ ಪೂರ್ವಕವಾಗಿ ಸಮರ್ಪಿತ



ಕೋಡಿಹಳ್ಳಿ ಲಕ್ಷ್ಮೀನಾರಾಣರಾಯರು

15.6.1902-24.11.1990

# ಕೋಡಿಹಳ್ಳಿ ಲಕ್ಷ್ಮೀನಾರಾಯಣರಾಯರು

ಎಂಬತ್ತೆಂಟು ವರ್ಷಗಳ ಅಸ್ವಾದ್ಯಶ ತುಂಬು ಜೀವನ ನಡೆಸಿದ ಕೋಡಿಹಳ್ಳಿ ಲಕ್ಷ್ಮೀನಾರಾಯಣರಾಯರು ಹುಟ್ಟಿದ್ದು ಅರಸಿಕೆರೆ ತಾಲ್ಲೂಕಿನ ಕೋಡಿಹಳ್ಳಿ ಗ್ರಾಮದಲ್ಲಿ. ಓದಿದ್ದು ಇಂಟರ್‌ವರೆಗೆ ಆದರೂ ಲೋಕ ಪರಿಜ್ಞಾನ ಹಾಗೂ ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿ ಅವರ ಪರಿಣಿತಿ ಅಪಾರ.

ಅರವತ್ತು ಸಂವತ್ಸರಗಳಿಗೂ ಹೆಚ್ಚಿನ ಕೌಟುಂಬಿಕ ಜೀವನ. ಸಹಧರ್ಮಿಣಿ ಶ್ರೀಮತಿ ಲಕ್ಷ್ಮೀದೇವಮ್ಮನವರು. ಎಂಟು ಜನ ಮಕ್ಕಳು - ನಾಲ್ಕು ಗಂಡು, ನಾಲ್ಕು ಹೆಣ್ಣು.

ಸರ್ಕಾರಿ ವೃತ್ತಿ ನೀರಸವಾಗಿದ್ದರೂ, ವೃತ್ತ್ಯೇತರ ಚಟುವಟಿಕೆಗಳಿಂದ ಅವರು ತಮ್ಮ ಬಾಳನ್ನು ರಸಮಯಗೊಳಿಸಿಕೊಂಡಿದ್ದರು. ಸಾಹಿತ್ಯ ಸಂಗೀತಗಳಲ್ಲಿ ಅವರಿಗೆ ಇನ್ನಿಲ್ಲದ ಆಸಕ್ತಿ. ವೀಣೆ ರಾಜಾರಾಯರ ಹಾಗೂ ಗಮಕಿ ಸಂಪತ್ಕುಮಾರಾಚಾರ್ಯರ ಶಿಷ್ಯರಾಗಿದ್ದರು. ಹಾರ್ಮೋನಿಯಂ ಮತ್ತು ವೀಣಾವಾದನಗಳಲ್ಲಿ ಪರಿಶ್ರಮ ಹೊಂದಿದ್ದರು. ಮನೆಯಲ್ಲಿ ಅಹರ್ನಿಶಿ ವಾಲ್ಮೀಕಿ ರಾಮಾಯಣ ಪಾರಾಯಣ, ಕುಮಾರವ್ಯಾಸ ಭಾರತ ವಾಚನ.

ಸಾಮಾಜಿಕ ಚಟುವಟಿಕೆಗಳಲ್ಲಿ ಅವರದು ಎತ್ತಿದ ಕೈ. ಬೆಂಗಳೂರಿನ ಚಾಮರಾಜಪೇಟೆಯ ಶ್ರೀ ಯಾಜ್ಞವಲ್ಕ್ಯಾಶ್ರಮದ ಸಂಸ್ಥಾಪಕ ಕಾರ್ಯದರ್ಶಿಯಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ಶಾಖಾ ಬಾಂಧವರ ಅನುಕೂಲಕ್ಕಾಗಿ 'ಸಂಧ್ಯಾವಂದನೆ' ಹಾಗೂ 'ರುದ್ರಾಧ್ಯಾಯ' ಗ್ರಂಥಗಳನ್ನು ಪ್ರಕಟಿಸಿದರು. ಸ್ವಾತಂತ್ರ್ಯ ಪೂರ್ವದಲ್ಲೇ ವಾಣಿಜ್ಯ ವಿದ್ಯಾಶಾಲೆಯನ್ನು (ಶ್ರೀಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್) ಸ್ಥಾಪಿಸಿ ಅನೇಕರಿಗೆ ಸ್ವಂತ ಉದ್ಯೋಗದ ಅವಕಾಶ ಕಲ್ಪಿಸಿಕೊಟ್ಟರು.

50 ವರ್ಷಗಳಿಗೂ ಹೆಚ್ಚುಕಾಲ ನಿರಂತರವಾಗಿ ಅಗಡಿ ಆನಂದವನದ ಶ್ರೀ ಶೇಷಾಚಲ ಸದ್ಗುರುಗಳ ಜಯಂತಿ ಉತ್ಸವದಲ್ಲಿ ಭಾಗವಹಿಸಿ ಸೇವೆ ಸಲ್ಲಿಸುತ್ತಿದ್ದರು. ಶ್ರೀ ನಾರಾಯಣ ಭಗವಾನರ ಪರಮ ಶಿಷ್ಯರು. ದೈವ ಕೈಂಕರ್ಯಗಳಲ್ಲಿ ಅವರ ಸಹಧರ್ಮಿಣಿಯ ಪಾತ್ರವು ಹಿರಿದಾಗಿದ್ದಿತು. ಸಂಪದ್ಭರಿತ, ಸುಸಂಸ್ಕೃತ ಬದುಕಿನ ಜೊತೆಗೆ ಕಿರೀಟಪ್ರಾಯವಾಗಿದ್ದಿತು ಅವರ ಆಧ್ಯಾತ್ಮಿಕ ಜೀವನ.

ಅವರ ನಿಷ್ಠಾವಂತ ಕಾರ್ಯ, ದಣಿವರಿಯದ ದುಡಿಮೆ, ಅಕಳಂಕಿತ ಸಾತ್ವಿಕ ಜೀವನ ವಿಧಾನ ಎಲ್ಲರ ಮನ್ನಣೆ ಪ್ರಶಂಸೆಗಳಿಗೆ ಪಾತ್ರವಾಗಿದ್ದವು.

ಲಕ್ಷ್ಮೀನಾರಾಯಣರಾಯರ ಸ್ಮರಣಾರ್ಥ ಆ ಟ್ರಸ್ಟ್‌ನ ಮೂಲಕ ವರ್ಷಂಪ್ರತಿ ಆಷಾಢ, ಕಾರ್ತಿಕ ಮಾಸಗಳಲ್ಲಿ ಪ್ರವಚನ ಸರಣಿಯನ್ನು ಶ್ರೀ ಶುಕ್ಲ ಯಜುಶ್ಶಾಖಾ ಟ್ರಸ್ಟ್‌ನವರೂ ಭಾಗಿಗಳಾಗಿ ಅವಕಾಶ ಮಾಡಿಕೊಟ್ಟ ಈ ಯಾಜ್ಞವಲ್ಕ್ಯಾಶ್ರಮದಲ್ಲಿ ಕಾರ್ಯಾಲಯದ ಮೂಲಕ ನಡೆಸುತ್ತಿದ್ದಾರೆ. ಅದೇ ಟ್ರಸ್ಟಿನಿಂದ ಈ ಪುಸ್ತಕದ ವೆಚ್ಚವನ್ನು ಭರಿಸಿದ್ದಾರೆ. ಈ ಉಪಕಾರಕ್ಕಾಗಿ ಕಾರ್ಯಾಲಯವು ಅವರಿಗೆ ಋಣಿಯಾಗಿದ್ದು ಅಭಿನಂದನೆಗಳನ್ನು ಸಲ್ಲಿಸುತ್ತದೆ. ಹಾಗೆಯೇ ಭಗವಂತನ ಅನುಗ್ರಹ ಶ್ರೀ ಶ್ರೀಗಳ ಕೃಪಾಶೀರ್ವಾದ ಅವರ ಮತ್ತು ಅವರ ಕುಟುಂಬ ವರ್ಗದ ಮೇಲೆ ಸದಾ ಇರಲಿ ಎಂದು ಪ್ರಾರ್ಥನೆ.

ಸುಂದರವಾದ ಅಕ್ಷರ ಜೋಡಣೆಯನ್ನು ಮಾಡಿರುವ ಮಾರುತಿ ಗ್ರಾಫಿಕ್ಸ್, ಅತಿತ್ವರಿತವಾಗಿ ಸೊಗಸಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಸ್ಟಾಂಡರ್ಡ್ ಪ್ರೆಸ್‌ನ ಶ್ರೀ ನಾಗರಾಜ್‌ರವರಿಗೆ ಹೃತ್ಪೂರ್ವಕ ವಂದನೆಗಳು.

ಕಾರ್ತಿಕ ಬಹುಳ ಅಮಾವಾಸ್ಯೆ - ಪಾಡ್ಯ, ಪ್ರಕಾಶಕರು
ತಾರಣ ಸಂವತ್ಸರ 12-12-04

## ಸಂಕೇತಗಳ ವಿವರಣೆ

| ಸಂಕೇತ | ವಿವರ | ಸಂಕೇತ | ವಿವರ |
|---|---|---|---|
| ಈ. | ಈಶಾವಾಸ್ಯೋಪನಿಷತ್ತು | ಪ್ರ. | ಪ್ರಶ್ನೋಪನಿಷತ್ತು |
| ಐ.ಆ. | ಐತರೇಯ ಆರಣ್ಯಕ | ಬೃ | ಬೃಹದಾರಣ್ಯಕೋಪನಿಷತ್ತು |
| ಕ. | ಕಠೋಪನಿಷತ್ತು | ಬೃ.ಮಾ. | ಬೃಹದಾರಣ್ಯಕ, (ಮಾಧ್ಯಂದಿನಪಾಠ) |
| ಕೇ. | ಕೇನೋಪನಿಷತ್ತು | ಮಾಂ. | ಮಾಂಡೂಕ್ಯೋಪನಿಷತ್ತು |
| ಕೈ. | ಕೈವಲ್ಯೋಪನಿಷತ್ತು | ಮುಂ. | ಮುಂಡಕೋಪನಿಷತ್ತು |
| ಛಾಂ. | ಛಾಂದೋಗ್ಯೋಪನಿಷತ್ತು | ಮೋ. ಧ. | ಮೋಕ್ಷಧರ್ಮಪರ್ವ (ಮಹಾಭಾರತ) |
| ತೈ. | ತೈತ್ತಿರೀಯೋಪನಿಷತ್ತು | | |
| ತೈ. ಆ. | ತೈತ್ತಿರೀಯ ಆರಣ್ಯಕ | ವಿ.ಪು. | ವಿಷ್ಣುಪುರಾಣ |
| ತೈ. ನಾ. | ತೈತ್ತಿರೀಯ ನಾರಾಯಣಪನ್ನ | ಶ್ವೇ. | ಶ್ವೇತಾಶ್ವತರೋಪನಿಷತ್ತು |

# ವಿಷಯಾನುಕ್ರಮಣಿಕೆ


| | | ಪುಟ |
|---|---|---|
| i | ಪೀಠಿಕೆ | III |
| ii | ಮುನ್ನುಡಿ | IV |
| iii | ಸಂಕೇತಗಳ ವಿವರಣೆ | V |
| 1. | ಮಂಗಳ | 1 |
| 2. | ಬ್ರಹ್ಮವೇ ವಿಷಯಿ, ಅದರ ಜ್ಞಾನದಿಂದಲೇ ಮೋಕ್ಷ | 2 |
| 3. | ಬ್ರಹ್ಮವೊಂದೇ ಪರಮಾರ್ಥಸುಖ | 5 |
| 4. | ಸಮಷ್ಟಿವ್ಯಷ್ಟಿಭೇದದಿಂದ ಜೀವೇಶ್ವರವ್ಯವಹಾರ | 7 |
| 5. | ಜ್ಞಾನವೇ ಮೋಕ್ಷಸಾಧನ, ಕರ್ಮೋಪಾಸನೆಗಳಲ್ಲ | 8 |
| 6. | ಬ್ರಹ್ಮವನ್ನೇ ಶ್ರವಣಮನನನಿದಿಧ್ಯಾಸನಗಳಿಂದ ಅರಿಯಬೇಕು | 9 |
| 7. | ಮೋಕ್ಷಕ್ಕೆ ಜ್ಞಾನವೇ ಸಾಕ್ಷಾತ್ಕಾರಣ | 11 |
| 8. | ಬ್ರಹ್ಮದಲ್ಲಿಯೇ ಸುಖ, ಸಂಸಾರದಲ್ಲಿಲ್ಲ | 13 |
| 9. | ಬ್ರಹ್ಮವೊಂದನ್ನೇ ಅರಿತುಕೊಳ್ಳಬೇಕು | 15 |
| 10. | ಬ್ರಹ್ಮವೇ ಜೀವ, ಜೀವನೇ ಬ್ರಹ್ಮ | 16 |
| 11. | ಬ್ರಹ್ಮಜ್ಞಾನವು ಅನಾಯಾಸಲಭ್ಯ | 17 |
| 12. | ಸರ್ವಕರ್ಮತ್ಯಾಗಪೂರ್ವಕವಾಗಿ ಬ್ರಹ್ಮವನ್ನೇ ಅರಿತುಕೊಳ್ಳಬೇಕು | 18 |
| 13. | ಅದ್ವೈತಜ್ಞಾನವೇ ಆತ್ಯಂತಿಕ ಮೋಕ್ಷಸಾಧನ | 18 |
| 14. | ಜ್ಞಾನವಾಗುವದಕ್ಕೆ ಕರ್ಮಾದಿಗಳೂ ಬೇಕು | 22 |
| 15. | ಜ್ಞಾನವಾದಮೇಲೆ ಮತ್ತೆ ಯಾವ ಸಾಧನವೂ ಬೇಡ | 23 |
| 16. | ಜ್ಞಾನಿಗೆ ಕರ್ಮಬಂಧವಿಲ್ಲ | 26 |
| 17. | ಬ್ರಹ್ಮದ ಅದ್ವಿತೀಯತ್ವ | 29 |
| 18. | ಮೋಕ್ಷಕ್ಕಾಗಿ ಮಾಡಬೇಕಾದ ಸಾಧನ | 40 |
| 19. | ಹಿಂದಿನ ಶ್ಲೋಕದ್ವಯದ ವಿವರಣೆ | 43 |
| 20. | ಆತ್ಮಜ್ಞಾನದಿಂದಲೇ ಮುಕ್ತಿ | 71 |
| 21. | ಮುಮುಕ್ಷುತ್ವವು ಈಶ್ವರಾನುಗ್ರಹದಿಂದಲೇ ಉಂಟಾಗುವದು | 72 |
| 22. | ಜ್ಞಾನದಿಂದಲೇ ಜನ್ಮಸಾರ್ಥಕ್ಯ | 73 |
| 23. | ಬ್ರಹ್ಮಜ್ಞಾನವನ್ನು ಸಂಪಾದಿಸುವದು ಬಹುಸುಲಭ | 73 |
| 24. | ಬ್ರಹ್ಮಜ್ಞಾನದಿಂದಲೇ ಪರಮಪುರುಷಾರ್ಥ | 75 |
| 25. | ಪ್ರಕರಣಾರ್ಥೋಪಸಂಹಾರ | 77 |
| 26. | ಶ್ಲೋಕಾನುಕ್ರಮಣಿಕೆ | 89 |

|| ಓಂ ||

# ವೇದಾಂತ ಡಿಂಡಿಮ

## ಮಂಗಲ

**ವೇದಾನ್ತಡಿಣ್ಡಿಮಾಸ್ತತ್ತ್ವಮೇಕಮುದ್ಘೋಷಯನ್ತಿ ಯತ್ ।**
**ಆಸ್ತಾಂ ಪುರಸ್ತಾತ್ ತತ್ತೇಜೋ ದಕ್ಷಿಣಾಮೂರ್ತಿಸಂಜ್ಞಿತಮ್ ॥೧॥**

೧. ವೇದಾಂತದ ಡಂಗುರಗಳು ಯಾವ ತತ್ತ್ವವೊಂದನ್ನೇ ಸಾರುತ್ತಲಿರುವವೋ ಆ ದಕ್ಷಿಣಾಮೂರ್ತಿ ಎಂಬ ಹೆಸರಿನ ತೇಜಸ್ಸು ನಮ್ಮ ಮುಂದಿರಲಿ!

### ವಿವರಣೆ

**ವೇದಾಂತಗಳೆಂದರೆ ಉಪನಿಷತ್ತುಗಳು.** ಅವು ಪರಬ್ರಹ್ಮರೂಪವೆಂಬ ಒಂದೇ ತತ್ತ್ವವನ್ನು ತಾತ್ಪರ್ಯದಿಂದ ತಿಳಿಸುತ್ತವೆಯಾದ್ದರಿಂದ ಅವನ್ನು ಇಲ್ಲಿ ಸಾರುವ ತಮಟೆಯಂಥ ವಾದ್ಯಕ್ಕೆ ಹೋಲಿಸಿರುತದೆ. ಯಾವ ಉಪನಿಷತ್ತಿನಲ್ಲಿಯೂ ಪರಬ್ರಹ್ಮಕ್ಕಿಂತ ಬೇರೆಯಾದ ತತ್ತ್ವವನ್ನು ಪರಮ ತಾತ್ಪರ್ಯದಿಂದ ಪ್ರತಿಪಾದಿಸಿರುವದಿಲ್ಲ; ಹಾಗೆ ಪ್ರತಿಪಾದಿಸಿದ್ದರೆ ಅದು ಉಪನಿಷತ್ತೆಂಬ ಹೆಸರಿಗೆ ಅರ್ಹವಾದ ಗ್ರಂಥವೇ ಅಲ್ಲ. ಏಕೆಂದರೆ ಉಪನಿಷತ್ತು ಎಂದರೆ ಬ್ರಹ್ಮವಿದ್ಯೆ; ಆ ವಿದ್ಯೆಯನ್ನು ತಿಳಿಸುವ ಗ್ರಂಥವೂ ಉಪನಿಷತ್ತು ಎನಿಸುತ್ತದೆ. ಉಪನಿಷತ್ತುಗಳು ಸಾಮಾನ್ಯವಾಗಿ ವೇದದ ಬ್ರಾಹ್ಮಣಭಾಗದ ಕೊನೆಯಲ್ಲಿಯೇ ಇರುವದರಿಂದ 'ವೇದಾಂತ'ವೆನಿಸಿರುತ್ತವೆ. ವೇದಾರ್ಥವಾದ ತತ್ತ್ವದ ನಿರ್ಣಯವು ಈ ಗ್ರಂಥಗಳಲ್ಲಿರುವದರಿಂದ **ವೇದಾಂತಗಳೆಂಬ** ಹೆಸರು ಇವಕ್ಕೆ ಬಂದಿದೆ ಎಂದೂ ಹೇಳಬಹುದು.

ಆ ತತ್ತ್ವವೇ ಸಚ್ಚಿದಾನಂದರೂಪವಾದ ನಿಜವಾದ ತೇಜಸ್ಸು; ಏಕೆಂದರೆ ಸೂರ್ಯ, ಚಂದ್ರ, ನಕ್ಷತ್ರ, ಅಗ್ನಿ , ಮಿಂಚು- ಮುಂತಾದ ತೇಜಸ್ಸುಗಳೂ ಆ ತೇಜಸ್ಸನ್ನೇ ಅನುಸರಿಸಿ ಬೆಳಗುತ್ತವೆ. ಗ್ರಂಥಕಾರನು ಆ ತೇಜಸ್ಸಿಗೆ ದಕ್ಷಿಣಾಮೂರ್ತಿ ಎಂಬ ಹೆಸರನ್ನು ಕೊಟ್ಟಿರುತ್ತಾನೆ. ದಕ್ಷಿಣ ದಿಕ್ಕಿಗೆ ಅಭಿಮುಖವಾಗಿರುವ ವಿಗ್ರಹವುಳ್ಳವನಾದ್ದರಿಂದ ಶಿವನಿಗೆ ದಕ್ಷಿಣಾಮೂರ್ತಿ ಎಂಬ ಹೆಸರು ಪ್ರಸಿದ್ಧವಾಗಿದೆ. ಸನಕಾದಿಗಳಿಗೆ ಉಪದೇಶಮಾಡುವದಕ್ಕಾಗಿ ಪರಮಶಿವನು ಧರಿಸಿದ ಲೀಲಾವಿಗ್ರಹವು ದಕ್ಷಿಣದಿಕ್ಕಿಗೆ

ಅಭಿಮುಖವಾಗಿದ್ದದ್ದರಿಂದ ಈ ಹೆಸರಿನಿಂದ ಪ್ರಸಿದ್ಧವಾಯಿತು. ವೇದಾಂತದಲ್ಲಿ ತಾತ್ಪರ್ಯದಿಂದ ಪ್ರತಿಪಾದಿತವಾಗಿರುವ ನಿರಾಕಾರನಿರ್ಗುಣಪರಬ್ರಹ್ಮವೇ ಉಪಾಸಕರ ಅನುಗ್ರಹಾರ್ಥವಾಗಿ ಲೀಲಾಶರೀರವನ್ನು ಧರಿಸಿ ಸಾಕಾರವೂ ಸಗುಣವೂ ಆಗಿ ಮನೋವಾಕ್ಕುಗಳಿಗೆ ಗೋಚರವಾಗುತ್ತದೆ ಎಂಬುದನ್ನು ತಿಳಿಸುವದಕ್ಕಾಗಿ ದಕ್ಷಿಣಾ ಮೂರ್ತಿ ಎಂಬ ಹೆಸರಿನ ತೇಜಸ್ಸು ಎಂದಿರುತ್ತದೆ. ಪರಮಾತ್ಮನಿಗೆ ಸ್ವತಃ ಯಾವ ನಾಮವೂ ರೂಪವೂ ಇಲ್ಲದಿದ್ದರೂ ಆತನು ಸಾಧಕರನ್ನು ಅನುಗ್ರಹಿಸುವದಕ್ಕಾಗಿ ಮಾಯೆಯಿಂದ ಆಯಾ ನಾಮರೂಪಗಳನ್ನು ಧರಿಸುತ್ತಾನೆ ; ಆಯಾ ಸಾಧಕರು ಆಯಾ ನಾಮರೂಪಗಳಿಂದ ಆತನನ್ನು ಉಪಾಸನೆಮಾಡುತ್ತಾರೆ.

ಇಂಥ ಚೈತನ್ಯಪ್ರಕಾಶರೂಪವಾದ ವಸ್ತುವು ಸ್ವರೂಪದಿಂದ ಅಗೋಚರವೇ ಆದರೂ ನನಗೆ ದಕ್ಷಿಣಾಮೂರ್ತಿರೂಪದಿಂದ ಮುಂದೆ ತೋರಿಕೊಂಡು ಅನುಗ್ರಹಿಸಲಿ ಎಂದು ಗ್ರಂಥಕರ್ತನು ಪ್ರಾರ್ಥಿಸಿರುತ್ತಾನೆ. ಅಥವಾ ಈ ಗ್ರಂಥವು ಮುಗಿಯುವವರೆಗೂ ಅದು ನನ್ನ ಮನಸ್ಸಿಗೆ ತನ್ನ ಅನುಸಂಧಾನವನ್ನೇ ಕೊಟ್ಟು ಅನುಗ್ರಹಿಸಲಿ ಎಂದು ಪ್ರಾರ್ಥಿಸಿರುತ್ತಾನೆ. ಅಥವಾ ಆ ದಕ್ಷಿಣಾಮೂರ್ತಿಸಂಜ್ಞಕವಾದ ಪರಮೇಶ್ವರರೂಪವಾದ ಚಿತ್ಪ್ರಕಾಶವು ಶಿಷ್ಯರಿಗೆ ಸಾಕ್ಷಾತ್ಕಾರವಾಗಲಿ!- ಎಂದು ಆಶೀರ್ವಾದರೂಪವಾದ ಮಂಗಲವನ್ನು ಮಾಡಿರುತ್ತಾನೆ ಎಂದೂ ಹೇಳಬಹುದು.

ಹೇಗೇ ಆಗಲಿ, ಅನುಸಂಧಾನಮಾಡುವ ಅಧಿಕಾರಿಗಳಿಗೆ ಪರಬ್ರಹ್ಮ ಜ್ಞಾನವನ್ನುಂಟು ಮಾಡುವ ವೇದಾಂತಡಿಂಡಿಮವೆಂಬ ಈ ಪ್ರಕರಣವನ್ನು ಪ್ರಾರಂಭಿಸಿರುತ್ತೇನೆ- ಎಂಬ ಭಾವವುಳ್ಳ ಮಂಗಲವಚನವಿದು.

## ಬ್ರಹ್ಮವೇ ವಿಷಯಿ, ಅದರ ಜ್ಞಾನದಿಂದಲೇ ಮೋಕ್ಷ

**ಆತ್ಮಾನಾತ್ಮಪದಾರ್ಥೌ ದ್ವೌ ಭೋಕ್ತೃಭೋಗ್ಯತ್ವಲಕ್ಷಣೌ ।**
**ಬ್ರಹ್ಮೈವಾತ್ಮಾ ನ ದೇಹಾದಿರಿತಿ ವೇದಾನ್ತಡಿಣ್ಡಿಮಃ ॥೨॥**

೨. ಆತ್ಮ, ಅನಾತ್ಮ - ಎಂದು ಎರಡು ಪದಾರ್ಥಗಳುಂಟು. ಇವುಗಳಲ್ಲಿ ಒಂದು ಭೋಕ್ತೃ , ಮತ್ತೊಂದು ಭೋಗ್ಯವು. ಬ್ರಹ್ಮವೇ ಆತ್ಮನು, ದೇಹಾದಿಗಳಲ್ಲ- ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಆತ್ಮ , ಅನಾತ್ಮ-ಎಂಬ ಪದಾರ್ಥವಿವೇಕವನ್ನು ಜಿಜ್ಞಾಸುಗಳು ಮೊದಲು ಮಾಡಿ ಕೊಳ್ಳಬೇಕು. ಆತ್ಮನೆಂದರೆ ತಾನು. ಅನಾತ್ಮನೆಂದರೆ ತಾನಲ್ಲದ್ದು , ತಾನೆಂಬುದು ಯಾವದು?- ಎಂಬುದನ್ನು ತಿಳಿದುಕೊಳ್ಳುವದು ಹೇಗೆ? ಎಂದರೆ ಭೋಕ್ತೃವಾಗಿರು

ವವನು ತಾನು, ಭೋಗ್ಯವಾಗಿರುವದು ತಾನಲ್ಲದ್ದು. ಯಾವದು ಭೋಗ್ಯವಾಗಿರುವದೋ, ಯಾವದು ನನ್ನದು ಎಂದು ಕರೆಯುವುದಕ್ಕೆ ಬರುವದೋ, ಅದು ತಾನಲ್ಲದ್ದು; ಯಾವದು ನನ್ನದು ಎನ್ನುವದಕ್ಕೆ ಆಗಲಾರದೋ ಅದೇ ತಾನು. ಈ ಲಕ್ಷಣದಿಂದ ನೋಡಿದರೆ ದೇಹವೇ ಮುಂತಾದವುಗಳು ಯಾವವೂ ತಾನಲ್ಲವೆಂದಾಗುತ್ತದೆ. ಬ್ರಹ್ಮವೇ ನಿಜವಾಗಿ ತಾನು. ಬ್ರಹ್ಮವು ಎಲ್ಲಕ್ಕೂ ಒಳಗಿನ ಆತ್ಮನು ; ಆತ್ಮನನ್ನು 'ನನ್ನ ಆತ್ಮನು' ಎಂದು ವ್ಯವಹರಿಸುವದಿಲ್ಲವೆ?- ಎಂದು ಯಾರಾದರೂ ಕೇಳಬಹುದು. ಹಾಗೆ ವ್ಯವಹರಿಸುವದುಂಟು ; ಆದರೆ ಆ ಪ್ರಯೋಗವು ಅಜ್ಞ ವ್ಯವಹಾರದಿಂದ ಅಥವಾ ಗೌಣವ್ಯವಹಾರದಿಂದ ಆಗಿರುತ್ತದೆ. ಜನರಿಗೆ ತಮ್ಮ ಸ್ವರೂಪವು ಯಾವದು ಎಂದು ಗೊತ್ತಿಲ್ಲದೆ ದೇಹಾದಿಗಳಲ್ಲಿಯೂ ತಪ್ಪಾಗಿ ಆತ್ಮಬುದ್ಧಿಯಾಗುತ್ತಿರುವದರಿಂದ 'ನನ್ನ ನಿಜವಾದ ಆತ್ಮನು ಯಾರು'- ಎಂದು ಅಜ್ಞರು ಕೇಳಬಹುದು. ಅಥವಾ ಕಲ್ಲಿನ ಬೊಂಬೆ ಎನ್ನುವಂತೆ ನನ್ನ ಆತ್ಮ ಎಂದು ಗೌಣವಾಗಿಯೂ ವ್ಯವಹರಿಸಬಹುದು. ಏಕೆಂದರೆ ಕಲ್ಲೇ ಬೊಂಬೆಯಾಗಿರುವಂತೆ ನಾನು ಎಂಬುದೇ ನಿಜವಾಗಿ ಆತ್ಮನಾಗಿರುವದರಿಂದ, ನನ್ನ ಆತ್ಮ ಎಂದು ಮುಖ್ಯಾರ್ಥದಲ್ಲಿ ನಾನು, ಆತ್ಮ- ಎಂಬ ಎರಡು ಪದಾರ್ಥಗಳನ್ನು ತೋರಿಸುವದಕ್ಕೆ ಆಗುವದಿಲ್ಲ.

ಬ್ರಹ್ಮವೇ ಆತ್ಮನೆಂಬುದನ್ನು ತೈತ್ತಿರೀಯದಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ ಒಂದಕ್ಕಿಂತ ಒಂದು ಒಳಗಿರುವ ಮಿಥ್ಯಾತ್ಮರನ್ನು ತೋರಿಸಿದ ಬಳಿಕ 'ಬ್ರಹ್ಮ ಪುಚ್ಛಂ ಪ್ರತಿಷ್ಠಾ' (ಬ್ರಹ್ಮವೇ ಈ ಭೋಕ್ತೃವಾದ ಆನಂದಮಯನಿಗೆ ಪುಚ್ಛವು, ಪ್ರತಿಷ್ಠೆಯು, ತೈ. ೨-೨-೫) ಎಂದು ಎಲ್ಲಕ್ಕೂ ಒಳಗಿನ ಆತ್ಮವು ಬ್ರಹ್ಮವೇ ಎಂದು ಹೇಳಿದೆ. 'ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ ಯ ಆತ್ಮಾ ಸರ್ವಾನ್ತರಃ' (ಅದು ನೇರಾಗಿ ಅಪರೋಕ್ಷವಾಗಿರುವ ಬ್ರಹ್ಮವು, ಅದು ಎಲ್ಲಕ್ಕೂ ಒಳಗಿನ ಆತ್ಮನು, ಬೃ. ೩-೪-೧) ಎಂದು ತಿಳಿಸಿದೆ. ಹೀಗೆ ವೇದಾಂತಗಳಲ್ಲಿ- ಉಪನಿಷತ್ತುಗಳಲ್ಲಿ- ಬ್ರಹ್ಮವೇ ಆತ್ಮನೆಂದು ಸಾರಿಸಾರಿ ಹೇಳಿರುತ್ತದೆ.

**ಜ್ಞಾನಾಜ್ಞಾನಪದಾರ್ಥೌ ದ್ವಾವಾತ್ಮನೋ ಬನ್ಧಮುಕ್ತಿದೌ ।**
**ಜ್ಞಾನಂ ಮುಕ್ತಿರ್ನಿಬನ್ಧೋಽನ್ಯದಿತಿ ವೇದಾನ್ತಡಿಣ್ಡಿಮಃ ॥೩॥**

೩. ಜ್ಞಾನ, ಅಜ್ಞಾನ- ಎಂದು ಎರಡು ಪದಾರ್ಥಗಳುಂಟು. ಇವುಗಳಲ್ಲಿ ಒಂದು ಆತ್ಮನಿಗೆ ಬಂಧವನ್ನೂ ಮತ್ತೊಂದು ಮುಕ್ತಿಯನ್ನೂ ಕೊಡುವದು. ಜ್ಞಾನವೇ ಮುಕ್ತಿಯು, ಮತ್ತೊಂದೇ ಬಂಧವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಹಿಂದೆ ಹೇಳಿರುವ ಆತ್ಮಾನಾತ್ಮವಿವೇಕಜ್ಞಾನದಿಂದ ಆಗುವ ಪ್ರಯೋಜನವನ್ನು ಇಲ್ಲಿ ಹೇಳಿರುತ್ತದೆ.

ಆತ್ಮಾನಾತ್ಮಗಳ ಸ್ವರೂಪವನ್ನು ನಿಶ್ಚಯಿಸುವದೇ ಜ್ಞಾನವು. ಈ ಆತ್ಮಾನಾತ್ಮಗಳನ್ನು ಒಂದರಿಂದೊಂದನ್ನು ವಿಂಗಡಿಸಿಕೊಳ್ಳದೆ ಒಂದರಲ್ಲಿ ಮತ್ತೊಂದನ್ನೂ ಒಂದರಲ್ಲಿ ಮತ್ತೊಂದರ ಧರ್ಮಗಳನ್ನೂ ಅಧ್ಯಾರೋಪ ಮಾಡಿಕೊಂಡು ನಾನು, ನನ್ನದು- ಎಂಬ ವ್ಯವಹಾರಕ್ಕೆ ಕಾರಣವಾಗಿರುವ ಬುದ್ಧಿಯೇ ಅಜ್ಞಾನವು. ಜ್ಞಾನ, ವಿದ್ಯೆ, ಸಮ್ಯಗ್ದರ್ಶನ- ಇವುಗಳೆಲ್ಲ ಪರ್ಯಾಯಗಳು ; ಅಜ್ಞಾನ, ಅವಿದ್ಯೆ, ಮಿಥ್ಯಾಜ್ಞಾನ, ಮಿಥ್ಯಾಪ್ರತ್ಯಯ, ಅಧ್ಯಾಸ, ಭ್ರಾಂತಿ- ಇವೂ ಪರ್ಯಾಯಗಳು.

ಇವೆರಡೂ ಬಂಧಮುಕ್ತಿಗಳಿಗೆ ಕಾರಣವಾಗಿರುತ್ತವೆ. ಹೇಗೆಂದರೆ ಜ್ಞಾನವೇ ಮುಕ್ತಿ, ಎಂದರೆ ಜ್ಞಾನದಿಂದಲೇ ಮುಕ್ತಿಯಾಗುವದು. ಹೀಗೆಯೇ ಅಜ್ಞಾನವೇ ಬಂಧವು, ಎಂದರೆ ಬಂಧಕ್ಕೆ ಕಾರಣವು.

ಹೀಗೆ ಜ್ಞಾನವು ಮೋಕ್ಷಕ್ಕೂ ಅಜ್ಞಾನವು ಬಂಧಕ್ಕೂ ಕಾರಣವೆಂಬುದನ್ನು ವೇದಾಂತಗಳಲ್ಲಿ ಸಾರಿರುತ್ತದೆ. 'ತರತಿ ಶೋಕಮಾತ್ಮವಿತ್' (ಆತ್ಮನನ್ನು ಅರಿತುಕೊಂಡವನು ಶೋಕವನ್ನು ದಾಟುವನು, ಛಾಂ. ೭-೧-೩), 'ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ' (ಆ ದೇವನನ್ನು ಅರಿತುಕೊಂಡರೆ ಎಲ್ಲಾ ಪಾಶಗಳಿಂದಲೂ ಬಿಡುಗಡೆಯನ್ನು ಹೊಂದುವನು, ಶ್ವೇ. ೬-೧೩), 'ತಮೇವ ವಿದಿತ್ವಾಽತಿಮೃತ್ಯುಮೇತಿ' (ಅವನನ್ನೇ ಅರಿತುಕೊಂಡರೆ ಅತಿಮೃತ್ಯುವನ್ನು ಹೊಂದುವನು, ಶ್ವೇ. ೬-೧೫), 'ಅಸುರ್ಯಾ ನಾಮ ತೇ ಲೋಕಾಃ' (ಅವರು ಅಸುರ್ಯವೆಂಬ ಲೋಕಗಳನ್ನು ಪಡೆಯುವರು, ಈ. ೩)- ಮುಂತಾದ ವಚನಗಳು ಇದಕ್ಕೆ ಪ್ರಮಾಣವು.

**ಜ್ಞಾತೃಜ್ಞೇಯಪದಾರ್ಥೌ ದ್ವೌ ಭಾಸ್ಯಭಾಸಕಲಕ್ಷಣೌ[1]।**
**ಜ್ಞಾತಾ ಬ್ರಹ್ಮ ಜಗಜ್ಜ್ಞೇಯಮಿತಿ ವೇದಾನ್ತಡಿಣ್ಡಿಮಃ ॥೪॥**

೪. ಜ್ಞಾತೃ, ಜ್ಞೇಯ- ಎಂದು ಎರಡು ಪದಾರ್ಥಗಳು. ಇವುಗಳಲ್ಲಿ ಒಂದು ಭಾಸ್ಯ, ಮತ್ತೊಂದು ಭಾಸಕ. ಬ್ರಹ್ಮವೇ ಜ್ಞಾತೃ, ಜಗತ್ತೇಜ್ಞೇಯವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಆತ್ಮನು ಭೋಕ್ತೃವೆಂದೂ ಆತ್ಮಜ್ಞಾನದಿಂದ ಮೋಕ್ಷವೆಂದೂ ಹೇಳಿದ್ದರಿಂದ

1. ಇದು ಕೆಲವು ಪುಸ್ತಕಗಳಲ್ಲಿ ಮೂರನೆಯ ಶ್ಲೋಕವಾಗಿದೆ.

ಕ್ರಿಯಾಫಲಭೋಕ್ತೃತ್ವೇ ಆತ್ಮಸ್ವರೂಪವೆಂತಲೂ ಆ ಆತ್ಮಸ್ವರೂಪದ ಜ್ಞಾನದಿಂದಲೇ ಮೋಕ್ಷವೆಂತಲೂ ಯಾರಾದರೂ ತಪ್ಪಾಗಿ ತಿಳಿದುಕೊಂಡಾರೆಂದು ಆತ್ಮಸ್ವರೂಪವನ್ನು ಇಲ್ಲಿ ಸ್ಪಷ್ಟಪಡಿಸಿ ಹೇಳಿರುತ್ತದೆ.

ಜ್ಞಾತೃವೆಂದರೆ ಭಾಸಕವು, ಬೆಳಗುವ ಸ್ವಭಾವದ್ದು, ಅರಿಯುವದು ; ಜ್ಞೇಯವೆಂದರೆ ಭಾಸ್ಯವು , ಬೆಳಗಲ್ಪಡತಕ್ಕದ್ದು , ಅರಿಯಲ್ಪಡತಕ್ಕದ್ದು . ಜ್ಞಾತೃ, ವಿಷಯಿ ; ಜ್ಞೇಯ , ವಿಷಯ– ಎಂದು ಪರ್ಯಾಯಗಳು. ಜಿಜ್ಞಾಸುವಿನ ಆತ್ಮನಾಗಿರುವ ಬ್ರಹ್ಮವೇ ಜ್ಞಾತೃ , ವಿಷಯಿ; ಆ ಆತ್ಮನ ಅರಿವಿಗೆ ಗೋಚರವಾಗಿರುವ ಜಗತ್ತೇ ಜ್ಞೇಯ, ವಿಷಯವು. ಬ್ರಹ್ಮಕ್ಕಿಂತ ಬೇರೆಯಾದದ್ದೆಲ್ಲವೂ ವಿಷಯವೇ ಹೊರತು ವಿಷಯಿಯಲ್ಲ ಎಂದು ತಿಳಿಯಬೇಕು. ಆದ್ದರಿಂದ ದೇಹ, ಇಂದ್ರಿಯ, ಪ್ರಾಣ, ಮನಸ್ಸು- ಇವುಗಳೂ ವಿಷಯವೇ ಎಂದಾಯಿತು.

ಇದಕ್ಕೆ ವೇದಾಂತಡಂಗುರವು ಪ್ರಮಾಣವು. 'ನಾನ್ಯೋಽತೋಽಸ್ತಿ ವಿಜ್ಞಾತಾ' (ಇವನಿಗಿಂತ ಬೇರೆಯಾದ ವಿಜ್ಞಾತೃವಿಲ್ಲ, ಬೃ. ೩-೭-೨೩), 'ತಮೇವ ಭಾನ್ತಮನುಭಾತಿ ಸರ್ವಮ್' (ಅವನು ಬೆಳಗುತ್ತಿರಲು ಅವನನ್ನೇ ಅನುಸರಿಸಿ ಮಿಕ್ಕದ್ದೆಲ್ಲವೂ ಬೆಳಗುತ್ತಿರುವದು, ಮುಂ. ೨-೨-೧೦), 'ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ' (ಶ್ರೋತ್ರಕ್ಕೂ ಶ್ರೋತ್ರವು, ಮನಸ್ಸಿಗೂ ಮನಸ್ಸು, ವಾಕ್ಕಿಗೂ ವಾಕ್ಕು, ಮತ್ತು ಅವನು ಪ್ರಾಣಕ್ಕೂ ಪ್ರಾಣವು, ಕೇ. ೧-೨)- ಮುಂತಾದ ಶ್ರುತಿಗಳಿವೆ.

## ಬ್ರಹ್ಮವೊಂದೇ ಪರಮಾರ್ಥಸುಖ

**ಸುಖದುಃಖಪದಾರ್ಥೌ ದ್ವೌ ಪ್ರಿಯವಿಪ್ರಿಯಕಾರಕೌ ।**
**ಸುಖಂ ಬ್ರಹ್ಮ ಜಗದ್ದುಃಖಮಿತಿ ವೇದಾನ್ತಡಿಣ್ಡಿಮಃ ॥೫॥**

೫. ಸುಖ, ದುಃಖ- ಎಂದು ಎರಡು ಪದಾರ್ಥಗಳು; ಅವುಗಳಲ್ಲಿ ಒಂದು ಪ್ರಿಯವನ್ನುಂಟುಮಾಡುವದು, ಇನ್ನೊಂದು ಅಪ್ರಿಯವನ್ನುಂಟುಮಾಡುವದು. ಬ್ರಹ್ಮವೇ ಸುಖವು, ಜಗತ್ತು ದುಃಖವು- ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಬ್ರಹ್ಮ, ಜಗತ್ತು- ಎಂದು ಎರಡು ಪದಾರ್ಥಗಳಿವೆಯೆಂದೂ ಬ್ರಹ್ಮಜ್ಞಾನದಿಂದಲೇ

ಮುಕ್ತಿಯೆಂದೂ ಹಿಂದೆ ಹೇಳಿದೆ. ಆದರೆ ಜಗತ್ತಿನ ಜ್ಞಾನದಿಂದಲೂ ಏತಕ್ಕೆ ಮುಕ್ತಿಯಿಲ್ಲ? ಎಂದರೆ ಅದಕ್ಕೆ ಉತ್ತರವು ಈ ಶ್ಲೋಕದಲ್ಲಿದೆ.

ಯಾವದು ಪ್ರಿಯವಾಗಿರುವದೋ ಅದು ಸುಖವನ್ನುಂಟುಮಾಡುತ್ತದೆ, ಯಾವದು ವಿಪ್ರಿಯವಾಗಿರುವದೋ ಅದು ದುಃಖವನ್ನುಂಟುಮಾಡುತ್ತದೆ. ಆದ್ದರಿಂದ ಯಾವದರಿಂದ ದುಃಖವಾಗುವದೋ ಅದು ಪ್ರಿಯವಲ್ಲ; ಜಗತ್ತಿನಿಂದ ದುಃಖವೇ ಆಗುತ್ತಿರುವದರಿಂದ ಅದು ಪ್ರಿಯವಲ್ಲ. ಪ್ರಿಯವೇ ನಮಗೆ ಸುಖವನ್ನು ಕೊಡತಕ್ಕದ್ದು; ಬ್ರಹ್ಮವು ನಿತ್ಯವು, ಪ್ರಿಯವಾಗಿದೆ, ಆದ್ದರಿಂದ ಅದು ನಿತ್ಯಸುಖವನ್ನು ಕೊಡತಕ್ಕದ್ದು. ಆದ್ದರಿಂದ ಬ್ರಹ್ಮಜ್ಞಾನದಿಂದಲೇ ನಮಗೆ ನಿತ್ಯಪ್ರಿಯವಾದ ಬ್ರಹ್ಮಪ್ರಾಪ್ತಿಯಾಗುತ್ತದೆ; ಆದ್ದರಿಂದ ಆ ಜ್ಞಾನದಿಂದಲೇ ಪರಮಪುರುಷಾರ್ಥವಾದ ಮುಕ್ತಿಯುಂಟಾಗುತ್ತದೆ ಎಂದು ಹೇಳಲಾಯಿತು.

ಇಲ್ಲಿ ಒಂದು ಶಂಕೆ. ಜಗತ್ತಿನಲ್ಲಿ ಬರಿಯ ದುಃಖವೇ ಇರುವದಿಲ್ಲ; ಸುಖವನ್ನು ಕೊಡುವ ಪ್ರಿಯವಸ್ತುಗಳೂ ಇವೆ. ಹೆಂಡತಿ, ಮಗ, ಹಣ, ಮನೆ- ಮುಂತಾದ ಪ್ರಿಯವಸ್ತುಗಳು ಎಷ್ಟಿಲ್ಲ? ಸುಖವನ್ನುಂಟುಮಾಡುವ ಆಹಾರ, ವಿಹಾರ, ನೋಟಗಳು, ವಿದ್ಯೆ, ಕೀರ್ತಿ- ಮುಂತಾದವುಗಳಿಲ್ಲವೆ? ಹೀಗಿರುವಲ್ಲಿ ಜಗತ್ತೆಲ್ಲವೂ ದುಃಖಮಯವೆನ್ನಬಹುದೆ? ಈ ಶಂಕೆಗೆ ಪರಿಹಾರವೇನೆಂದರೆ, ಜಗತ್ತಿನಲ್ಲಿ ಪ್ರಿಯವಾದ ವಸ್ತುಗಳೆಂದು ನಮಗೆ ತೋರುವವು ಕಾಲಾಂತರದಲ್ಲಿ ವಿಪ್ರಿಯಗಳಾಗಿ ಪರಿಣಮಿಸುವವು; ಜಗತ್ತಿನಲ್ಲಿ ಯಾವದೊಂದೂ ಇದ್ದಂತೆ ಇರುವದೇ ಇಲ್ಲ. ಆದ್ದರಿಂದ ನಿತ್ಯಸುಖವನ್ನು ಕೊಡುವ ಪ್ರಿಯವಸ್ತುಗಳು ಜಗತ್ತಿನಲ್ಲಿಲ್ಲ. ಇಷ್ಟೇ ಅಲ್ಲ; ಜಗತ್ತಿನಲ್ಲಿ ಪ್ರಿಯವೆಂದು ತೋರುವ ವಸ್ತುವೆಲ್ಲವೂ ತನತನಗಾಗಿ ಪ್ರಿಯವಾಗಿರುವದಿಲ್ಲ; ಹೆಂಡತಿಯು ಹೆಂಡತಿಗಾಗಿ ಬೇಕಾಗಿರುವದಿಲ್ಲ; ಮಗನು ಮಗನಿಗಾಗಿ ಬೇಕಾಗಿರುವದಿಲ್ಲ; ಹಣವು ಹಣಕ್ಕಾಗಿ ಬೇಕಾಗಿರುವದಿಲ್ಲ. ಇವೆಲ್ಲವೂ ಆತ್ಮನಿಗಾಗಿ ಎಂದರೆ ಜಿಜ್ಞಾಸುವಿನ ಸ್ವರೂಪಕ್ಕೇ ಬೇಕಾಗಿವೆ. ಆದ್ದರಿಂದ ಆತ್ಮನೇ ಇವೆಲ್ಲಕ್ಕಿಂತಲೂ ಪ್ರಿಯವಾಯಿತು. ಮತ್ತು ದೇಹಾದಿಗಳನ್ನು ನಾವು ಆತ್ಮನೆಂದು ಕಲ್ಪಿಸಿದರೂ ಅವುಗಳೂ ತಮತಮಗಾಗಿ ಪ್ರಿಯವಾಗಿಲ್ಲ; ಒಳಗೊಳಗೆ ಇರುವ ಮತ್ತೊಂದಕ್ಕಾಗಿಯೇ ಅವು ಬೇಕಾಗಿವೆ. ಹೀಗೆ ನೋಡಿದರೆ ಎಲ್ಲಕ್ಕೂ ಒಳಗಿರುವ ಆತ್ಮನಿಗೋಸ್ಕರವಾಗಿಯೇ ಎಲ್ಲವೂ ಬೇಕಾಗಿರುವದರಿಂದ ಸರ್ವಾಂತರನಾದ ನಮ್ಮೆಲ್ಲರ ಆತ್ಮನಾಗಿರುವ ಬ್ರಹ್ಮವೇ ಎಲ್ಲಕ್ಕಿಂತಲೂ ಪ್ರಿಯತಮವೆಂದೂ ಆದ್ದರಿಂದಲೇ ಅದರ ಪ್ರಾಪ್ತಿಯಿಂದಲೇ ನಿತ್ಯಸುಖ ಉಂಟಾಗುವದೆಂದೂ ಗೊತ್ತಾಗುತ್ತದೆ. 'ತದೇತತ್ಪ್ರೇಯಃ ಪುತ್ರಾತ್ ಪ್ರೇಯೋ ವಿತ್ತಾತ್ ಪ್ರೇಯೋಽನ್ಯಸ್ಮಾತ್ ಸರ್ವಸ್ಮಾದನ್ತರತರಂ ಯದಯ ಮಾತ್ಮಾ' (ಆ ಈ ಆತ್ಮನು ಎಲ್ಲಕ್ಕೂ

ಒಳಗಿರುತ್ತಾನಾದ್ದರಿಂದ ಪುತ್ರನಿಗಿಂತಲೂ ಪ್ರಿಯನು, ವಿತ್ತಕ್ಕಿಂತಲೂ ಪ್ರಿಯನು, ಮಿಕ್ಕ ಎಲ್ಲದಕ್ಕಿಂತಲೂ ಪ್ರಿಯನು; ಬೃ. ೧-೪-೮), 'ಪ್ರಿಯಗ್ಂ ರೋತ್ಸ್ಯತಿ' (ಅನಾತ್ಮರೂಪವಾದ ಪ್ರಿಯವು ನಾಶವಾಗುವದು, ಬೃ. ೧-೪-೮)- ಎಂಬುದೇ ಮುಂತಾದ ವೇದಾಂತವಾಕ್ಯಗಳು ಹೀಗೆಂದು ಸಾರುತ್ತಿವೆ.

## ಸಮಷ್ಟಿವ್ಯಷ್ಟಿಭೇದದಿಂದ ಜೀವೇಶ್ವರವ್ಯವಹಾರ

**ಸಮಷ್ಟಿವ್ಯಷ್ಟಿರೂಪೌ ದ್ವೌ ಪದಾರ್ಥೌ ಸರ್ವಸಮ್ಮತೌ ।**
**ಸಮಷ್ಟಿರೀಶ್ವರೋ ವ್ಯಷ್ಟಿರ್ಜೀವೋ ವೇದಾನ್ತಡಿಣ್ಡಿಮಃ ॥೬॥**

೬. ಸಮಷ್ಟಿ, ವ್ಯಷ್ಟಿ- ಎಂದು ಎರಡು ಪದಾರ್ಥಗಳಿವೆಯೆಂಬುದು ಎಲ್ಲರಿಗೂ ಒಪ್ಪಾಗಿದೆ. ಈಶ್ವರನೇ ಸಮಷ್ಟಿ, ಜೀವನೇ ವ್ಯಷ್ಟಿ - ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಬ್ರಹ್ಮವೇ ಜಿಜ್ಞಾಸುವಿನ ಆತ್ಮನು ಎಂದು ಎರಡನೆಯ ಶ್ಲೋಕದಲ್ಲಿ ಹೇಳಿದೆ. ಆದರೆ ಪರಮಾತ್ಮನು ಬ್ರಹ್ಮವಾದರೂ ಜೀವಾತ್ಮನಾದ ಜಿಜ್ಞಾಸುವು ಬ್ರಹ್ಮವೆಂಬುದು ಹೇಗೆ ಸರಿಯಾದೀತು?- ಎಂಬೀ ಶಂಕೆಗೆ ಇದು ಪರಿಹಾರವು.

ಗಡಿಗೆಗಳೆಂಬ ಉಪಾಧಿಯಿಂದ ಗಡಿಗೆಯ ಆಕಾಶಗಳು ಬೇರೆಬೇರೆಯೆಂದು ತೋರಬಹುದು; ಆದರೆ ಮಹಾಕಾಶರೂಪದಿಂದ ಆಕಾಶವು ಒಂದೇ ಆಗಿರುತ್ತದೆ. ಹೀಗೆಯೇ ನಾಮರೂಪಗಳಿಂದಾಗಿರುವ ಕಾರ್ಯಕರಣಗಳೆಂಬ ವ್ಯಷ್ಟ್ಯುಪಾಧಿಗಳಿಂದ ಜೀವರು ಅನೇಕರಾಗಿ ತೋರುತ್ತಾರೆ. ಆದರೂ ಜೀವರಿಗೆ ಸ್ವರೂಪವಾಗಿರುವ ಚೈತನ್ಯವೇ ಸಮಷ್ಟಿಯಾದ, ಒಟ್ಟಾಗಿರುವ, ಉಪಾಧಿಯಿಂದ ಈಶ್ವರನೆಂದು ವ್ಯವಹೃತವಾಗಬಹುದಾಗಿದೆ. ವ್ಯಷ್ಟಿಯಾದ ಕಾಲದೇಶಗಳ ಉಪಾಧಿಯಿಂದ ತೋರುವ ಅಲೆಗಳು ಸಮಷ್ಟಿಯಾದ ಉಪಾಧಿಯಿಂದ ಸಮುದ್ರವೆನಿಸುವಂತೆ ಜೀವ, ಈಶ್ವರ- ಎಂಬ ಭೇದ ವ್ಯವಹಾರವು ವ್ಯಷ್ಟಿಸಮಷ್ಟಿರೂಪವಾದ ಉಪಾಧಿಭೇದದಿಂದ ಆಗಿರುವದೇ ಹೊರತು ನಿಜವಾಗಿರುವದಿಲ್ಲ. ಹೀಗೆಂದು ವೇದಾಂತದ ಡಂಗುರವಿದೆ. 'ವಾಯುರೇವ ವ್ಯಷ್ಟಿರ್ವಾಯುಃ ಸಮಷ್ಟಿಃ' (ಅಧ್ಯಾತ್ಮಾದಿಭೇದದಿಂದ ವಾಯುವೆಂಬ ಸೂತ್ರಾತ್ಮನೇ ವ್ಯಷ್ಟಿಯಾಗಿರುವನು, ತನ್ನ ರೂಪದಿಂದ ವಾಯುವೇ ಸಮಷ್ಟಿಯಾಗಿರುವನು, ಬೃ. ೩-೩-೨), ಆದ್ದರಿಂದ ಬ್ರಹ್ಮವೇ ಎಲ್ಲರಿಗೂ ಆತ್ಮನು, ಎಲ್ಲಕ್ಕೂ ಆತ್ಮನು ಎಂಬುದಕ್ಕೆ ಯಾವ ಅಡ್ಡಿಯೂ ಇಲ್ಲ. 'ತದ್ಯಥಾ ರಥನಾಭೌ ಚ ರಥನೇಮೌ ಚಾರಾಃ ಸರ್ವೇ

ಸಮರ್ಪಿತಾ ಏವಮೇವೈತಸ್ಮಿನ್ನಾತ್ಮನಿ ಸರ್ವಾಣಿ ಭೂತಾನಿ ಸರ್ವೇ ದೇವಾಃ ಸರ್ವೇ ಲೋಕಾಃ ಸರ್ವೇ ಪ್ರಾಣಾಃ ಸರ್ವ ಏತೇ ಆತ್ಮಾನಃ ಸಮರ್ಪಿತಾಃ' (ಹೇಗೆ ಗಾಡಿಯ ಚಕ್ರದ ಗುಂಬದಲ್ಲಿಯೂ ಹಳಿಯಲ್ಲಿಯೂ ಎಲ್ಲಾ ಹಾರೆಕೋಲುಗಳೂ ಸೇರಿಕೊಂಡಿರುವವೋ ಹಾಗೆಯೇ ಈ ಆತ್ಮನಲ್ಲಿ ಎಲ್ಲಾ ಭೂತಗಳೂ ಎಲ್ಲಾ ದೇವತೆಗಳೂ ಎಲ್ಲಾ ಲೋಕಗಳೂ ಎಲ್ಲಾ ಪ್ರಾಣಗಳೂ ಈ ಎಲ್ಲಾ ಆತ್ಮರೂ ಸೇರಿಕೊಂಡಿರುತ್ತಾರೆ, ಬೃ. ೨-೫-೧೫) ಎಂಬ ವೇದಾಂತಡಂಗುರವೂ ಹೀಗೆಂದು ಸಾರುತ್ತಿದೆ.

## ಜ್ಞಾನವೇ ಮೋಕ್ಷಸಾಧನ, ಕರ್ಮೋಪಾಸನೆಗಳಲ್ಲ

**ಜ್ಞಾನಕರ್ಮಪದಾರ್ಥೌ ದ್ವೌ ವಸ್ತುಕರ್ತ್ರಾತ್ಮತನ್ತ್ರಕೌ ।**
**ಜ್ಞಾನಾನ್ಮೋಕ್ಷೋ ನ ಕರ್ಮಭ್ಯ ಇತಿ ವೇದಾನ್ತಡಿಣ್ಡಿಮಃ ॥೭॥**

೭. ಜ್ಞಾನ, ಕರ್ಮ- ಎಂದು ಎರಡು ಪದಾರ್ಥಗಳುಂಟು; ಇವುಗಳಲ್ಲಿ ಒಂದು ವಸ್ತು ತಂತ್ರ, ಇನ್ನೊಂದು ಕರ್ತೃತಂತ್ರ. ಜ್ಞಾನದಿಂದಲೇ ಮೋಕ್ಷವೇ ಹೊರತು ಕರ್ಮಗಳಿಂದಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ವೇದದಲ್ಲಿ ಬ್ರಹ್ಮಜ್ಞಾನವನ್ನೂ ಹೇಳಿದೆ, ಕರ್ಮೋಪಾಸನೆಗಳನ್ನೂ ಹೇಳಿದೆ. ಇವುಗಳಲ್ಲಿ ಜ್ಞಾನವೊಂದೇ ಮೋಕ್ಷಕ್ಕೆ ಕಾರಣವೆನ್ನುವದೇತಕ್ಕೆ? ಎಂಬ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳಿರುತ್ತದೆ.

ಜ್ಞಾನ, ಕರ್ಮ- ಈ ಎರಡೂ ವೇದೋಕ್ತವೇ ನಿಜ; ಆದರೂ ಇವೆರಡಕ್ಕೂ ಒಂದು ಮುಖ್ಯ ತಾರತಮ್ಯವಿದೆ. ಜ್ಞಾನವು ವಸ್ತುತಂತ್ರವು, ವಸ್ತುವಿಗೆ ಅಧೀನವಾಗಿ ಉಂಟಾಗಿ ವಸ್ತುವಿನ ತಪ್ಪುತಿಳಿವಳಿಕೆಯನ್ನು ಕಳೆಯುವ ಸ್ವಭಾವವುಳ್ಳದ್ದು. ಕರ್ಮವೋ ಎಂದರೆ ಕರ್ತೃತಂತ್ರವಾಗಿರುತ್ತದೆ, ಕರ್ತೃವು ಕೆಲಸವನ್ನು ಮಾಡುವದಕ್ಕೆ ಬೇಕಾದ ಕಾರಕಗಳನ್ನು ಒದಗಿಸಿಕೊಂಡು ತನಗೆ ಇಷ್ಟವಾದ ರೀತಿಯಲ್ಲಿ ಮಾಡುತ್ತಾನೆ. ಬೇಕಾದರೆ ಮಾಡಬಹುದು, ಅಥವಾ ಮಾಡದೆ ಇರಬಹುದು. ಕರ್ಮವನ್ನು ಮಾಡಿದ ಮೇಲೆಯೇ ಫಲವು ಉಂಟಾಗಬೇಕಾಗಿರುತ್ತದೆ; ಉಂಟಾದದ್ದು ಸ್ವಲ್ಪಕಾಲದವರೆಗೆ ಇದ್ದು ನಾಶವೂ ಆಗುತ್ತದೆ. ಆದರೆ ಮೋಕ್ಷವು ಹೀಗೆ ಹೊಸದಾಗಿ ಉಂಟಾಗತಕ್ಕದ್ದಲ್ಲ; ಅದು ಜಿಜ್ಞಾಸುವಿನ ಆತ್ಮನೇ ಆಗಿರುವ ಬ್ರಹ್ಮವಸ್ತುವಿನ ರೂಪವಾಗಿರುತ್ತದೆ. ನಿತ್ಯಸಿದ್ಧವೇ ಆಗಿರುವ ಮೋಕ್ಷವು ತಪ್ಪುತಿಳಿವಳಿಕೆಯಿಂದ ಮರೆಯಾಗಿರುವದೇ ಹೊರತು ಹೊಸದಾಗಿ ಕರ್ಮದಿಂದ ಪಡೆಯತಕ್ಕದ್ದಾಗಿರುವದಿಲ್ಲ. ಆದ್ದರಿಂದ ವಸ್ತುತಂತ್ರವಾಗಿರುವ, ವಸ್ತುವಿಗಧೀನವಾಗಿಯೇ

ಉಂಟಾಗುವ, ಇದ್ದ ವಸ್ತುವನ್ನೇ ಬೆಳಗುವ ಜ್ಞಾನದಿಂದಲೇ ಮಿಥ್ಯಾಜ್ಞಾನದಿಂದಾಗಿರುವ ಬಂಧದಿಂದ ಬಿಡುಗಡೆಯಾಗಬೇಕಾಗಿದೆ.

ಇನ್ನು ಉಪಾಸನೆಯೂ ಜ್ಞಾನದಂತೆ ಮನಸ್ಸಿನಿಂದಲೇ ಉಂಟಾಗತಕ್ಕದ್ದಾಗಿದ್ದು ಕರ್ಮದಂತೆ ಹೊರಗಿನ ಕಾರಕಗಳ ಸಹಾಯದಿಂದ ಆಗತಕ್ಕದ್ದಲ್ಲವಾದರೂ ಕರ್ಮದಂತೆ ಕರ್ತೃತಂತ್ರವೇ ಆಗಿರುವದರಿಂದ ಅದೂ ಒಂದು ಬಗೆಯ ಕರ್ಮವೇ ಆಗಿರುತ್ತದೆ. ಆದ್ದರಿಂದ ಅದರಿಂದಲೂ ಮೋಕ್ಷವು ಲಭಿಸಲಾರದು- ಎಂದು ತಿಳಿಯಬೇಕು.

ಹೀಗೆಂದು ವೇದಾಂತದ ಡಂಗುರವಿದೆ. 'ನಾಸ್ತ್ಯಕೃತಃ ಕೃತೇನ' (ಕೃತಕವಲ್ಲದ ಮೋಕ್ಷವು ಕರ್ಮದಿಂದ ಆಗುವಂತಿಲ್ಲ, ಮುಂ. ೧-೨-೧೨), 'ಅನ್ಯತ್ರ ಧರ್ಮಾದನ್ಯತ್ರಾಧರ್ಮಾತ್' (ಬ್ರಹ್ಮತತ್ತ್ವವು ಧರ್ಮಕಾರ್ಯಕ್ಕಿಂತಲೂ ಬೇರೆ, ಅಧರ್ಮಕಾರ್ಯಕ್ಕಿಂತಲೂ ಬೇರೆ, ಕ. ೧-೨-೧೪), 'ತಮೇವಂ ವಿದ್ವಾನಮೃತ ಇಹ ಭವತಿ। ನಾನ್ಯಃ ಪನ್ಥಾ ವಿದ್ಯತೇಽಯನಾಯ' (ಅವನನ್ನು ಹೀಗೆಂದು ಅರಿತುಕೊಂಡವನು ಇಲ್ಲಿಯೇ ಅಮೃತನಾಗುತ್ತಾನೆ, ಅಮೃತತ್ವವನ್ನು ಪಡೆಯುವದಕ್ಕೆ ಬೇರೆಯ ಮಾರ್ಗವಿಲ್ಲ, ತೈ. ಆ. ೩-೩೯), 'ನೇದಂ ಯದಿದಮುಪಾಸತೇ' (ಇದು ಎಂದು ಉಪಾಸನೆಮಾಡುವರಲ್ಲ, ಅದು ಬ್ರಹ್ಮದ ಪರಮಾರ್ಥಸ್ವರೂಪವಲ್ಲ, ಕೇ. ೧-೪)- ಮುಂತಾದ ಶ್ರುತಿಗಳಿಂದ ಇದು ಸಿದ್ಧವಾಗುತ್ತದೆ.

## ಬ್ರಹ್ಮವನ್ನೇ ಶ್ರವಣಮನನನಿದಿಧ್ಯಾಸನಗಳಿಂದ ಅರಿಯಬೇಕು

**ಶ್ರೋತವ್ಯಾಶ್ರಾವ್ಯರೂಪೌ ದ್ವೌ ಪದಾರ್ಥೌ ಸುಖದುಃಖದೌ।**
**ಶ್ರೋತವ್ಯಂ ಬ್ರಹ್ಮ ನೈವಾನ್ಯದಿತಿ ವೇದಾನ್ತಡಿಣ್ಡಿಮಃ ॥೮॥**

೮. ಶ್ರವಣಮಾಡುವದಕ್ಕೆ ತಕ್ಕದ್ದು, ಶ್ರವಣಮಾಡುವದಕ್ಕೆ ತಕ್ಕದ್ದಲ್ಲದ್ದು- ಎಂದು ಎರಡು ಪದಾರ್ಥಗಳಿವೆ. ಇವುಗಳಲ್ಲಿ ಒಂದು ಸುಖವನ್ನು ಕೊಡತಕ್ಕದ್ದು, ಮತ್ತೊಂದು ದುಃಖವನ್ನು ಕೊಡತಕ್ಕದ್ದು. ಬ್ರಹ್ಮವೇ ಶ್ರೋತವ್ಯವೇ ಹೊರತು ಮತ್ತೊಂದಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಬ್ರಹ್ಮಜ್ಞಾನವು ವಸ್ತುತಂತ್ರವಾದ್ದರಿಂದ ಶ್ರವಣಮನನನಿದಿಧ್ಯಾಸನಗಳೆಂಬ ಮೂರುಸಾಧನಗಳಿಂದ ಲಭಿಸತಕ್ಕದ್ದಾದ್ದರಿಂದ ಅವುಗಳನ್ನು ಹೇಳುವದಕ್ಕೆ ಹೊರಟಿರುತಾರೆ.

ಬ್ರಹ್ಮವು ಸುಖರೂಪವೆಂದೂ ಜಗತ್ತು ದುಃಖರೂಪವೆಂದೂ ಹಿಂದೆ ಐದನೆಯ ಶ್ಲೋಕದಲ್ಲಿ ಹೇಳಿತ್ತಷ್ಟೆ ; ಅದರಿಂದಲೇ ಜಗತ್ತಿನ ಶ್ರವಣಾದಿಗಳಿಂದ ದುಃಖವೇ ಫಲವಾಗುವದೆಂದು ನಿಶ್ಚಿತವಾಗಿರುತ್ತದೆ. ಆದ್ದರಿಂದ ಬ್ರಹ್ಮವನ್ನೇ ಶ್ರವಣಮಾಡಬೇಕು ಎಂದರ್ಥ.

**ಚಿನ್ತ್ಯಾಚಿನ್ತ್ಯಪದಾರ್ಥೌ ದ್ವೌ ವಿಶ್ರಾನ್ತಿಶ್ರಾನ್ತಿದಾಯಕೌ ।**
**ಚಿನ್ತ್ಯಂ ಬ್ರಹ್ಮ ಪರಂ ನಾನ್ಯದಿತಿ ವೇದಾನ್ತಡಿಣ್ಡಿಮಃ ॥೯॥**

೯. ವಿಚಾರಮಾಡತಕ್ಕದ್ದು, ವಿಚಾರಮಾಡಬಾರದ್ದು -ಎಂದು ಎರಡು ಪದಾರ್ಥಗಳು. ಇವುಗಳಲ್ಲಿ ಒಂದು ವಿಚಾರಮಾಡಿದರೆ ವಿಶ್ರಾಂತಿಯನ್ನು ಕೊಡುವದು. ಇನ್ನೊಂದು ಆಯಾಸವನ್ನು ಕೊಡುವದು. ಪರಬ್ರಹ್ಮವೇ ವಿಚಾರಮಾಡತಕ್ಕದ್ದು, ಮತ್ತೊಂದಲ್ಲ- ಹೀಗೆಂಬುದು ವೇದಾಂತದ ಡಂಗುರವು.

**ಧ್ಯೇಯಾಧ್ಯೇಯಪದಾರ್ಥೌ ದ್ವೌ ಧೀಸಮಾಧ್ಯಸಮಾಧಿದೌ ।**
**ಧ್ಯಾತವ್ಯಂ ಬ್ರಹ್ಮ ನೈವಾನ್ಯದಿತಿ ವೇದಾನ್ತಡಿಣ್ಡಿಮಃ ॥೧೦॥**

೧೦. ಧ್ಯಾನಮಾಡತಕ್ಕದ್ದು, ಧ್ಯಾನಮಾಡಬಾರದ್ದು -ಎಂದು ಎರಡು ಪದಾರ್ಥಗಳು. ಇವುಗಳಲ್ಲಿ ಒಂದು ಬುದ್ಧಿಗೆ ಸಮಾಧಾನವನ್ನು ಕೊಡತಕ್ಕದ್ದು, ಇನ್ನೊಂದು ಸಮಾಧಾನವನ್ನು ಕೊಡತಕ್ಕದ್ದಲ್ಲ. ಬ್ರಹ್ಮವೇ ಧ್ಯಾನಮಾಡತಕ್ಕದ್ದೇ ಹೊರತು ಮತ್ತೊಂದಲ್ಲ. ಹೀಗೆಂಬುದು ವೇದಾಂತದ ಡಂಗುರವು.

## ವಿವರಣೆ

ಹಿಂದಿನ ಶ್ಲೋಕದಲ್ಲಿ ಚಿಂತನೆಯೆಂದರೆ ವಿಚಾರವು; ಇಲ್ಲಿ ಧ್ಯಾನವೆಂದರೆ ಅದರಲ್ಲಿಯೇ ಲಕ್ಷ್ಯವಿಟ್ಟು ಮನಸ್ಸನ್ನು ಏಕಾಗ್ರಗೊಳಿಸುವದು. ಅನಾತ್ಮವು ವಿಕಾರಿಯೂ ಅನಿತ್ಯವೂ ಅಸತ್ಯವೂ ಆಗಿರುವದರಿಂದ ಅದರ ವಿಷಯದ ತರ್ಕವು ಮನಸ್ಸಿಗೆ ಶ್ರಮವನ್ನುಂಟುಮಾಡುತ್ತದೆ; ಅದನ್ನು ಲಕ್ಷ್ಯವಿಟ್ಟು ಮನಸ್ಸನ್ನು ಅದರಲ್ಲಿಯೇ ಕೂಡಿಸುವದರಿಂದ ಮನಸ್ಸಿಗೆ ಚಾಂಚಲ್ಯವುಂಟಾಗುತ್ತದೆ.

ಆದ್ದರಿಂದ ಬ್ರಹ್ಮತತ್ತ್ವವನ್ನೇ ವಿಚಾರಿಸಬೇಕು, ಅದರಲ್ಲಿಯೇ ಮನಸ್ಸನ್ನಿಟ್ಟು ನೋಡಬೇಕು. ಇದರಿಂದ ಮನಸ್ಸಿಗೆ ವಿಶ್ರಾಂತಿಯೂ ಸಮಾಧಾನವೂ ಲಭಿಸುವವು.

ಅಂತೂ ಬ್ರಹ್ಮವೊಂದನ್ನೇ ಶ್ರವಣಮಾಡಬೇಕು, ಮನನಮಾಡಬೇಕು, ಧ್ಯಾನವಿಟ್ಟು ಅರಿತುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಹೀಗೆಂಬುದು ವೇದಾಂತದ ಡಂಗುರವು. 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ' (ಎಲೆ ಮೈತ್ರೇಯಿ, ಆತ್ಮನನ್ನೇ ಕಂಡುಕೊಳ್ಳಬೇಕು, ಅವನನ್ನೇ ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನಮಾಡಬೇಕು, ಬೃ. ೨-೪-೫), 'ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಞ್ಚಥಾಮೃತಸ್ಯೈಷ ಸೇತುಃ' (ಆ ಆತ್ಮನೊಬ್ಬನನ್ನೇ ಅರಿತುಕೊಳ್ಳಿರಿ, ಮಿಕ್ಕ ಮಾತುಗಳನ್ನು ಬಿಡಿರಿ, ಇದೇ ಅಮೃತಕ್ಕೆ ಸೇತು, ಮುಂ. ೨-೨-೫), 'ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ । ನಾನುಧ್ಯಾಯಾದ್ ಬಹೂಞ್ಛಬ್ದಾನ್ ವಾಚೋ ವಿಗ್ಲಾಪನಂ ಹಿ ತತ್'॥ (ವಿವೇಕಿಯಾದ ಬ್ರಾಹ್ಮಣನು ಆ ಆತ್ಮನನ್ನೇ ಅರಿತು ಪ್ರಜ್ಞೆಯನ್ನು ಮಾಡಿಕೊಳ್ಳಬೇಕು. ಬಹಳ ಶಬ್ದಗಳನ್ನು ಧ್ಯಾನಿಸುತ್ತಿರಬಾರದು, ಏಕೆಂದರೆ ಅದು ವಾಕ್ಕಿಗೆ ಗ್ಲಾನಿಯನ್ನುಂಟುಮಾಡುವದು, ಬೃ. ೪-೪-೨೨)- ಇವೇ ಮುಂತಾದ ಶ್ರುತಿಗಳು ಈ ವಿಷಯದಲ್ಲಿ ಪ್ರಮಾಣವಾಗಿರುತ್ತವೆ.

## ಮೋಕ್ಷಕ್ಕೆ ಜ್ಞಾನವೇ ಸಾಕ್ಷಾತ್ಕಾರಣ

**ಯೋಗಿನೋ ಭೋಗಿನೋ ವಾಽಪಿ ತ್ಯಾಗಿನೋ ರಾಗಿಣೋಽಪಿ ಚ ।**
**ಜ್ಞಾನಾನ್ಮೋಕ್ಷೋ ನ ಸನ್ದೇಹ ಇತಿ ವೇದಾನ್ತಡಿಣ್ಡಿಮಃ ॥೧೧॥**

೧೧. ಯೋಗಿಗಾಗಲಿ, ಭೋಗಿಗಾಗಲಿ, ತ್ಯಾಗಿಗಾಗಲಿ, ವಿಷಯಾಸಕ್ತನಿಗಾಗಲಿ ಜ್ಞಾನದಿಂದ ಮೋಕ್ಷವಾಗುವದು, ಸಂದೇಹವಿಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಬರಿಯ ಜ್ಞಾನದಿಂದ ಮೋಕ್ಷವಾದೀತೆ? ಸರ್ವವನ್ನೂ ತ್ಯಾಗಮಾಡಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕಾದದ್ದಿಲ್ಲವೆ? ಯೋಗವೇ ಮುಂತಾದ ಸಾಧನವನ್ನು ಮಾಡಬೇಕಾದದ್ದಿಲ್ಲವೆ? ಬಂಧವು ಭಾವರೂಪವಾಗಿ ಬಂದಿರುತ್ತದೆ ; ಬೇಡಿ ಬಿದ್ದವನು ಅದನ್ನು ಕತ್ತರಿಸಿಕೊಳ್ಳುವದು ಹೇಗೆ ಅವಶ್ಯವೋ ಹಾಗೆ ಬಂಧವನ್ನು ಬಿಡಿಸಿಕೊಳ್ಳುವದಕ್ಕೆ ಸಾಧನವನ್ನು ಮಾಡುವದೂ ಅವಶ್ಯವೆಂತ ತೋರುತ್ತದೆ. ಬರಿಯ ಜ್ಞಾನವೇ ಸಾಕಾಗಲಾರದು- ಎಂದು ಕೆಲವರಿಗೆ ತೋರಬಹುದು.

ಆದರೆ ಇದು ತಪ್ಪು ತಿಳಿವಳಿಕೆ. ಯೋಗವಾಗಲಿ ಭೋಗವಾಗಲಿ ತ್ಯಾಗವಾಗಲಿ ರಾಗವಾಗಲಿ ಇಲ್ಲಿ ಲೆಕ್ಕಕ್ಕೆ ಬರುವದಿಲ್ಲ . ಯೋಗವೆಂದರೆ ಇಂದ್ರಿಯಗಳನ್ನೂ

ವಿಷಯಗಳನ್ನೂ ಹಿಂಜಗ್ಗಿ ಚಿತ್ತವೃತ್ತಿಗಳನ್ನು ಇಲ್ಲವಾಗಿಸಿಕೊಳ್ಳುವದು. ಭೋಗವೆಂದರೆ ವಿಷಯಸುಖಗಳನ್ನು ಅನುಭವಿಸುವದು. ತ್ಯಾಗವೆಂದರೆ ಸರ್ವಸಂಗವನ್ನೂ ಬಿಡುವದು. ರಾಗವೆಂದರೆ ವಿಷಯಗಳು ನನಗೆ ಬೇಕೆಂಬ ಬುದ್ಧಿಯಿಂದ ಅವುಗಳನ್ನು ನೆನಸಿಕೊಂಡು ಮನಸ್ಸು ಬಣ್ಣಬಣ್ಣವಾಗುತ್ತಿರುವದು. ಇವುಗಳು ಯಾವವೂ ಇಲ್ಲಿ ಮುಖ್ಯವಲ್ಲ ; ಜ್ಞಾನವೊಂದೇ ಕಾರಣವಾಗಿರುತ್ತದೆ.

ಹೇಗೆಂದರೆ ಆಶ್ರಮಕರ್ಮವನ್ನು ಮಾಡದೆ ಬರಿಯ ಯೋಗಾಭ್ಯಾಸದಲ್ಲಿರುವವರಿಗೂ ಜ್ಞಾನದಿಂದ ಮೋಕ್ಷವಾಗಬಹುದು ; ಸಂವರ್ತನೇ ಮೊದಲಾದವರು ಇದಕ್ಕೆ ಉದಾಹರಣೆ, ಶಾಸ್ತ್ರೀಯಕರ್ಮವನ್ನು ಮಾಡುತ್ತಿರುವ ಭೋಗಿಯಾದ ಗೃಹಸ್ಥನಿಗೂ ಜ್ಞಾನದಿಂದ ಮೋಕ್ಷವಾಗುತ್ತದೆ ; ಶ್ರೀಕೃಷ್ಣಾದಿಗಳು ಇದಕ್ಕೆ ಉದಾಹರಣೆ. ಸರ್ವಕರ್ಮವನ್ನೂ ಪರಿತ್ಯಾಗ ಮಾಡಿದ ತ್ಯಾಗಿಗೂ ಜ್ಞಾನದಿಂದ ಮೋಕ್ಷವಾಗುವದು; ಶುಕಾದಿಗಳು ಇದಕ್ಕೆ ಉದಾಹರಣೆ. ರಾಜ್ಯಪಾಲನೆಯೇ ಮುಂತಾದದ್ದರಲ್ಲಿ ಆಸಕ್ತಿಯುಳ್ಳ ರಾಗಿಗೂ ಜ್ಞಾನದಿಂದ ಮೋಕ್ಷವಾಗಬಹುದು ; ಜನಕಾದಿಗಳು ಇದಕ್ಕೆ ಉದಾಹರಣೆ. ಆದ್ದರಿಂದ ಜ್ಞಾನವೊಂದೇ ಮೋಕ್ಷಕ್ಕೆ ಕಾರಣವೇ ಹೊರತು ಹೊರಗಿನ ಯಾವ ಉಪಾಧಿಯೂ ಕಾರಣವಲ್ಲ- ಎಂದಾಯಿತು.

ಹೀಗೆಂದು ವೇದಾಂತದ ಡಂಗುರವಿದೆ. 'ಬ್ರಹ್ಮವಿದಾಪ್ನೋತಿ ಪರಮ್' (ಬ್ರಹ್ಮವನ್ನರಿತುಕೊಂಡವನು ಪರಮಪುರುಷಾರ್ಥವನ್ನು ಪಡೆಯುತ್ತಾನೆ, ತೈ. ೨-೧) ಎಂಬ ಮುಂತಾದ ಶ್ರುತಿಗಳಿಂದ ಇದು ಸಿದ್ಧವಾಗಿರುತ್ತದೆ.

ಸರಿಯಾಗಿ ನೋಡಿದರೆ ಜ್ಞಾನಿಗೆ ರಾಗಾದಿಗಳು ಸಂಭವಿಸುವದಿಲ್ಲ ; ಏಕೆಂದರೆ ಅವಿದ್ಯೆ, ರಾಗ, ದ್ವೇಷ- ಮುಂತಾದವುಗಳನ್ನು ಕಳೆದುಕೊಂಡವನೇ ಜ್ಞಾನಿಯು. ಆದರೂ ಮತ್ತೊಬ್ಬರು ಆರೋಪಿಸುವ ರಾಗಾದಿಗಳು ಇರಬಹುದು ಎಂಬ ದೃಷ್ಟಿಯಿಂದ ರಾಗಿಗೂ ಮೋಕ್ಷವುಂಟು ಎಂದು ಇಲ್ಲಿ ಹೇಳಿದೆ. ಇದರಿಂದ ಜ್ಞಾನಕ್ಕೆ ತನ್ನ ಫಲವಾದ ಮೋಕ್ಷವನ್ನು ಕೊಡುವದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ ಎಂಬುದನ್ನು ತಿಳಿಸಿದಂತಾಗಿರುತ್ತದೆ.

**ನ ವರ್ಣಾಶ್ರಮಸಜ್ಞೇತೈರ್ನ ಕರ್ಮೋಪಾಸನಾದಿಭಿಃ ।**
**ಬ್ರಹ್ಮಜ್ಞಾನಂ ವಿನಾ ಮೋಕ್ಷ ಇತಿ ವೇದಾನ್ತಡಿಣ್ಡಿಮಃ ॥೧೨॥**

೧೨. ವರ್ಣ, ಆಶ್ರಮ- ಇವುಗಳ ಹೆಸರನ್ನು ಇಟ್ಟುಕೊಂಡ ಮಾತ್ರದಿಂದಾಗಲಿ ಬರಿಯ ಕರ್ಮ, ಉಪಾಸನೆ- ಮುಂತಾದವುಗಳನ್ನು ಮಾಡಿದಮಾತ್ರದಿಂದಲಾಗಲಿ ಬ್ರಹ್ಮಜ್ಞಾನವಿಲ್ಲದೆ ಮೋಕ್ಷವಾಗಲಾರದು. ಹೀಗೆಂಬುದು ವೇದಾಂತದ ಡಂಗುರವು.

### ವಿವರಣೆ

ಯಾವ ವರ್ಣದಲ್ಲಿದ್ದರೂ ಯಾವ ಆಶ್ರಮದಲ್ಲಿದ್ದರೂ ಜ್ಞಾನಮಾತ್ರದಿಂದ ಮೋಕ್ಷವಾಗುತ್ತದೆ- ಎಂದು ಹಿಂದೆ ಹೇಳಿದೆ. ಇಲ್ಲಿ ಜ್ಞಾನವಿಲ್ಲದೆ ಬರಿಯ ವರ್ಣಾಶ್ರಮಕರ್ಮಗಳಿಂದ ಎಂದಿಗೂ ಮೋಕ್ಷವಾಗಲಾರದೆಂದು ಹೇಳಲಾಗಿದೆ.

ಬ್ರಹ್ಮಕ್ಷತ್ರಿಯವೈಶ್ಯಶೂದ್ರರೆಂಬಿವು ವರ್ಣಸಂಕೇತಗಳು ; ಬ್ರಹ್ಮಚಾರಿಗೃಹಸ್ಥವಾನಪ್ರಸ್ಥಸಂನ್ಯಾಸಿಗಳೆಂಬಿವು ಆಶ್ರಮಸಂಕೇತಗಳು. ಇವುಗಳನ್ನಿಟ್ಟುಕೊಂಡಮಾತ್ರದಿಂದ ಯಾರಿಗೂ ಮೋಕ್ಷವಿಲ್ಲ . ಈ ಆಶ್ರಮಗಳಲ್ಲಿ ಮಾಡುವ ಕರ್ಮೋಪಾಸನಾದಿಗಳಿಂದ ಎಂದರೆ ಅಧ್ಯಯನ, ಯಜ್ಞ, ತಪಸ್ಸು, ಉಪಾಸನೆ- ಮುಂತಾದವುಗಳಿಂದಲೂ ಮೋಕ್ಷವಾಗಲಾರದು. ಏಕೆಂದರೆ ಸಾಧನಗಳಿಂದ ದೊರೆಯುವ ಫಲವು ಕೃತಕವಾದ್ದರಿಂದ ಅನಿತ್ಯವಾಗಿರುತ್ತದೆ ; ಆದರೆ ಮೋಕ್ಷವು ನಿತ್ಯವಾಗಿರುತ್ತದೆ.

ಏನೇ ಆಗಲಿ, ಬ್ರಹ್ಮಜ್ಞಾನವಿಲ್ಲದೆ ಮೋಕ್ಷವಿಲ್ಲವೆಂಬುದು ವೇದಾಂತದ ಡಂಗುರವು. 'ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ' (ಈ ಆತ್ಮನು ಪ್ರವಚನದಿಂದಲಾಗಲಿ ಮೇಧಾಶಕ್ತಿಯಿಂದಲಾಗಲಿ ಬಹಳ ಶ್ರವಣ ಮಾಡಿದ್ದರಿಂದಲಾಗಲಿ ದೊರಕಲಾರನು, ಮು. ೩-೨-೩), 'ನ ಕರ್ಮಣಾ ನ ಪ್ರಜಯಾ ಧನೇನ' (ಕರ್ಮದಿಂದ ಅಮೃತತ್ವವು ದೊರಕುವದಿಲ್ಲ, ಪ್ರಜೆಯಿಂದಲೂ ದೊರಕುವದಿಲ್ಲ , ಧನದಿಂದಲೂ ಸಿಕ್ಕುವದಿಲ್ಲ , ನಾ. ೨೮), 'ತಮೇವ ವಿದಿತ್ವಾऽತಿಮೃತ್ಯುಮೇತಿ ನಾನ್ಯಃ ಪನ್ಥಾ ವಿದ್ಯತೇऽಯನಾಯ' (ಅವನನ್ನೇ ಅರಿತುಕೊಂಡರೆ ಅತಿ ಮೃತ್ಯುವನ್ನು ಪಡೆಯುತ್ತಾನೆ, ಅದನ್ನು ಪಡೆಯುವದಕ್ಕೆ ಬೇರೆ ಯಾವ ಮಾರ್ಗವೂ ಇಲ್ಲ, ಶ್ವೇ. ೬-೧೫)- ಎಂಬಿವೇ ಮುಂತಾದ ಶ್ರುತಿಗಳು ಹೀಗೆಂದು ಹೇಳುತ್ತವೆ.

## ಬ್ರಹ್ಮದಲ್ಲಿಯೇ ಸುಖ, ಸಂಸಾರದಲ್ಲಿಲ್ಲ

**ಅಸತ್ಯಃ ಸರ್ವಸಂಸಾರೋ ರಸಾಭಾಸಾದಿದೂಷಿತಃ ।**
**ಉಪೇಕ್ಷ್ಯೋ ಬ್ರಹ್ಮ ವಿಜ್ಞೇಯಮಿತಿ ವೇದಾನ್ತಡಿಣ್ಡಿಮಃ ॥೧೩॥**

೧೩. ಈ ಸಂಸಾರವೆಲ್ಲವೂ ಅಸತ್ಯವು, ತೋರಿಕೆಯ ಸುಖವೇ ಮುಂತಾದ ದೋಷಗಳುಳ್ಳದ್ದು . ಆದ್ದರಿಂದ ಇದನ್ನು ಉಪೇಕ್ಷಿಸತಕ್ಕದ್ದು, ಬ್ರಹ್ಮವನ್ನೇ ತಿಳಿಯತಕ್ಕದ್ದು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಬ್ರಹ್ಮವನ್ನೇ ಶ್ರವಣಾದಿಗಳಿಂದ ಅರಿತುಕೊಳ್ಳಬೇಕು, ಪ್ರಪಂಚದ ಶ್ರವಣಾದಿಗಳನ್ನು ಮಾಡಬಾರದು- ಎಂದು (೮-೧೦) ಹೇಳಿದ್ದೇಕೆ? ಪ್ರಪಂಚದಿಂದ ದುಃಖವೂ ಶ್ರಮವೂ

ವಿಕ್ಷೇಪವೂ ಉಂಟಾಗುವದರಿಂದ ಇದರ ಶ್ರವಣಾದಿಗಳನ್ನು ಮಾಡಬಾರದೆಂದು ಹಿಂದೆ ಹೇಳಿದೆ, ನಿಜ. ಆದರೆ ಈ ಪ್ರಪಂಚದಲ್ಲಿಯೂ ಒಂದಿಷ್ಟು ಸುಖವಿಶ್ರಾಂತಿಸಮಾಧಾನಗಳೂ ಕಾಣಬರುವವಲ್ಲ! ಆ ಸುಖಾದಿಗಳು ಅನಿತ್ಯವು ಎಂದು ವೇದಾಂತಿಗಳು ಹೇಳಬಹುದು; ಆದರೆ ಸಾಧನಬಲದಿಂದ ಅನಿತ್ಯವಸ್ತುಗಳೂ ಬಹುಕಾಲದವರೆಗೆ ಭೋಗವನ್ನು ಕೊಡಬಹುದಲ್ಲವೆ? ಆ ಸುಖಾದಿಗಳು ದುಃಖಾದಿಮಿಶ್ರಿತವಾಗಿರುವವು, ನಿಜ; ಆದರೆ ಆ ದುಃಖಾದಿಗಳನ್ನು ಬಿಟ್ಟು ಬರಿಯ ಸುಖಾದಿಗಳನ್ನೇ ಏತಕ್ಕೆ ಸ್ವೀಕರಿಸಬಾರದು?- ಎಂಬ ಶಂಕೆಯೂ ಕೆಲವರಿಗೆ ಉಂಟಾಗಬಹುದು.

ಈ ಶಂಕೆಗೆ ಪರಿಹಾರವನ್ನು ಇಲ್ಲಿ ಹೇಳಿದೆ. ಈ ಪ್ರಪಂಚವು ಪರಮಾರ್ಥಸ್ವರೂಪದಿಂದ ನೋಡಿದಾಗ ಬ್ರಹ್ಮವೇ ಆದರೂ ಅಜ್ಞಾನಿಗಳಿಗೆ ನಾಮರೂಪಕರ್ಮಾತ್ಮಕವಾಗಿಯೇ ಕಾಣುತ್ತಿರುವದು. ಈ ತೋರಿಕೆಯ ನಾಮರೂಪಕರ್ಮಾತ್ಮಕಪ್ರಪಂಚವು ಅಸತ್ಯವು. ಈ ಪ್ರಪಂಚದಲ್ಲಿಯೇ ಜೀವರಿಗೆ ಸಂಸಾರವಾಗುತ್ತಿರುವದರಿಂದ, ಎಂದರೆ ಸುಖದುಃಖಜನನಮರಣಾದಿಗಳು ಮತ್ತೆಮತ್ತೆ ಆಗುತ್ತಿರುವದರಿಂದ, ಇದನ್ನು ಸಂಸಾರವೆನ್ನಬಹುದು. ಹೀಗೆ ಜನನಮರಣಗಳನ್ನು ಪಡೆಯುವದೂ ಆಯಾ ಜನ್ಮದಲ್ಲಿ ತಾವು ಮಾಡಿದ ಕರ್ಮಗಳ ಫಲಗಳನ್ನು ಅನುಭವಿಸುವದೂ ಮತ್ತು ಈ ಸಂಸಾರಕ್ಕೆ ಆಧಾರವಾಗಿರುವ ಪ್ರಪಂಚವೂ ಎಲ್ಲವೂ ಅಸತ್ಯವೇ, ಬರಿಯ ತೋರಿಕೆಯೇ. ಇದನ್ನು ಮುಂದೆ ತೋರಿಸಿಕೊಡಲಾಗುವುದು. ಇಷ್ಟೇ ಅಲ್ಲ, ಈ ಸಂಸಾರದಲ್ಲಿ ರಸಾಭಾಸವೇ ಮುಂತಾದ ದೋಷಗಳಿರುವವು. ಇದರಲ್ಲಿ ಕಾಣಬರುತ್ತಿರುವ ಸುಖ, ವಿಶ್ರಾಂತಿ, ಸಮಾಧಾನ- ಇವೆಲ್ಲ ಬರಿಯ ತೋರಿಕೆಯೇ ಆಗಿರುತ್ತವೆ. ಇಂಥ ಅಸತ್ಯವಾದ ರಸಾಭಾಸಾದಿದೂಷಿತವಾದ ಈ ಸಂಸಾರದಲ್ಲಿ ಸುಖಾದಿಗಳು ಎಲ್ಲಿಂದ ಬರಬೇಕು?

ಆದ್ದರಿಂದ ಈ ಸಂಸಾರವನ್ನು ಕಡೆಗಣಿಸಬೇಕು, ಬ್ರಹ್ಮವೊಂದನ್ನೇ ಅರಿತುಕೊಳ್ಳಬೇಕು. ಕನಸಿನಲ್ಲಿ ತಾನು ರಾಜನೆಂದುಕೊಂಡವನು ಆ ರಾಜ್ಯದಿಂದಾಗುವ ಸುಖದುಃಖಗಳನ್ನು ಅನುಭವಿಸುತ್ತಲೂ ಆ ಸುಖವೇ ಮಿಗಿಲಿಲ್ಲದ್ದೆಂದು ಭಾವಿಸುತ್ತಲೂ ಇದ್ದವನು ಎಚ್ಚತ್ತ ಕೂಡಲೆ, 'ಛೆ ! ಇದೆಲ್ಲವೂ ಬರಿಯ ಕನಸೇ'- ಎಂದು ಹೇಗೆ ಅದನ್ನು ಕಡೆಗಣಿಸಿ ಜಾಗ್ರದ್ವ್ಯವಹಾರದಲ್ಲಿಯೇ ಆದರದಿಂದ ತೊಡಗುವನೋ ಹಾಗೆಯೇ ಸಂಸಾರವೆಲ್ಲವೂ ಸ್ವಪ್ನರೂಪವೆಂದು ತಿಳಿದು ಬ್ರಹ್ಮವಿಚಾರದಲ್ಲಿಯೇ ಆದರವನ್ನು ತಳೆಯಬೇಕು.

ಹೀಗೆಂದು ವೇದಾಂತವಚನಗಳ ಡಂಗುರವಿದೆ. 'ಯದಾ ಚರ್ಮ ವದಾಕಾಶಂ ವೇಷ್ಟಯಿಷ್ಯನ್ತಿ ಮಾನವಾಃ । ತದಾ ದೇವಮವಿಜ್ಞಾಯ ದುಃಖ ಸ್ಯಾನ್ತೋ ಭವಿಷ್ಯತಿ॥' (ಯಾವಾಗ ಮನುಷ್ಯರು ಆಕಾಶವನ್ನು, ಚರ್ಮವನ್ನು ಸುತ್ತಿದಹಾಗೆ, ಸುರುಳಿಸುತ್ತಬಲ್ಲವರಾಗುವರೋ ಆಗ ಪರಮಾತ್ಮದೇವನನ್ನು ಅರಿಯದೆ ದುಃಖದ

ಕೊನೆಯು ಆದೀತು, ಶ್ವೇ. ೬-೩೦) 'ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್' (ಆತ್ಮರೂಪದಿಂದಿರುವ ಆ ಆತ್ಮನನ್ನು ಯಾರು ಕಂಡುಕೊಳ್ಳವರೋ ಆ ವಿವೇಕಿಗಳಿಗೇ ಶಾಶ್ವತಸುಖವು, ಮಿಕ್ಕವರಿಗಲ್ಲ , ಕ. ೨-೨-೧೩)- ಮುಂತಾದವುಗಳನ್ನು ಇಲ್ಲಿ ಉದಾಹರಿಸಬೇಕು.

## ಮಿಕ್ಕದ್ದೆಲ್ಲವನ್ನೂ ಬಿಟ್ಟು ಬ್ರಹ್ಮವೊಂದನ್ನೇ ಅರಿತುಕೊಳ್ಳಬೇಕು

**ವೃಥಾಕ್ರಿಯಾ ವೃಥಾಲಾಪಾನ್ ವೃಥಾವಾದಾನ್ ಮನೋರಥಾನ್ ।**
**ತ್ಯಕ್ತ್ವೈಕಂ ಬ್ರಹ್ಮ ವಿಜ್ಞೇಯಮಿತಿ ವೇದಾನ್ತಡಿಮ್ಡಿಮಃ ॥೧೪॥**

೧೪. ವ್ಯರ್ಥವಾದ ಕೆಲಸಗಳನ್ನೂ ವ್ಯರ್ಥವಾದ ಮಾತುಗಳನ್ನೂ ವ್ಯರ್ಥವಾದ ವಾದಗಳನ್ನೂ ಮನೋರಥಗಳನ್ನೂ ಬಿಟ್ಟು ಬ್ರಹ್ಮವೊಂದನ್ನೇ ಅರಿತುಕೊಳ್ಳಬೇಕು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ವ್ಯವಹಾರದಲ್ಲಿ ತಮಗೆ ಏನಾದರೂ ಬೇಕೆಂದು ಕೆಲಸಮಾಡುವದು, ಪ್ರಾಪ್ತವಾದದ್ದನ್ನು ರಕ್ಷಿಸಿಕೊಳ್ಳುವದು- ಇಂಥ ಕರ್ಮಗಳು ವ್ಯರ್ಥ; ಏಕೆಂದರೆ ಈ ಕರ್ಮಗಳಿಂದ ಕ್ಲೇಶವುಂಟಾಗುವದು, ದುಃಖಕ್ಕೆ ಕಾರಣವಾಗಿಯೂ ಇರುವವು. ಯೋಗಕ್ಷೇಮದ ಮಾತುಗಳೂ ಸ್ತ್ರೀಧನನಾಸ್ತಿಕಾದಿ ಚಾರಿತ್ರದ ಮಾತುಗಳೂ ವ್ಯರ್ಥ; ಏಕೆಂದರೆ ಅವು ಮನಸ್ಸಿಗೆ ಕ್ಷೋಭೆಯನ್ನು ಮಾಡಿ ಕೊನೆಗೆ ದುಃಖಕ್ಕೆ ಕಾರಣವಾಗುವವು. ಸುಮ್ಮನೆ ತರ್ಕಕ್ಕಾಗಿ ಮಾಡುವ ಚರ್ಚೆಗಳು ವ್ಯರ್ಥ; ಏಕೆಂದರೆ ಅವುಗಳಿಂದ ಬುದ್ಧಿಗೆ ಕ್ಷೋಭೆಯಾಗುವದು, ಮತ್ತೊಬ್ಬರ ಮೇಲೆ ದ್ವೇಷವುಂಟಾಗುವದು. ಕೊನೆಗೆ ದುಃಖವೇ ಉಂಟಾಗುವದು. ಮನೋರಥಗಳು ಎಂದರೆ ಇದು ಸಿಕ್ಕಿತು, ಇದು ಸಿಕ್ಕಬೇಕು- ಎಂದು ಮನಸ್ಸಿನಲ್ಲಿಯೇ ಮಾಡುವ ಹಗಲುಗನವರಿಕೆಗಳೂ ವ್ಯರ್ಥವೇ; ಏಕೆಂದರೆ ಕಲ್ಪಿಸಿಕೊಳ್ಳುತ್ತಿರುವ ಕಾಲದಲ್ಲಿಯೇ ಅವಕ್ಕೆ ವಿಷಯವಿರುವದಿಲ್ಲ, ಅವುಗಳಿಂದ ವ್ಯರ್ಥವಾಗಿ ಕಾಲಹರಣೆಯಾಗುವದು. ಆದ್ದರಿಂದ ಇವನ್ನೆಲ್ಲ ಬಿಟ್ಟು ಬ್ರಹ್ಮವೊಂದನ್ನೇ ಅರಿತುಕೊಳ್ಳಬೇಕು ; ಏಕೆಂದರೆ ಅದೊಂದೇ ಮೋಕ್ಷಕ್ಕೆ ಕಾರಣವಾಗಿರುತ್ತದೆ.

ಹಿಗೆಂದು 'ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಞ್ಚಥಾಮೃತಸ್ಯೈಷ ಸೇತುಃ' (ಆ ಆತ್ಮನೊಬ್ಬನನ್ನೇ ಅರಿತುಕೊಳ್ಳಿರಿ, ಮಿಕ್ಕ ಮಾತುಗಳನ್ನು ಬಿಟ್ಟು ಬಿಡಿರಿ; ಆತನೇ ಅಮೃತತ್ವಕ್ಕೆ ಸೇತು, ಮುಂ. ೨-೨-೫)- ಎಂಬುದೇ ಮುಂತಾದ ಶ್ರುತಿಯು ಸಾರುತ್ತಿರುವದು.

## ಬ್ರಹ್ಮವೇ ಜೀವ, ಜೀವನೇ ಬ್ರಹ್ಮ

**ಸ್ಥಿತೋ ಬ್ರಹ್ಮಾತ್ಮನಾ ಜೀವೋ ಬ್ರಹ್ಮ ಜೀವಾತ್ಮನಾ ಸ್ಥಿತಮ್ ।**
**ಇತಿ ಸಂಪಶ್ಯತಾಂ ಮುಕ್ತಿರಿತಿ ವೇದಾನ್ತಡಿಣ್ಡಿಮಃ ॥೧೫॥**

೧೫. ಜೀವನು ಬ್ರಹ್ಮಸ್ವರೂಪದಿಂದಲೇ ಇರುವನು, ಬ್ರಹ್ಮವೇ ಜೀವರೂಪದಿಂದ ಇರುವದು- ಎಂದು ಕಂಡುಕೊಂಡವರಿಗೆ ಮುಕ್ತಿಯು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಜೀವನು ಬ್ರಹ್ಮವಾಗಿಯೇ ಇರುತ್ತಾನೆ, ಏಕೆಂದರೆ ಅವನ ಪರಮಾರ್ಥಸ್ವರೂಪಕ್ಕೆ ಬ್ರಹ್ಮವೆಂದು ಹೆಸರು. ಬ್ರಹ್ಮವು ಜೀವರೂಪದಿಂದಿರುತ್ತದೆ; ಏಕೆಂದರೆ ಬ್ರಹ್ಮವನ್ನೇ ಅಜ್ಞರು ಜೀವನೆಂದು ಭಾವಿಸಿಕೊಂಡಿರುವರು. ಹೀಗೆಂದು ಶ್ರವಣಮನನನಿದಿಧ್ಯಾಸನಗಳಿಂದ ಸರಿಯಾಗಿ ಕಂಡುಕೊಂಡವರಿಗೆ ಮುಕ್ತಿಯಾಗುವದು.

ಹೀಗೆಂದು 'ತತ್ತ್ವಮಸಿ' (ಅದೇ ನೀನಾಗಿರುವೆ, ಛಾಂ. ೬-೫-೭), 'ಅಹಂ ಬ್ರಹ್ಮಾಸ್ಮಿ' (ನಾನು ಬ್ರಹ್ಮವೇ ಆಗಿರುತ್ತೇನೆ, ಬೃ. ೧-೪-೧೦), 'ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಈ ಜೀವರೂಪದಿಂದ ಈ ಸೃಷ್ಟಿಯನ್ನು ಒಳಹೊಕ್ಕು ನಾಮರೂಪಗಳನ್ನು ವಿಂಗಡಿಸುವೆನು, ಛಾಂ. ೬-೩-೭), 'ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ' (ಪರಮೇಶ್ವರನು ಅವಿದ್ಯಾಪ್ರಜ್ಞೆಗಳಿಂದ ಬಹು ರೂಪನಾಗಿ ಕಾಣುತ್ತಿರುವನು, ಬೃ. ೨-೫-೧೯)- ಮುಂತಾದ ವೇದಾಂತವಚನಗಳು ಸಾರುತ್ತಿರುವವು.

**ಜೀವೋ ಬ್ರಹ್ಮಾತ್ಮನಾ ಜ್ಞೇಯೋ ಜ್ಞೇಯಂ ಜೀವಾತ್ಮನಾ ಪರಮ್ ।**
**ಮುಕ್ತಿಸ್ತದೈಕ್ಯವಿಜ್ಞಾನಾದಿತಿ ವೇದಾನ್ತಡಿಣ್ಡಿಮಃ ॥೧೬॥**

೧೬. ಜೀವನನ್ನು ಬ್ರಹ್ಮರೂಪದಿಂದ ಅರಿತುಕೊಳ್ಳಬೇಕು, ಪರಬ್ರಹ್ಮವೇ ಜೀವನೆಂದು ಅರಿತುಕೊಳ್ಳಬೇಕು. ಈ ಎರಡೂ ಒಂದೇ ಎಂದು ಅರಿತುಕೊಳ್ಳುವದರಿಂದ ಮುಕ್ತಿಯು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಜೀವನು ಬ್ರಹ್ಮವೆಂದು ಅರಿತುಕೊಂಡರೆ ಜೀವನಲ್ಲಿ ಕಾಣುವ ಸಂಸಾರಿತ್ವವು

ಹುಸಿಯೆಂಬ ನಿಶ್ಚಯವು ಆಗುವದು. ಬ್ರಹ್ಮವೇ ಜೀವನೆಂದು ಅರಿತುಕೊಂಡರೆ ಬ್ರಹ್ಮವು ಪರೋಕ್ಷವೆಂಬ ಬುದ್ಧಿಯು ತೊಲಗುವದು. ಅವರೆಡೂ ಒಂದೇ ವಸ್ತುವಾಗಿರುವದರಿಂದ ಇವೆರಡರ ಐಕ್ಯಜ್ಞಾನದಿಂದ ಮುಕ್ತಿಯಾಗುತ್ತದೆ. ಆದ್ದರಿಂದಲೇ ಶ್ರುತಿಯು 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಬ್ರಹ್ಮವನ್ನು ಅರಿತನಾದರೆ ಬ್ರಹ್ಮವೇ ಆಗುವವನು, ಮು. ೩-೨-೯) ಎಂದು ಜ್ಞಾನಮಾತ್ರದಿಂದಲೇ ಜೀವನಿಗೆ ಬ್ರಹ್ಮತ್ವವು ಪ್ರಾಪ್ತವಾಗುವದೆಂದು ಸಾರುತ್ತಿದೆ, ಹೀಗಲ್ಲದೆ ಈ ಎರಡೂ ಬೇರೆಬೇರೆಯಾಗಿದ್ದರೆ ಅವುಗಳ ಐಕ್ಯವನ್ನು ಅರಿತದ್ದರಿಂದ ಎಂದಿಗೂ ಮುಕ್ತಿಯಾಗುವ ಸಂಭವವಿರುತ್ತಿರಲಿಲ್ಲ. ಆದ್ದರಿಂದಲೇ ಶ್ರುತಿಯಲ್ಲಿ 'ತದ್ಯೋಽಹಂ ಸೋಽಸೌ ಯೋಽಸೌ ಸೋಽಹಮ್' (ಆದ್ದರಿಂದ ನಾನು ಯಾವನೋ ಇವನು ಅವನೇ, ಇವನು ಯಾವನೋ ಅವನೇ ನಾನು, ಐ. ಆ. ೨-೨-೪) -ಎನ್ನುತ್ತಿದೆ.

## ಬ್ರಹ್ಮಜ್ಞಾನವು ಅನಾಯಾಸಲಭ್ಯ

**ಸರ್ವಾತ್ಮತ್ವಾತ್ ಪರಂ ಬ್ರಹ್ಮ ಶ್ರೋತುರಾತ್ಮತಯಾ ಸ್ಥಿತಮ್ ।**
**ನಾಯಾಸಸ್ತತ್ತ್ವವಿಜ್ಞಪ್ತಾವಿತಿ ವೇದಾನ್ತಡಿಣ್ಡಿಮಃ ॥೧೭॥**

೧೭. ಪರಬ್ರಹ್ಮವು ಎಲ್ಲರಿಗೂ ಆತ್ಮನಾಗಿರುವದರಿಂದ ಶ್ರೋತೃವಿಗೆ ಆತ್ಮನೇ ಆಗಿರುತ್ತದೆ. ಅದನ್ನು ಹೀಗೆಂದು ಅರಿತುಕೊಳ್ಳುವದರಲ್ಲಿ ಯಾವ ಆಯಾಸವೂ ಇಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಸರ್ವಜಗತ್ಕಾರಣವಾಗಿರುವ ಪರಬ್ರಹ್ಮವು ಎಲ್ಲಕ್ಕೂ ಆತ್ಮನಾಗಿರುತ್ತದೆ. ಆದ್ದರಿಂದ ಪರಮಾರ್ಥದೃಷ್ಟಿಯಿಂದ ಶ್ರೋತೃವಿಗೆ ಆತ್ಮನೇ ಆಗಿರುತ್ತದೆ. ಆದ್ದರಿಂದ ಅದು ಅತ್ಯಂತಪ್ರಸಿದ್ಧವಾಗಿರುವದರಿಂದ ಅದನ್ನು ಅರಿತುಕೊಳ್ಳುವದರಲ್ಲಿ ಯಾವ ಆಯಾಸವೂ ಇರುವದಿಲ್ಲ. ಅವಿದ್ಯಾಕಲ್ಪಿತವಾಗಿರುವ ಅನಾತ್ಮದ ಆಕಾರವಿಶೇಷಗಳಲ್ಲಿಯೇ ನೆಟ್ಟಚಿತ್ತವುಳ್ಳವರಾದ್ದರಿಂದ ಅಜ್ಞರು ಅದು ಅಪ್ರಸಿದ್ಧವಸ್ತುವೆಂದೂ ಅದನ್ನು ತಿಳಿದುಕೊಳ್ಳುವದು ಕಷ್ಟವೆಂದೂ ಅದು ಎಲ್ಲಿಯೋ ದೂರವಿರುವದೆಂದೂ ತಮಗಿಂತ ಬೇರೆಯೆಂದೂ ಭಾವಿಸಿಕೊಂಡಿರುತ್ತಾರೆ. ಅವಿದ್ಯೆಯನ್ನು ಜ್ಞಾನದಿಂದ ತೊಲಗಿಸಿಕೊಂಡ ಮಾತ್ರದಿಂದ ಅದು ಸ್ವಯಂಸಿದ್ಧವೂ, ಸ್ವಯಂಪ್ರಕಾಶವೂ, ಅತ್ಯಂತಸಮೀಪದಲ್ಲಿರತಕ್ಕದ್ದೂ, ನೇರಾಗಿ ತಮ್ಮ ಸ್ವರೂಪವೇ ಆಗಿರುವದೂ ಗೊತ್ತಾಗುತ್ತದೆ.

ಹೀಗೆಂದು ವೇದಾಂತಗಳ ಡಂಗುರವಿದೆ. 'ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ

ಆತ್ಮಾ ಸರ್ವಾನ್ತರಃ' (ಅದು ನೇರಾಗಿರುವ ಅಪರೋಕ್ಷಬ್ರಹ್ಮವು, ಅದು ಎಲ್ಲಕ್ಕೂ ಒಳಗಿನ ಆತ್ಮನು, ಬೃ. ೩-೪-೧), 'ನಾನ್ಯೋಽತೋಽಸ್ತಿ ವಿಜ್ಞಾತಾ' (ಇವನಿಗಿಂತ ಬೇರೆಯಾದ ವಿಜ್ಞಾತೃವೇ ಇಲ್ಲ , ಬೃ. ೩-೭-೨೩) -ಮುಂತಾದ ವಾಕ್ಯಗಳು ಹೀಗೆಂದು ಸಾರುತ್ತಿವೆ.

## ಸರ್ವಕರ್ಮತ್ಯಾಗಪೂರ್ವಕವಾಗಿ ಬ್ರಹ್ಮವನ್ನೇ ಅರಿತುಕೊಳ್ಳಬೇಕು

**ಐಹಿಕಂ ಚಾಮುಷ್ಮಿಕಂ ಚ ತಾಪಾನ್ತಂ ಕರ್ಮಸಞ್ಜ್ಞಿಯಮ್ ।**
**ತ್ಯಕ್ತ್ವಾ ಬ್ರಹ್ಮೈವ ವಿಜ್ಞೇಯಮಿತಿ ವೇದಾನ್ತಡಿಣ್ಡಿಮಃ ॥೧೮॥**

೧೮. ಸಂತಾಪದಲ್ಲಿಯೇ ಕೊನೆಗಾಣುವದಾದ ಇಹಲೋಕದ ಮತ್ತು ಪರಲೋಕದ ಭೋಗಕ್ಕಾಗಿ ಮಾಡುವ ಕರ್ಮಸಂಚಯವನ್ನು ಬಿಟ್ಟು ಬ್ರಹ್ಮವನ್ನೇ ಅರಿತುಕೊಳ್ಳಬೇಕು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಬ್ರಹ್ಮವನ್ನು ಅರಿತುಕೊಳ್ಳುವದು ಸುಲಭ, ಅರಿತುಕೊಂಡರೆ ಸರ್ವದುಃಖ ನಾಶಪೂರ್ವಕವಾದ ಮೋಕ್ಷವೂ ದೊರಕುವದು. ಕರ್ಮವನ್ನು ರಾಶಿಹಾಕಿಕೊಳ್ಳುವದು ಇದಕ್ಕೆ ವಿಪರೀತವಾಗಿರುತ್ತದೆ. ಏಕೆಂದರೆ ಕರ್ಮವು ಐಹಿಕವಾಗಿದ್ದರೂ ಪಾರತ್ರಿಕವಾಗಿದ್ದರೂ ಅದನ್ನು ಮಾಡುವದು ಆಯಾಸವೆಂಬುದು ಲೋಕದಲ್ಲಿಯೇ ಪ್ರಸಿದ್ಧವಾಗಿದೆ. ಅದನ್ನು ಮಾಡಿದಮೇಲೆ ಸಿಕ್ಕುವ ಫಲವೂ ಕ್ಷಯವಾಗತಕ್ಕದ್ದಾಗಿರುವದರಿಂದ ಕೊನೆಯಲ್ಲಿ ದುಃಖವನ್ನೇ ಕೊಡುತ್ತದೆ. ಆದ್ದರಿಂದ ಕರ್ಮವನ್ನು ಬಿಟ್ಟು ಬ್ರಹ್ಮವನ್ನೇ ಅರಿತುಕೊಳ್ಳಬೇಕು.

ಇದಕ್ಕೆ ವೇದಾಂತಡಂಗುರದ ಬೆಂಬಲವಿದೆ. 'ತದ್ಯಥೇಹ ಕರ್ಮಜಿತೋ ಲೋಕಃ ಕ್ಷೀಯತ ಏವಮೇವಾಮುತ್ರ ಪುಣ್ಯಜಿತೋ ಲೋಕಃ ಕ್ಷೀಯತೇ' (ಈ ಲೋಕದಲ್ಲಿ ಕರ್ಮದಿಂದ ಗೆದ್ದುಕೊಂಡ ಭೋಗವು ಕ್ಷಯವಾಗುವಂತೆಯೇ ಪುಣ್ಯದಿಂದ ಗೆದ್ದುಕೊಂಡ ಪರಲೋಕದ ಭೋಗವೂ ಕ್ಷಯವಾಗುತ್ತದೆ, ಛಾಂ. ೮-೧-೬), 'ತೇಷಾಂ ಸುಖಂ ಶಾಶ್ವತಂ ನೇತರೇಷಾಮ್' (ಅವರಿಗೇ ಶಾಶ್ವತವಾದ ಸುಖವೇ ಹೊರತು ಮಿಕ್ಕವರಿಗಲ್ಲ, ಶ್ವೇ. ೬-೧೨) -ಮುಂತಾದ ವಚನಗಳು ಹೀಗೆಂದು ಸಾರುತ್ತಿವೆ.

## ಅದ್ವೈತಜ್ಞಾನವೇ ಆತ್ಯಂತಿಕಮೋಕ್ಷಸಾಧನವು

**ಅದ್ವೈತದ್ವೈತವಾದೌ ದ್ವೌ ಸೂಕ್ಷ್ಮಸ್ಥೂಲದಶಾಂ ಗತೌ ।**
**ಅದ್ವೈತವಾದಾನ್ಮೋಕ್ಷಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೧೯॥**

೧೯. ಅದ್ವೈತವಾದ, ದ್ವೈತವಾದ- ಎಂದು ಎರಡು ವಾದಗಳುಂಟು. ಇವುಗಳಲ್ಲಿ ಒಂದು ಸ್ಥೂಲಾವಸ್ಥೆಯದು, ಇನ್ನೊಂದು ಸೂಕ್ಷ್ಮಾವಸ್ಥೆಯದು. ಅವುಗಳೊಳಗೆ ಅದ್ವೈತವಾದದಿಂದಲೇ ಮೋಕ್ಷವಾಗುವದು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ದ್ವೈತವಾದವೆಂದರೆ ಕ್ರಿಯಾಕಾರಕಫಲಭೇದವು ಸತ್ಯವೆಂಬ ವಾದವು . ನಾನು ಕರ್ತೃ, ಈ ಕ್ರಿಯೆಯನ್ನು ಮಾಡಿ ಈ ಫಲವನ್ನು ಅನುಭವಿಸುವೆನು- ಎಂಬ ಗಟ್ಟಿಯಾದ ನಂಬಿಕೆಯೇ ಈ ವಾದಕ್ಕೆ ಆಧಾರವು. ಆದರೆ ಇದು ಸ್ಥೂಲದೃಷ್ಟಿಯ ಅವಸ್ಥೆಯಲ್ಲಿ ಮಾತ್ರವೇ ನಿಲ್ಲುವ ವಾದವಾಗಿರುತ್ತದೆ. ಏಕೆಂದರೆ ಸೂಕ್ಷ್ಮಬುದ್ಧಿಯಿಂದ ವಿಚಾರ ಮಾಡಿದವರಿಗೆ ನಾನು ಕರ್ತೃವೂ ಅಲ್ಲ , ಭೋಕ್ತೃವೂ ಅಲ್ಲ; ನನಗೆ ಮಾಡಿದ್ದರಿಂದಲಾಗಲಿ ಮಾಡದೆ ಬಿಟ್ಟಿದ್ದರಿಂದಲಾಗಲಿ ಆಗಬೇಕಾದದ್ದು ಏನೂ ಇರುವದಿಲ್ಲ; ನಾನು ನಿಜವಾಗಿ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಅದ್ವಿತೀಯಾತ್ಮನೇ- ಎಂಬ ಅದ್ವೈತವಾದವೇ ಯುಕ್ತವಾಗಿ ತೋರುತ್ತದೆ.

ಅವಿಚಾರದಶೆಯ ಸ್ಥೂಲದೃಷ್ಟಿಗೆ ಕಾಣುವ ದ್ವೈತವೇ ಬಂಧಕ್ಕೆ ಕಾರಣವಾಗಿರುತ್ತದೆ; ವಿಚಾರಾಂತ್ಯದಲ್ಲಿ ಸೂಕ್ಷ್ಮದೃಷ್ಟಿಯಿಂದ ಮನದಟ್ಟಾಗುವ ಅದ್ವೈತದ ಜ್ಞಾನವೇ ಈ ಬಂಧದಿಂದ ಬಿಡುಗಡೆಯನ್ನು ಹೊಂದುವದಕ್ಕೆ ಕಾರಣವಾಗಿರುತ್ತದೆ- ಎಂಬುದು ವೇದಾಂತದ ಡಂಗುರವು. 'ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ' (ಆತ್ಮನು ಒಬ್ಬನೇ ಎಂಬುದನ್ನು ಕಂಡುಕೊಂಡವನಿಗೆ ಮೋಹವೆಲ್ಲಿಯದು, ಶೋಕವೆಲ್ಲಿಯದು? ಈ. ೭), 'ಮೃತ್ಯೋಃ ಸ ಮೃತ್ಯುಂ ಗಚ್ಛತಿ ಯ ಇಹ ನಾನೇವ ಪಶ್ಯತಿ' (ಯಾವನು ಈ ಬ್ರಹ್ಮದಲ್ಲಿ ನಾನಾತ್ವವಿರುವಂತೆ ಕಾಣುವನೋ ಅವನು ಮೃತ್ಯುವಿನಿಂದ ಮೃತ್ಯುವಿಗೆ ಹೋಗುತ್ತಿರುವನು, ಕ. ೨-೧-೧೧) -ಮುಂತಾದ ವಚನಗಳು ಇದಕ್ಕೆ ಉದಾಹರಣೆ.

**ಕರ್ಮಿಣೋ ವಿನಿವರ್ತನ್ತೇ ನಿವರ್ತನ್ತ ಉಪಾಸಕಾಃ ।**
**ಜ್ಞಾನಿನೋ ನ ನಿವರ್ತನ್ತ ಇತಿ ವೇದಾನ್ತಡಿಣ್ಡಿಮಃ ॥೨೦॥**

೨೦. ಕರ್ಮಿಗಳು ಹಿಂತೆರಳುವರು, ಉಪಾಸಕರೂ ಹಿಂತೆರಳುವರು ; ಜ್ಞಾನಿಗಳು ಮಾತ್ರ ಹಿಂತಿರುಗುವದಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ದ್ವೈತವಾದದಲ್ಲಿ ಕರ್ಮವೋ ಉಪಾಸನೆಯೋ- ಫಲಕ್ಕೆ ಸಾಧನಗಳಾಗಿರುವವು. ಆದರೆ ಕೃತಕವಾದದ್ದು ಅನಿತ್ಯವಾಗಿರಲೇಬೇಕಾಗುವದರಿಂದ ಅವುಗಳಿಂದ ಸಿಕ್ಕುವ ಫಲವು ಮೋಕ್ಷವಾಗಲಾರದು. ಏಕೆಂದರೆ ಮೋಕ್ಷವು ನಿತ್ಯವೆಂದು ಎಲ್ಲಾ ವೇದಾಂತಿಗಳೂ ಒಪ್ಪಿರುತ್ತಾರೆ. ನಿತ್ಯವಾದದ್ದು ಯಾವ ಕಾಯಿಕ, ವಾಚಿಕ, ಅಥವಾ ಮಾನಸಿಕಕರ್ಮದಿಂದಲೂ ಲಭಿಸಲಾರದು.

ಕರ್ಮದಿಂದ ಸ್ವರ್ಗವೂ ಉಪಾಸನೆಯಿಂದ ಬ್ರಹ್ಮಲೋಕವೂ ಸಿಕ್ಕುವವೆಂದು ಶಾಸ್ತ್ರದಲ್ಲಿ ಹೇಳಿದೆ; ಸ್ವರ್ಗವನ್ನೂ ಬ್ರಹ್ಮಲೋಕವನ್ನೂ ಮಿಕ್ಕಲೋಕಗಳ ಅಪೇಕ್ಷೆಯಿಂದ ನಿತ್ಯವೆಂದೂ ಕರೆದಿರುವದುಂಟು. ಆದರೆ ಪರಮಾರ್ಥವಾಗಿ ಇವೆರಡೂ ಅನಿತ್ಯವೇ. ಪುಣ್ಯಕರ್ಮವು ಸವೆದಮೇಲೆ ಮತ್ತೆ ಸ್ವರ್ಗದಿಂದ ಈ ಲೋಕಕ್ಕೆ ಬರಬೇಕಾಗುವದು; ಹೀಗೆಯೇ ಬ್ರಹ್ಮಲೋಕಕ್ಕೆ ಹೋದವರೂ ಕಲ್ಪಾಂತರದಲ್ಲಿ ಹಿಂತೆರಳಬೇಕಾಗುವದು. ಆದ್ದರಿಂದ ಅವೆರಡೂ ಅನಿತ್ಯಫಲಗಳೇ. ಜ್ಞಾನದಿಂದಾಗುವ ಮುಕ್ತಿಯೋ ಎಂದರೆ ನಿತ್ಯಸಿದ್ಧವಾಗಿರುವ ಆತ್ಮಸ್ವರೂಪವೇ ಆಗಿರುತ್ತದೆ. ಮೊದಲಿನವೆರಡೂ ಅಪ್ರಾಪ್ತ ಪ್ರಾಪ್ತಿರೂಪವಾಗಿರುತ್ತದೆ; ಜ್ಞಾನದಿಂದ ಹೊಸದಾಗಿ ಯಾವದೂ ಪ್ರಾಪ್ತವಾಗುವದಿಲ್ಲ . ಇದ್ದ ನಿತ್ಯಮುಕ್ತಸ್ವರೂಪವೇ ತಿಳಿದುಬಂದು ನಿತ್ಯಾನಂದದಲ್ಲಿದ್ದು ಬಿಡುತ್ತಾನೆ. ಆದ್ದರಿಂದ ಜ್ಞಾನದಿಂದ ಪಡೆದ ಫಲಕ್ಕೆ ಮಾತ್ರವೇ ಪುನರಾವೃತ್ತಿಯಿಲ್ಲ ಎಂದು ಹೇಳಿದ್ದು ಸರಿಯೇ.

ಹೀಗೆಂದು ವೇದಾಂತಗಳ ಡಂಗುರವಿದೆ. 'ತ ಏವ ಪುನರಾವರ್ತನ್ತೇ' (ಆ ಕರ್ಮಿಗಳೇ ಮತ್ತೆ ಹಿಂತೆರಳುವರು, ಪ್ರ. ೧-೯), 'ಜರಾಮೃತ್ಯುಂ ತೇ ಪುನರೇವಾಪಿಯನ್ತಿ' (ಆ ಕರ್ಮಿಗಳು ಮತ್ತೂ ಮುಪ್ಪುಸಾವುಗಳನ್ನು ಸೇರುವರು, ಮುಂ. ೧-೨-೭) ಮುಂತಾದ ಶ್ರುತಿಗಳು ಕರ್ಮಿಗಳಿಗೆ ಪುನರಾವೃತ್ತಿಯುಂಟೆಂದು ತಿಳಿಸುವವು. ಉಪಾಸಕರಿಗೂ ಪುನರಾವೃತ್ತಿಯಿಲ್ಲವೆಂದು 'ತೇಷಾಂ ನ ಪುನರಾವೃತ್ತಿಃ' (ಬೃ. ೬-೨-೧೫), 'ಏತಸ್ಮಾನ್ನ ಪುನರಾವರ್ತನ್ತೇ' (ಇಲ್ಲಿಂದ ಮತ್ತೆ ಹಿಂತೆರಳುವದಿಲ್ಲ, ಪ್ರ. ೧-೧೦) ಮುಂತಾದ ಶ್ರುತಿಗಳಲ್ಲಿ ಹೇಳಿದ್ದರೂ 'ಸಂಯೋಗಾ ವಿಪ್ರಯೋಗಾನ್ತಾಃ' ಸೇರಿದ್ದು ಕೊನೆಗೆ ಬಿಟ್ಟಗಲಬೇಕು ಎಂಬ ನ್ಯಾಯದಿಂದ ಆ ಅಪುನರಾವೃತ್ತಿಯು ಆತ್ಯಂತಿಕವಲ್ಲವೆಂದು ಹೇಳಬೇಕಾಗುತ್ತದೆ. 'ತೇಷಾಮಿಹ ನ ಪುನರಾವೃತ್ತಿರಸ್ತಿ' (ಬೃ. ಮಾ. ೬-೧-೧೮), 'ಇಮಂ ಮಾನವಮಾವರ್ತಂ ನಾವರ್ತನ್ತೇ' (ಈ ಮಾನವಸೃಷ್ಟಿಯ ಸುಳಿಗೆ ಹಿಂತಿರುಗಿಬರುವದಿಲ್ಲ, ಛಾಂ. ೪-೧೫-೫) ಎಂಬ ಶ್ರುತಿಗಳಲ್ಲಿ ಈ ಕಲ್ಪದಲ್ಲಿ ಮಾತ್ರ ಅವರಿಗೆ ಪುನರಾವೃತ್ತಿಯಿಲ್ಲ ಎಂದೇ ಹೇಳಿದೆ. ಬ್ರಹ್ಮಲೋಕದಲ್ಲಿ

ಜ್ಞಾನವುಂಟಾದವರಿಗೆ ಬ್ರಹ್ಮನೊಡನೆಯೇ ಮುಕ್ತಿಯಾಗುವದೂ ಉಂಟು; ಜ್ಞಾನದಿಂದಲೇ ಮುಕ್ತಿ ಎಂಬ ಸಿದ್ಧಾಂತಕ್ಕೆ ಅದರಿಂದ ಯಾವ ವಿರೋಧವೂ ಇಲ್ಲವೆಂಬುದು ಸ್ಪಷ್ಟವೇ ಆಗಿದೆ.

**ಪರೋಕ್ಷಾಸತ್ಫಲಂ ಕರ್ಮ ಜ್ಞಾನಂ ಪ್ರತ್ಯಕ್ಷಸತ್ಫಲಮ್ ।**
**ಜ್ಞಾನಮೇವಾಭ್ಯಸೇತ್ ತಸ್ಮಾದಿತಿ ವೇದಾನ್ತಡಿಣ್ಡಿಮಃ ॥೨೧॥**

೨೧. ಕರ್ಮವು ಪರೋಕ್ಷವಾದ ಮಿಥ್ಯಾಫಲವುಳ್ಳದ್ದು , ಜ್ಞಾನವು ಪ್ರತ್ಯಕ್ಷವಾದ ಸತ್ಫಲವುಳ್ಳದ್ದು . ಆದ್ದರಿಂದ ಜ್ಞಾನವನ್ನೇ ಅಭ್ಯಾಸಮಾಡಬೇಕು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಕರ್ಮದ ಫಲವು ಅನಿತ್ಯವೆಂಬುದು ಮಾತ್ರವೇ ಅಲ್ಲ; ಅದು ಕಾಲಾಂತರದಲ್ಲಿ ಲೋಕಾಂತರದಲ್ಲಿ ಆಗುವದಾಗಿರುತ್ತದೆ, ಮತ್ತು ಬರಿಯ ತೋರಿಕೆಯದಾಗಿರುವದರಿಂದ ಮಿಥ್ಯಾರೂಪವೂ ಆಗಿರುತ್ತದೆ. ಆದರೆ ಜ್ಞಾನದ ಫಲವಾದ ಮೋಕ್ಷವು ಈಗಲೇ ಇಲ್ಲಿಯೇ ದೊರಕತಕ್ಕದ್ದಾಗಿದೆ; ಸ್ವಲ್ಪವೂ ಮಾರ್ಪಡದ ಸ್ವರೂಪದ್ದಾದ್ದರಿಂದ ಸದ್ರೂಪವೂ ಆಗಿದೆ.

ಆದ್ದರಿಂದ ಜ್ಞಾನವನ್ನೇ ಅಭ್ಯಾಸಮಾಡಬೇಕು, ಎಂದರೆ ಜ್ಞಾನಕ್ಕಾಗಿ ಅಮಾನಿತ್ವಾದಿಗಳನ್ನೂ ಶ್ರವಣಾದಿಸಾಧನಗಳನ್ನೂ ಅಭ್ಯಾಸಮಾಡಬೇಕು. ಏಕೆಂದರೆ ವಿವೇಕಿಯಾದವನು ಯಾವನು ತಾನೆ ಕೈಯಲ್ಲಿರುವ ಚಿನ್ನದೊಡವೆಯನ್ನು ಬಿಟ್ಟು ಕನಸಿನ ಗನಿಯಲ್ಲಿಯೋ ಅಥವಾ ಕನ್ನಡಿಯಲ್ಲಿಯೋ ಇರುವ ಚಿನ್ನಕ್ಕಾಗಿ ಹವಣಿಸಿಯಾನು?

ಆದ್ದರಿಂದಲೇ ವೇದಾಂತವಚನಗಳು ಹೀಗೆಂದು ಸಾರುತಿವೆ 'ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತೀ ವಿನಷ್ಟಿಃ' (ಇಲ್ಲಿಯೇ ಅರಿತುಕೊಂಡರೆ ಪರಮಾರ್ಥವಾದ ಲಾಭವಿದೆ, ಅರಿತುಕೊಳ್ಳದಿದ್ದರೆ ಹೆಚ್ಚು ನಷ್ಟವಾಗುವದು, ಕೇ. ೨-೫), 'ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ' (ಆಗ ಮರ್ತ್ಯನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುವನು, ಕ. ೨-೩-೧೪), 'ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ' (ಅವನನ್ನೇ ಹುಡುಕಬೇಕು, ಅವನನ್ನೇ ಅರಿತುಕೊಳ್ಳಬೇಕು, ಛಾಂ. ೮-೭-೧).

## ಜ್ಞಾನವಾಗುವದಕ್ಕೆ ಕರ್ಮಾದಿಗಳೂ ಬೇಕು

ವೃಥಾಶ್ರಮೋಽಯಂ ವಿದುಷಾಂ ವೃಥಾಯಂ ಕರ್ಮಿಣಾಂ ಶ್ರಮಃ ।
ಯದಿ ನ ಬ್ರಹ್ಮವಿಜ್ಞಾನಮಿತಿ ವೇದಾನ್ತಡಿಣ್ಡಿಮಃ ॥೨೨॥

೨೨. ಬ್ರಹ್ಮಜ್ಞಾನವೊಂದು ಆಗದಿದ್ದರೆ ಈ ವಿದ್ವಾಂಸರ ಶ್ರಮವು ವ್ಯರ್ಥ, ಈ ಕರ್ಮಿಗಳ ಶ್ರಮವೂ ವ್ಯರ್ಥ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಕರ್ಮೋಪಾಸನೆಗಳಿಗೆ ಆಗುವ ಫಲವು ಪರೋಕ್ಷವೆಂದೂ ಅಸತ್ತೆಂದೂ ಹೇಳಿದ್ದರಿಂದ ಅವಕ್ಕೆ ಯಾವ ಬೆಲೆಯೂ ಇಲ್ಲವೆಂದು ತಿಳಿಯಬಾರದು. ಅವುಗಳಿಗೆ ಆಗುವ ಸ್ವರ್ಗಬ್ರಹ್ಮಲೋಕಗಳ ಲಾಭವೊಂದೇ ಫಲವಲ್ಲ; ಜ್ಞಾನಕ್ಕೂ ಅವು ಕಾರಣವಾಗಿರುತ್ತವೆ. ಆದ್ದರಿಂದ ಕರ್ಮೋಪಾಸನೆಗಳಿಗೆ ಜ್ಞಾನವೆಂಬ ಫಲವು ಆಗದೆ ಇದ್ದಾಗ ಮಾತ್ರ ಜ್ಞಾನಫಲಕ್ಕೆ ಹೋಲಿಸಿ ಅವುಗಳ ಫಲವನ್ನು ನಿಂದಿಸಲಾಗಿದೆ. ಅಷ್ಟೆ. ಜ್ಞಾನವನ್ನು ಸಂಪಾದಿಸುವದೇ ವಿವೇಕಿಗಳ ಗುರಿಯಾಗಿರಬೇಕು. ಹಾಗಿಲ್ಲದಿದ್ದರೆ ಮುಖ್ಯಫಲವಾದ ಪರಮಪುರುಷಾರ್ಥವು ಅವುಗಳಿಗೆ ದೊರಕದು; ಈ ದೃಷ್ಟಿಯಿಂದ ಕರ್ಮಿಗಳ ಮತ್ತು ವಿದ್ವಾಂಸರ ಎಂದರೆ ಉಪಾಸಕರ ಶ್ರಮವು ವ್ಯರ್ಥವೇ ಎಂದಿದೆ.

ಹೀಗೆಂದು ವೇದಾಂತದ ಡಂಗುರವಿದೆ, 'ಯತ್ಕರ್ಮಿಣೋ ನ ಪ್ರವೇದಯನ್ತಿ ರಾಗಾತ್ತೇನಾಽಽತುರಾ ಕ್ಷೀಣಲೋಕಾಶ್ಚ್ಯವನ್ತೇ' (ಕರ್ಮಿಗಳು ಕರ್ಮಫಲರಾಗನಿಮಿತ್ತದಿಂದ ತತ್ತ್ವವನ್ನು ಅರಿತುಕೊಳ್ಳದೆ ಇರುವದರಿಂದ ದುಃಖದಿಂದ ಸಂಕಟಪಡುತ್ತಾ ಕರ್ಮಫಲವು ಸವೆಯಲು ಸ್ವರ್ಗಲೋಕದಿಂದ ಜಾರಿಬೀಳುತ್ತಾರೆ, ಮುಂ. ೧-೨-೯), 'ಯೋ ವಾ ಏತದಕ್ಷರಂ ಗಾರ್ಗ್ಯ ವಿದಿತ್ವಾಽಸ್ಮಿಲ್ಲೋಕೇ ಜುಹೋತಿ ಯಜತೇ ತಪಸ್ತಪ್ಯತೇ ಬಹೂನಿ ವರ್ಷ ಸಹಸ್ರಾಣ್ಯನ್ತವದೇವಾಸ್ಯ ತದ್ಭವತಿ ಯೋ ವಾ ಏತದಕ್ಷರಂ ಗಾರ್ಗ್ಯ ವಿದಿತ್ವಾಽಸ್ಮಾಲ್ಲೋಕಾತ್ ಪ್ರೈತಿ ಸ ಕೃಪಣಃ' (ಗಾರ್ಗಿಯೆ, ಯಾವನು ಈ ಅಕ್ಷರವನ್ನು ಅರಿತುಕೊಳ್ಳದೆ ಈ ಲೋಕದಲ್ಲಿ ಹೋಮಮಾಡುವನೋ, ಯಾಗ ಮಾಡುವನೋ, ತಪಸ್ಸನ್ನು ಮಾಡುವನೋ, ಅವನು ಬಹುವರ್ಷಗಳವರೆಗೆ, ಹಾಗೆ ಮಾಡಿದರೂ ಅದು ಅಂತವುಳ್ಳದ್ದೇ ಆಗುತ್ತದೆ. ಎಲೈ ಗಾರ್ಗಿಯೆ, ಯಾವನು ಈ ಅಕ್ಷರವನ್ನು ಅರಿತುಕೊಳ್ಳದೆ ಈ ಲೋಕವನ್ನು ಬಿಟ್ಟು ತೆರಳುವನೋ ಅವನು ಕೃಪಣನು, ಬೃ. ೩-೮-೧೦), 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾಽನಾಶಕೇನ' (ಆ ಈ ಪರಮಾತ್ಮನನ್ನು ವೇದಾಧ್ಯಯನದಿಂದಲೂ

ಯಜ್ಞದಿಂದಲೂ ದಾನದಿಂದಲೂ ಅನಶನರೂಪವಾದ ತಪಸ್ಸಿನಿಂದಲೂ ಅರಿತುಕೊಳ್ಳುವದಕ್ಕೆ ಇಚ್ಛಿಸುತ್ತಾರೆ, ಬೃ. ೪-೪-೨೨). ಈ ವಚನಗಳು ಉದಾಹರಣೆ.

## ಜ್ಞಾನವಾದಮೇಲೆ ಮುಕ್ತಿಗೆ ಯಾವ ಸಾಧನವೂ ಬೇಡ

**ಅಲಂ ಯಾಗೈರಲಂ ಯೋಗೈರಲಂ ಭೋಗೈರಲಂ ಧನೈಃ ।**
**ಪರಸ್ಮಿನ್ ಬ್ರಹ್ಮಣಿ ಜ್ಞಾತ ಇತಿ ವೇದಾನ್ತಿಡಿಣ್ಡಿಮಃ ॥೨೩॥**

೨೩. ಪರಬ್ರಹ್ಮವನ್ನರಿತುಕೊಂಡಮೇಲೆ ಯಾಗಗಳಿಂದಲೇನು? ಯೋಗಗಳಿಂದಲೇನು? ಭೋಗಗಳಿಂದಲೇನು? ಆಸ್ತಿಗಳಿಂದಲೇನು? ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಕರ್ಮಗಳಿಂದ ಚಿತ್ತಶುದ್ಧಿಯೂ ಯೋಗಾಭ್ಯಾಸಗಳಿಂದ ಚಿತ್ತವಿಕ್ಷೇಪ ಪರಿಹಾರವೂ ಆಗಿ ಜ್ಞಾನವು ಬರುತ್ತದೆಯೆಂಬ ಕಾರಣದಿಂದ ಅವನ್ನು ಅನುಷ್ಠಾನಮಾಡಬೇಕಾಗಿರುತ್ತದೆ. ಧನಗಳೆಂಬಿವು ಕರ್ಮಾರ್ಥವಾಗಿ ಬೇಕು. ಆದ್ದರಿಂದ ಇವು ಜ್ಞಾನಾರ್ಥವಾಗಿಯೇ ಬೇಕಾಗಿರುವದರಿಂದ ಜ್ಞಾನವು ಹುಟ್ಟಿದಬಳಿಕ ಇವುಗಳ ಕೆಲಸವೇನೂ ಉಳಿಯುವದಿಲ್ಲ. ಇವುಗಳಿಂದ ಇಹಪರಫಲಭೋಗಗಳೂ ಆಗಬಹುದು, ನಿಜ; ಆದರೆ ಆನಂದರೂಪವಾದ ಬ್ರಹ್ಮವನ್ನರಿತು ಆನಂದಸ್ವರೂಪದಲ್ಲಿಯೇ ನೆಲೆನಿಂತಿರುವವನಿಗೆ ಕ್ಷುದ್ರ ಭೋಗಗಳಿಂದಾಗಬೇಕಾದ ಸುಖದ ಬಯಕೆಯೂ ಇರುವಂತಿಲ್ಲ. ಆದ್ದರಿಂದ ಜ್ಞಾನವಾದಬಳಿಕ ಮತ್ತೆ ಯಾವದನ್ನು ಮಾಡಬೇಕಾದದ್ದಿರುವದಿಲ್ಲ- ಎಂಬುದು ವೇದಾಂತಗಳ ಉಪದೇಶವು.

ಹೀಗೆಂದು ವೇದಾಂತಗಳ ಡಂಗುರವಿದೆ. ಉದಾಹರಣೆಗೆ ಈ ವಚನಗಳನ್ನು ಕೊಡಬಹುದು: 'ಆತ್ಮಾನಂ ಚೇದ್ವಿಜಾನೀಯಾದಯಮಸ್ಮೀತಿ ಪೂರುಷಃ । ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್ ॥' (ಈ ಪರಮಾತ್ಮನೇ ನಾನು ಎಂದು ಪುರುಷನು ಅರಿತುಕೊಂಡುಬಿಟ್ಟರೆ, ಏತರ ಇಚ್ಛೆಯಿಂದ, ಯಾವ ಕಾಮಕ್ಕಾಗಿ ಶರೀರವನ್ನು ಸಂಕಟಗೊಳಿಸಿಯಾನು? ಬೃ. ೪-೪-೧೨), 'ಪರ್ಯಾಪ್ತಕಾಮಸ್ಯ ಕೃತಾತ್ಮನಸ್ತು ಇಹೈವ ಸರ್ವೇ ಪ್ರವಿಲೀಯನ್ತಿ ಕಾಮಾಃ' (ಆತ್ಮರೂಪವನ್ನು ಪಡೆದು ಸಂಪೂರ್ಣವಾಗಿ ಕಾಮಗಳೆಲ್ಲವನ್ನೂ ಪಡೆದುಕೊಂಡವನಿಗೆ ಕಾಮಗಳೆಲ್ಲವೂ ಈ ಶರೀರವಿರುವಾಗಲೇ ಅಡಗಿಹೋಗುವವು, ಮು. ೩-೨-೨).

**ಅಲಂ ವೇದೈರಲಂ ಶಾಸ್ತ್ರೈರಲಂ ಸ್ಮೃತಿಪುರಾಣಕೈಃ ।**
**ಪರಮಾತ್ಮನಿ ವಿಜ್ಞಾತ ಇತಿ ವೇದಾನ್ತಡಿಣ್ಡಿಮಃ ॥೨೪॥**

೨೪. ಪರಮಾತ್ಮನನ್ನು ಅರಿತುಕೊಂಡಮೇಲೆ ವೇದಗಳಿಂದೇನು? ಶಾಸ್ತ್ರಗಳಿಂದೇನು? ಸ್ಮೃತಿಪುರಾಣಗಳಿಂದೇನು? ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಯಾವ ಶಾಸ್ತ್ರವೇ ಆಗಲಿ ನೇರಾಗಿ ಅಥವಾ ಪರಂಪರೆಯಿಂದ ವೇದಾರ್ಥವನ್ನು ನಿರ್ಣಯಿಸುವದಕ್ಕೆ ಹೊರಟಿರುತ್ತದೆ. ಸ್ಮೃತಿಪುರಾಣಗಳು ವೇದಾರ್ಥವನ್ನು ಪುಷ್ಟೀಕರಿಸುವುದಕ್ಕೇ ಬಂದಿರುತ್ತವೆ. ವೇದಗಳೆಲ್ಲವೂ ಪರಮಾತ್ಮನನ್ನೇ ಹೇಳುತ್ತವೆ, ಅಥವಾ ಬ್ರಹ್ಮವಿದ್ಯೆಗೇ ಉಪಕಾರಕವಾಗಿರುತ್ತವೆ. ಅದ್ವಿತೀಯವಾದ ಬ್ರಹ್ಮವನ್ನು ತಿಳಿದಮೇಲೆ ಶಾಸ್ತ್ರ, ಶಿಷ್ಯ, ಗುರು- ಎಂಬ ಭೇದವೇ ಉಳಿದಿರುವದಿಲ್ಲವಾದ್ದರಿಂದ ಆಮೇಲೆ ವೇದಾದಿಗಳು ವೇದಾದಿಗಳಾಗಿ ಉಳಿಯುವದೇ ಇಲ್ಲ ; ಅವೆಲ್ಲವೂ ಪರಮಾತ್ಮನೇ ಆಗಿ ಬಿಟ್ಟಿರುತ್ತವೆ. ಆದ್ದರಿಂದ ಜ್ಞಾನವುಂಟಾದಬಳಿಕ ವೇದಾದಿಗಳ ಕೃತ್ಯವಿರುವದಿಲ್ಲ ಎಂದಿದೆ.

ಈ ಅರ್ಥವನ್ನು ಸಾರುವ ವೇದಾಂತವಾಕ್ಯಗಳೂ ಇವೆ. ಹೇಗೆಂದರೆ 'ಸರ್ವೇ ವೇದಾ ಯತ್ಪದಮಾಮನನ್ತಿ' (ಎಲ್ಲಾ ವೇದಗಳೂ ಯಾವ ಪದವನ್ನು ಹೇಳುವವೋ, ಕ. ೧-೨-೧೫), 'ಬ್ರಹ್ಮವಿದ್ಯಾಂ ಸರ್ವವಿದ್ಯಾ ಪ್ರತಿಷ್ಠಾಮ್' (ಎಲ್ಲಾ ವಿದ್ಯೆಗಳಿಗೂ ಗುರಿಯಾದ ಬ್ರಹ್ಮವಿದ್ಯೆಯನ್ನು ಹೇಳಿಕೊಟ್ಟನು, ಮುಂ. ೧-೧-೧), 'ವೇದಾ ಅವೇದಾಃ' (ಅಲ್ಲಿ ವೇದಗಳೂ ಅವೇದಗಳಾಗುವವು, ಬೃ. ೪-೩-೨೨).

**ನರ್ಚಾ ನ ಯಜುಷಾರ್ಥೋಽಸ್ತಿ ನ ಸಾಮ್ನಾರ್ಥೋಽಸ್ತಿ ಕಶ್ಚನ ।**
**ಜಾತೇ ಬ್ರಹ್ಮಾತ್ಮವಿಜ್ಞಾನ ಇತಿ ವೇದಾನ್ತಡಿಣ್ಡಿಮಃ ॥೨೫॥**

೨೫. ಬ್ರಹ್ಮಾತ್ಮನ ಜ್ಞಾನವುಂಟಾದರೆ ಋಕ್ಕಿನಿಂದಾಗಲಿ ಯಜುಸ್ಸಿನಿಂದಾಗಲಿ ಸಾಮದಿಂದಾಗಲಿ ಯಾವ ಪ್ರಯೋಜನವೂ ಇಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಜ್ಞಾನವಾದಮೇಲೆ ವೇದಗಳಿಗೆ ಕೃತ್ಯವೇನೂ ಉಳಿಯುವದಿಲ್ಲ ಎಂದು ಹಿಂದಿನ ಶ್ಲೋಕದಲ್ಲಿ ಸಾಮಾನ್ಯವಾಗಿ ಹೇಳಿತ್ತು; ಇಲ್ಲಿ ಋಕ್ಕು, ಯಜುಸ್ಸು, ಸಾಮ-ಇವುಗಳು

ಆಮೇಲೆ ಯಾವ ಕೆಲಸಕ್ಕೂ ಬೇಕಿರುವದಿಲ್ಲ ಎಂದು ವಿಶೇಷವಾಗಿ ಹೇಳಿರುತ್ತದೆ. ಋಕ್ಕುಗಳು ಹೋತೃವಿಗೂ ಯಜುಸ್ಸುಗಳು ಅಧ್ವರ್ಯುವಿಗೂ ಸಾಮಗಳು ಉದ್ಗಾತೃವಿಗೂ ಉಪಯುಕ್ತವಾಗಿರುತ್ತವೆ; ಈ ಮೂರರ ಸಹಾಯದಿಂದ ಯಜಮಾನನು ಯಾಗವನ್ನು ಮಾಡಿ ಸ್ವರ್ಗಾದಿಲೋಕಗಳನ್ನು ಪಡೆಯುತ್ತಾನೆ, ಪ್ರಜಾದಿದೃಷ್ಟಫಲವನ್ನು ಪಡೆದುಕೊಳ್ಳುತ್ತಾನೆ. ಆದರೆ ಜ್ಞಾನವುಂಟಾದಬಳಿಕ ಸಾಧ್ಯವಾದ ಯಾವ ಲೋಕವಾಗಲಿ ಸಾಧನವಾದ ಯಾವ ಕರ್ಮೋಪಾಸನೆಗಳಾಗಲಿ ಬೇಕೇ ಇರುವದಿಲ್ಲ; ಏಕೆಂದರೆ ಬ್ರಹ್ಮವು ಅದ್ವಿತೀಯವಾಗಿರುವದರಿಂದ ಆತ್ಮನು ಕ್ರಿಯಾಕಾರಕಫಲರಹಿತನಾಗಿರುವನೆಂಬುದೇ ಬ್ರಹ್ಮಾತ್ಮಜ್ಞಾನವು. ಈ ಜ್ಞಾನದಲ್ಲಿ ಕರ್ಮದ ಫಲಗಳೆಲ್ಲವೂ ಅಡಕವಾಗಿಯೂ ಬಿಟ್ಟಿರುತ್ತದೆ.

ಇದಕ್ಕೆ ವೇದಾಂತವಚನಗಳ ಡಂಗುರವೂ ಇದೆ. 'ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾಽಯಂ ಲೋಕಃ (ಪ್ರಜೆಯಿಂದೇನುಮಾಡಿಕೊಳ್ಳೋಣ, ನಮಗೆ ಈತನೇ ಆತ್ಮನು, ಇವನೇ ಲೋಕವು, ಬೃ. ೪-೪-೨೨), 'ಸರ್ವೇ ವೇದಾ ಯತ್ರೈಕಂ ಭವನ್ತಿ' (ಎಲ್ಲಾ ವೇದಗಳೂ ಆ ಆತ್ಮನಲ್ಲಿ ಒಂದಾಗಿರುವವು, ತೈ. ಆ. ೩-೧೧), 'ಸರ್ವಂ ತದಭಿ ಸಮೇತಿ ಯತ್ಕಿಂಚ ಪ್ರಜಾಃ ಸಾಧು ಕುರ್ವನ್ತಿ' (ಜನರು ಯಾವಯಾವ ಪುಣ್ಯಕರ್ಮವನ್ನು ಮಾಡುವರೋ ಅದೆಲ್ಲವೂ ಅವನಿಗೆ ಬಂದುಸೇರುವದು, ಛಾಂ. ೪-೧-೪)- ಇವೇ ಮುಂತಾದ ವಾಕ್ಯಗಳು ಇಲ್ಲಿ ಉದಾಹರಣೆ.

**ಕರ್ಮಾಣಿ ಚಿತ್ತಶುದ್ಧ್ಯರ್ಥಮೈಕಾಗ್ರ್ಯಾರ್ಥಮುಪಾಸನಾ ।**
**ಮೋಕ್ಷಾರ್ಥಂ ಬ್ರಹ್ಮವಿಜ್ಞಾನಮಿತಿ ವೇದಾನ್ತಡಿಣ್ಡಿಮಃ ॥೨೬॥**

೨೬. ಕರ್ಮಗಳು ಚಿತ್ತಶುದ್ಧಿಗಾಗಿ, ಉಪಾಸನೆಯು ಚಿತ್ತದ ಐಕಾಗ್ರ್ಯಕ್ಕಾಗಿ, ಬ್ರಹ್ಮಜ್ಞಾನವು ಮೋಕ್ಷಕ್ಕಾಗಿ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಬ್ರಹ್ಮಜ್ಞಾನಕ್ಕಲ್ಲದಿದ್ದರೆ ಕರ್ಮೋಪಾಸನೆಗಳಿಗಾಗಿ ಆಯಾಸಪಡುವದು ವ್ಯರ್ಥ ಎಂದು ಇಪ್ಪತ್ತೆರಡನೆಯ ಶ್ಲೋಕದಲ್ಲಿ ಹೇಳಿತ್ತು. ಅವುಗಳಿಂದ ಬ್ರಹ್ಮಜ್ಞಾನಕ್ಕೆ ಯಾವ ಉಪಕಾರವಾದೀತೆಂಬುದನ್ನು ಇಲ್ಲಿ ಹೇಳಿದೆ. ಸಕಾಮರು ಮಾಡಿದ ಕರ್ಮಗಳಿಂದ ಸ್ವರ್ಗಾದಿಫಲಗಳಾಗುವವು; ಉಪಾಸನೆಗಳಿಂದ ಬ್ರಹ್ಮಲೋಕಾಂತಫಲಗಳಾಗುವವು. ಆದರೆ ನಿಷ್ಕಾಮರು ಮಾಡುವ ಕರ್ಮಗಳಿಗೆ ಚಿತ್ತಶುದ್ಧಿಯೂ ಉಪಾಸನೆಗೆ ಐಕಾಗ್ರ್ಯವೂ

ಫಲವಾಗುತ್ತವೆ. ಕರ್ಮಗಳಿಂದ ನಿರ್ಮಲವಾಗಿ ಉಪಾಸನೆಯಿಂದ ವಿಕ್ಷೇಪರಹಿತವಾದ ಚಿತ್ತವು ಆತ್ಮತತ್ತ್ವವನ್ನು ಪಡೆಯುವದಕ್ಕೆ ಸಮರ್ಥವಾಗುತ್ತದೆ. ಆದ್ದರಿಂದಲೇ ಉಪನಿಷತ್ತುಗಳಲ್ಲಿ ಜ್ಞಾನಪ್ರಕರಣದಲ್ಲಿಯೂ ಮತ್ತೆ ಕರ್ಮಗಳನ್ನೂ ಉಪಾಸನೆಗಳನ್ನೂ ಅಲ್ಲಲ್ಲಿ ಪ್ರಸ್ತಾಪಿಸಿರುತ್ತದೆ.

ಈ ವಿಷಯವನ್ನು ಸಾರುವ ವೇದಾಂತದ ಡಂಗುರವನ್ನು ಕೇಳಿಸುವ ಕೆಲವು ವಚನಗಳನ್ನು ಇಲ್ಲಿ ಉದಾಹರಿಸಿರುತ್ತೇವೆ: 'ಕರ್ಮಣಾ ಪಿತೃ ಲೋಕೋ ವಿದ್ಯಯಾ ದೇವಲೋಕಃ' (ಕರ್ಮದಿಂದ ಪಿತೃಲೋಕ, ವಿದ್ಯೆಯಿಂದ ದೇವಲೋಕ ಬೃ. ೧-೫-೧೬), 'ಧರ್ಮೇಣ ಪಾಪಮಪನುದತಿ' (ಧರ್ಮದಿಂದ ಪಾಪವನ್ನು ತೊಲಗಿಸಿಕೊಳ್ಳುತ್ತಾನೆ, ತೈ. ನಾ. ೭೯), 'ಯದಾऽऽತ್ಮತತ್ತ್ವೇನ ತು ಬ್ರಹ್ಮತತ್ತ್ವಂ ದೀಪೋಪಮೇನೇಹ ಯುಕ್ತಃ ಪ್ರಪಶ್ಯೇತ್ । ಅಜಂ ಧ್ರುವಂ ಸರ್ವತತ್ತ್ವೈರ್ವಿಶುದ್ಧಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ' (ಯಾವಾಗ ನಿಶ್ಚಲವಾದ ದೀಪದಂತಿರುವ ಅಂತಃಕರಣದಿಂದ ಬ್ರಹ್ಮತತ್ತ್ವವನ್ನು ಕಂಡುಕೊಳ್ಳುವನೋ ಆಗ ಅಜವೂ ನಿತ್ಯವೂ ಎಲ್ಲಾ ತತ್ತ್ವಗಳಿಂದಲೂ ಸೋಂಕದೆ ಶುದ್ಧವೂ ಆಗಿರುವ ದೇವನನ್ನು ಅರಿತುಕೊಂಡು ಎಲ್ಲಾ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುವನು, ಶ್ವೇ. ೨-೧೫).

## ಜ್ಞಾನಿಗೆ ಕರ್ಮಬಂಧವಿಲ್ಲ

ಸಞ್ಚಿತಾಗಾಮಿಕರ್ಮಾಣಿ ದಹ್ಯನ್ತೇ ಜ್ಞಾನವಹ್ನಿನಾ ।
ಪ್ರಾರಬ್ಧಾನ್ಯಪ್ಯನುಭವಾದಿತಿ ವೇದಾನ್ತಡಿಣ್ಡಿಮಃ ॥೨೭॥

೨೭. ಜ್ಞಾನವೆಂಬ ಬೆಂಕಿಯಿಂದ ಸಂಚಿತಾಗಾಮಿಕರ್ಮಗಳು ಸುಟ್ಟುಹೋಗುವವು. ಪ್ರಾರಬ್ಧಕರ್ಮಗಳೂ ಅನುಭವಿಸುವದರಿಂದ ಸವೆಯುವವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಜ್ಞಾನವಾದಬಳಿಕವೂ ಕರ್ಮವು ಮತ್ತೆ ಜನ್ಮಾಂತರವನ್ನು ಕೊಡಬಹುದಲ್ಲವೆ? ಹಿಂದೆ ಎಷ್ಟೋ ಜನ್ಮಗಳಲ್ಲಿ ಮಾಡಿದ ಕರ್ಮಗಳೂ ಮುಂದೆ ಮಾಡಬಹುದಾದ ಕರ್ಮಗಳೂ ಫಲವನ್ನು ಕೊಡದೆ ನಾಶವಾದಾವೆ?- ಎಂಬ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳಿದೆ.

ಬೆಂಕಿಯಿಂದ ಹುರಿದ ಬೀಜವು ಹೇಗೆ ಮತ್ತೆ ಅಂಕುರಿಸಲಾರದೋ ಹಾಗೆ ಅಕರ್ತೃವು ನಾನು ಎಂಬ ಜ್ಞಾನದಿಂದ ಬಾಧಿತವಾಗಿರುವ ಹಿಂದಿನ ಕರ್ಮಗಳು ಫಲವನ್ನು

ಕೊಡಲಾರದೆ ಹೋಗುವುವು. ಮುಂದೆ ಮಾಡುವ ಕರ್ಮಗಳಲ್ಲಿ ಜ್ಞಾನಿಗೆ ಕರ್ತೃತ್ವಬುದ್ಧಿಯೇ ಇರುವದಿಲ್ಲವಾದ್ದರಿಂದ ಅವುಗಳೂ ಫಲವನ್ನು ಕೊಡಲಾರದೆ ಇರುವವು. ಇನ್ನು ಫಲವನ್ನು ಕೊಟ್ಟೇ ಇರುವ ಕರ್ಮಗಳು, ಅವುಗಳ ಫಲದ ಅನುಭವವು ಆದ ಬಳಿಕ ನಾಶವಾಗಿ ಬಿಡುವವು. ಹೀಗೆ ಜ್ಞಾನಿಗೆ ಮತ್ತೆ ಬಂಧವನ್ನುಂಟುಮಾಡುವ ಕರ್ಮಗಳು ಉಳಿದಿರುವದಿಲ್ಲ.

ಈ ವಿಷಯವನ್ನು ವೇದಾಂತವಚನಗಳು ಹೀಗೆಂದು ಸಾರುತ್ತಿವೆ : 'ತದ್ಯಥೇಷೀಕಾತೂಲಮಗ್ನೌ ಪ್ರೋತಂ ಪ್ರದೂಯೇತೈವಂ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯನ್ತೇ' (ಹೇಗೆ ಬೂರುಗದ ಹತ್ತಿಯನ್ನು ಬೆಂಕಿಯಲ್ಲಿ ಹಾಕಿದರೆ ಸುಟ್ಟು ಹೋಗುವದೋ ಹಾಗೆ ಈ ಜ್ಞಾನಿಯ ಪಾಪಗಳೆಲ್ಲವೂ ಎಂದರೆ ಕರ್ಮಗಳೆಲ್ಲವೂ ಸುಟ್ಟುಹೋಗುವವು, ಛಾಂ. ೫-೧೪-೩), 'ಕ್ಷೀಯನ್ತೇ ಚಾಸ್ಯ ಕರ್ಮಾಣಿ' (ಈತನ ಕರ್ಮಗಳೆಲ್ಲವೂ ಸವೆದುಹೋಗುವವು, ಮುಂ. ೨-೨-೮), 'ಉಭೇ ಉ ಹ್ಯೇವೈಷ ಏತೇ ತರತಿ' (ಇವನು ಪುಣ್ಯ, ಪಾಪ- ಈ ಎರಡನ್ನೂ ದಾಟುತ್ತಾನೆ, ಬೃ. ೪-೪-೨೨), 'ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇಽಥ ಸಂಪತ್ಸ್ಯೇ' (ಅವನಿಗೆ ಈ ದೇಹವು ಬಿಡುಗಡೆಯಾಗುವಷ್ಟೇ ತಡ, ಆ ಬಳಿಕ ಬ್ರಹ್ಮದಲ್ಲಿ ಒಂದಾಗಿ ಬಿಡುತ್ತಾನೆ, ಛಾಂ. ೬-೧೪-೨).

**ನ ಪುಣ್ಯಕರ್ಮಣೋ ವೃದ್ಧಿರ್ನ ಹಾನಿಃ ಪಾಪಕರ್ಮಣಃ ।**
**ನಿತ್ಯಾಸಙ್ಗಾತ್ಮನಿಷ್ಠಾನಾಮಿತಿ ವೇದಾನ್ತಡಿಣ್ಡಿಮಃ ॥೨೮॥**

೨೮. ನಿತ್ಯವೂ ಅಸಂಗನಾಗಿರುವ ಆತ್ಮನಲ್ಲಿ ನಿಷ್ಠರಾಗಿರುವವರಿಗೆ ಪುಣ್ಯ ಕರ್ಮದಿಂದ ವೃದ್ಧಿಯಿಲ್ಲ, ಪಾಪಕರ್ಮದಿಂದ ಹಾನಿಯೂ ಇಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಆತ್ಮನು ಎಂದೆಂದಿಗೂ ಅಸಂಗನೇ. ಅವನಲ್ಲಿ ಕ್ರಿಯಾಕಾರಕಫಲಗಳ ಅಂಟು ಯಾವಾಗಲೂ ಇರುವದೇ ಇಲ್ಲ. ಈ ಆತ್ಮನೇ ತಾನೆಂದು ತಿಳಿದುಕೊಂಡಿರುವ ಜ್ಞಾನಿಗಳಿಗೆ ಕರ್ಮವು ಸೇರಿಕೊಂಡಂತೆ ತೋರಿದರೂ ನಿಜವಾಗಿ ಅವರು ಅಕರ್ಮಿಗಳೇ. ಆದ್ದರಿಂದ ಅವರಿಗೆ ಪುಣ್ಯಕರ್ಮದಿಂದ ಆಗುವ ಹೆಚ್ಚೂ ಇಲ್ಲ, ಪಾಪಕರ್ಮದಿಂದ ಆಗುವ ಕುಂದೂ ಇಲ್ಲ.

ಆತ್ಮನೂ ಸರ್ವದಾ ನಿಷ್ಕ್ರಿಯನೇ, ಅಸಂಗನೇ ಎಂಬುದಕ್ಕೂ ಪುಣ್ಯದಿಂದ

ವೃದ್ಧಿಯಾಗಲಿ ಪಾಪದಿಂದ ಹಾನಿಯಾಗಲಿ ಆಗದೆಂಬುದಕ್ಕೂ ವೇದಾಂತಗಳ ಡಂಗುರವಿದೆ. 'ನಿಷ್ಕಲಂ ನಿಷ್ಕ್ರಿಯಂ ಶಾನ್ತಮ್' (ನಿರವಯವನೂ, ನಿಷ್ಕರ್ಮನೂ ಶಾಂತನೂ ಆಗಿರುವ..., ಶ್ವೇ. ೬-೧೯), 'ಅಸಙ್ಗೋ ಹ್ಯಯಂ ಪುರುಷಃ' (ಈ ಪುರುಷನು ಅಸಂಗನಲ್ಲವೆ? ಬೃ. ೪-೩-೧೬), 'ನ ಸಾಧುನಾ ಕರ್ಮಣಾ ಭೂಯಾನ್ನೋ ಏವಾಸಾಧುನಾ ಕನೀಯಾನ್' (ಒಳ್ಳೆಯ ಕರ್ಮದಿಂದ ಹೆಚ್ಚುವವನಲ್ಲ, ಕೆಟ್ಟ ಕರ್ಮದಿಂದ ತಗ್ಗುವವನಲ್ಲ, ಬೃ. ೪-೪-೨೨).

ಈ ಶ್ಲೋಕದ ಅಭಿಪ್ರಾಯವನ್ನು ಕೆಲವರು ತಪ್ಪಾಗಿ ತಿಳಿದುಕೊಳ್ಳುವ ಸಂಭವವಿದೆ. ಜ್ಞಾನಿಯಾದವನು ಸ್ವೇಚ್ಛಾಪ್ರವೃತ್ತಿಯಲ್ಲಿಯೂ ಇರಬಹುದು; ಆದರಿಂದ ಅವನಿಗೆ ಯಾವ ಹಾನಿವೃದ್ಧಿಗಳೂ ಆಗುವದಿಲ್ಲ- ಎಂಬುದು ಈ ಶ್ಲೋಕದ ಅಭಿಪ್ರಾಯವೆಂದು ತಿಳಿದರೆ ತಪ್ಪಾಗುವದು. ಏಕೆಂದರೆ ಜ್ಞಾನಿಯು ನಿಷ್ಕ್ರಿಯನೆಂದಮೇಲೆ ಅವನಿಗೆ ಯಥೇಷ್ಟಕರ್ಮವು ಎಲ್ಲಿಂದ ಬಂದೀತು? ಮುಮುಕ್ಷುವಾದ ಜಿಜ್ಞಾಸುವೇ ಅಧರ್ಮವನ್ನು ಬಿಟ್ಟಿರುತ್ತಾನೆ; ತ್ಯಾಗಿಯಾದ ಜ್ಞಾನಿಯು ಶಾಸ್ತ್ರೋಕ್ತಕರ್ಮವನ್ನು ಕೂಡ ಸಂನ್ಯಾಸಮಾಡಿರುವನು. ಹೀಗಿರುವದರಿಂದ ಅವನಲ್ಲಿ ಯಥೇಷ್ಟವ್ಯಾಪಾರದ ಸಂಭವವೇ ಇಲ್ಲ. ಸಂಚಿತಾಗಾಮಿಕರ್ಮಗಳು ಜ್ಞಾನದಿಂದ ನಾಶವಾಗುವವೆಂದೂ ಪ್ರಾರಬ್ಧಕರ್ಮವು ಉಳಿದಿರುವದೆಂದೂ ಹೇಳಿದ್ದರಿಂದ ನಿಜವಾಗಿಯೂ ಜ್ಞಾನಿಗೆ ಮೊದಲು ಕರ್ಮಗಳು ಇದ್ದು ಜ್ಞಾನದಿಂದಲೂ ಅನುಭವದಿಂದಲೂ ನಾಶವಾಗುವವು ಎಂದು ಯಾರಾದರೂ ತಿಳಿದುಕೊಳ್ಳಬಹುದಷ್ಟೆ; ಅದೂ ಸರಿಯಲ್ಲ. ಆದ್ದರಿಂದ ಆತ್ಮನಿಗೆ ಕರ್ಮಸಂಬಂಧವು ಎಂದೆಂದಿಗೂ ಇಲ್ಲ ಎಂದು ತಿಳಿಯುವದೇ ಜ್ಞಾನವು ಎಂದು ಈ ಶ್ಲೋಕದಲ್ಲಿ ಸ್ಪಷ್ಟಪಡಿಸಿದೆ.

**ಬುದ್ಧಿಪೂರ್ವಾಬುದ್ಧಿಪೂರ್ವಕೃತಾನಾಂ ಪಾಪಕರ್ಮಣಾಮ್ ।**
**ಪ್ರಾಯಶ್ಚಿತ್ತಮಹೋ ಜ್ಞಾನಮಿತಿ ವೇದಾನ್ತಡಿಣ್ಡಿಮಃ ॥೨೯॥**

೨೯. ಬುದ್ಧಿಪೂರ್ವಕವಾಗಿಯೂ ಬುದ್ಧಿಪೂರ್ವಕವಲ್ಲದೆಯೂ ಮಾಡಿದ ಪಾಪಕರ್ಮಗಳಿಗೆಲ್ಲ ಜ್ಞಾನವು ಪ್ರಾಯಶ್ಚಿತ್ತವಾಗಿರುವದು. ಆಹಾ ಏನು ಆಶ್ಚರ್ಯ! ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಹೇಗೆ ಪ್ರಾಯಶ್ಚಿತ್ತದಿಂದ ಪಾಪನಿವೃತ್ತಿಯಾಗುವದೋ ಹಾಗೆ ಬ್ರಹ್ಮಾತ್ಮವಿಜ್ಞಾನದಿಂದ ಸಕಲಪಾಪಗಳ ನಿವೃತ್ತಿಯು ಆಗುತ್ತದೆ. ಇಲ್ಲಿ ಪಾಪಶಬ್ದದಿಂದ ಪಾಪಪುಣ್ಯಗಳೆರಡನ್ನೂ

ಗ್ರಹಿಸಬೇಕು; ಏಕೆಂದರೆ ಮುಮುಕ್ಷುಗಳ ದೃಷ್ಟಿಯಿಂದ ಅವೆರಡೂ ಬಂಧಕವೇ ಆಗಿರುವದರಿಂದ ಪಾಪವಾಗಿರುತವೆ.

ಪ್ರಾಯಶ್ಚಿತ್ತದಂತೆ ಇರುವದರಿಂದ ಜ್ಞಾನವನ್ನು ಇಲ್ಲಿ ಪ್ರಾಯಶ್ಚಿತ್ತವೆಂದಿದೆ. ಹೇಗೆ ಪ್ರಾಯಶ್ಚಿತ್ತವು ಪಾಪವನ್ನು ಕಳೆಯುತದೆಯೋ ಹಾಗೆ ಜ್ಞಾನವೂ ಕರ್ಮವನ್ನು ಕಳೆಯುತ್ತದೆ- ಎಂದು ನಿವರ್ತಕತ್ವವೆಂಬ ಹೋಲಿಕೆಯನ್ನು ಮಾತ್ರ ಇಲ್ಲಿ ಗ್ರಹಿಸಬೇಕು. ಆದರೆ ಪ್ರಾಯಶ್ಚಿತ್ತವು ಕಾರಕವು, ಅದು ಎಣ್ಣೆಯನ್ನು ಶೀಗೆಪುಡಿಯು ಕಳೆಯುವಂತೆ ಪಾಪವನ್ನು ಹೋಗಲಾಡಿಸುತ್ತದೆ. ಆದರೆ ಜ್ಞಾನವು ಅಜ್ಞಾನಬಾಧಕವು, ತಪ್ಪುತಿಳಿವಳಿಕೆಯನ್ನು ಕಳೆದು ವಸ್ತುಸ್ಥಿತಿಯನ್ನು ತಿಳಿಸುತ್ತದೆ, ಅಷ್ಟೆ. ಆದ್ದರಿಂದ ಜ್ಞಾನವು ಅಕರ್ತ್ರಾತ್ಮಸ್ವರೂಪವನ್ನು ತಿಳಿಸುವದೇ ಕರ್ಮನಿವರ್ತಕತ್ವವು. ಜ್ಞಾನಿಯು ಪಾಪಪುಣ್ಯಗಳೆರಡೂ ನಿಜವಾಗಿ ಆತ್ಮನೇ ಎಂದು ತಿಳಿದುಕೊಂಡುಬಿಡುತ್ತಾನೆ. ಆ ಮೂಲಕವಾಗಿಯೇ ಅವನ ಜ್ಞಾನವು ಕರ್ಮವನ್ನು ನಾಶಗೊಳಿಸುತ್ತದೆ. 'ಉಭೇ ಹ್ಯೇವೈಷ ಏತೇ ಆತ್ಮಾನಗ್ಂ ಸ್ಪೃಣುತೇ' (ಈ ಪಾಪಪುಣ್ಯಗಳೆರಡನ್ನೂ ಅವನು ಆತ್ಮನನ್ನಾಗಿ ಮಾಡಿಕೊಳ್ಳುತ್ತಾನೆ, ತೈ. ೨-೯) ಎಂಬ ವೇದಾಂತವಚನವನ್ನು ಇಲ್ಲಿ ಉದಾಹರಿಸಬಹುದು. ಅಹೋ!- ಎಂಬುದು ಜ್ಞಾನವು ಕಾರಕವಲ್ಲದೆ ಇದ್ದರೂ ಕರ್ಮವನ್ನು ನಾಶಗೊಳಿಸುವದಲ್ಲ! ಎಂಬ ಆಶ್ಚರ್ಯವನ್ನು ತಿಳಿಸಿ ಜ್ಞಾನವನ್ನು ಹೊಗಳುವದಕ್ಕೆ ಬಂದಿರುವ ಮಾತು.

## ಬ್ರಹ್ಮದ ಅದ್ವಿತೀಯತ್ವ

**ದೃಗ್ದೃಶ್ಯೌ ದ್ವೌ ಪದಾರ್ಥೌ ತೌ ಪರಸ್ಪರವಿಲಕ್ಷಣೌ ।**
**ದೃಗ್ಬ್ರಹ್ಮ ದೃಶ್ಯಂ ಮಾಯಾ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೩೦॥**

೩೦. ದೃಕ್ಕು, ದೃಶ್ಯ- ಎಂದು ಎರಡು ಪದಾರ್ಥಗಳುಂಟು; ಅವು ಒಂದರ ಹಾಗೆ ಒಂದು ಇರುವದಿಲ್ಲ. ಬ್ರಹ್ಮವೇ ದೃಕ್ಕು, ಮಾಯೆಯೇ ದೃಶ್ಯವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಅದ್ವಿತೀಯಬ್ರಹ್ಮಾತ್ಮವಿಜ್ಞಾನದಿಂದಲೇ ಮುಕ್ತಿಯಾಗುವದು, ಕರ್ಮೋಪಾಸನಾದಿಗಳಿಗೆ ಬ್ರಹ್ಮವಿಜ್ಞಾನವೇ ಮುಖ್ಯಫಲವು- ಎಂದು ಹೇಳಿ ಬ್ರಹ್ಮಜ್ಞಾನವಾದಬಳಿಕ ಕರ್ಮಗಳೆಲ್ಲವೂ ನಿಶ್ಶೇಷವಾಗಿ ಕ್ಷಯವಾಗುತ್ತವೆ ಎಂದು ಬ್ರಹ್ಮಜ್ಞಾನವನ್ನು ಹೊಗಳಿದ್ದಾಯಿತು. ಬ್ರಹ್ಮವು ಅದ್ವಿತೀಯವೆಂಬುದು ಹೇಗೆ?- ಎಂಬುದನ್ನು ತಿಳಿಸುವದಕ್ಕೆ ಈಗ ಹೊರಟಿದೆ.

ಜಗತ್ತು ಜ್ಞೇಯವು ಎಂದು ನಾಲ್ಕನೆಯ ಶ್ಲೋಕದಲ್ಲಿ ಹೇಳಿತ್ತು. ಇಲ್ಲಿ ಆ ಜ್ಞೇಯವು ಅಥವಾ ದೃಶ್ಯವು ಮಾಯೆ ಎಂದಿದೆ. ಮಾಯೆಯಿಂದ ತೋರುವ ನೂಲೇಣಿ, ಅದರಮೇಲೆ ಹತ್ತಿಹೋಗುವ ಮಾಯಾವಿಗಳು- ಇವರುಗಳಿಂದ ನೆಲದಮೇಲೆ ನಿಜವಾಗಿ ನಿಂತಿರುವ ಮಾಯಾವಿಯು ಅದ್ವಿತೀಯನೆಂಬುದಕ್ಕೆ ಹೇಗೆ ಧಕ್ಕೆಯಿಲ್ಲವೋ ಹಾಗೆ ಬರಿಯ ತೋರಿಕೆಯಾದ ಚೇತನಾಚೇತನರೂಪವಾದ ಜಗತ್ತಿನಿಂದ ಬ್ರಹ್ಮದ ಅದ್ವಿತೀಯತ್ವಕ್ಕೆ ಧಕ್ಕೆಯಿಲ್ಲ ಎಂದು ಭಾವ. ಸರ್ವಸಂಸಾರವೂ ಅಸತ್ಯವೇ ಎಂದು ಹದಿಮೂರನೆಯ ಶ್ಲೋಕದಲ್ಲಿಯೂ ಹೇಳಿತ್ತಷ್ಟೆ; ಅಲ್ಲಿ ಬ್ರಹ್ಮವನ್ನು ಅರಿತುಕೊಳ್ಳಬೇಕೆಂದು ಹೇಳುವದಕ್ಕಾಗಿ ಹಾಗೆ ಪ್ರತಿಜ್ಞಾಮಾತ್ರದಿಂದ ಹೇಳಿತ್ತು. ಇಲ್ಲಿಯೋ, ಬ್ರಹ್ಮವು ಅದ್ವಿತೀಯವೆಂಬುದನ್ನು ಮನಗಾಣಿಸುವದಕ್ಕೆ ಹೊರಟು ದೃಶ್ಯವಾದ ಜಗತ್ತೆಲ್ಲವೂ ಮಾಯೆ ಎಂದಿದೆ. ಆದ್ದರಿಂದ ಈ ವಿಷಯದಲ್ಲಿ ಪುನರುಕ್ತಿಯಿಲ್ಲವೆಂದು ತಿಳಿಯಬೇಕು.

ಜಗತ್ತು ಮಾಯೆಯೇ, ಬ್ರಹ್ಮಕ್ಕಿಂತ ವ್ಯತಿರಿಕ್ತವಾದ ಜೀವರುಗಳು ಇಲ್ಲವೇ ಇಲ್ಲ- ಎಂಬುದಕ್ಕೆ ವೇದಾಂತಗಳ ಡಂಗುರವೂ ಇದೆ. ಉದಾಹರಣೆಗೆ 'ಮಾಯಾಂ ತು ಪ್ರಕೃತಿಂ ವಿದ್ಯಾತ್' (ಪ್ರಕೃತಿಯನ್ನು ಮಾಯೆ ಎಂದು ತಿಳಿಯಬೇಕು, ಶ್ವೇ. ೪-೧೦) ಎಂಬ ವಾಕ್ಯವು ಅಚೇತನಜಗತ್ತು ಮಾಯೆ ಎಂದು ಹೇಳುತ್ತಿದೆ. 'ನಾನ್ಯೋಽತೋಽಸ್ತಿ ದ್ರಷ್ಟಾ' (ಈ ಬ್ರಹ್ಮಕ್ಕಿಂತ ಬೇರೆಯಾದ ದ್ರಷ್ಟೃಜೀವನಿಲ್ಲ, ಬೃ. ೩-೬-೨೩) ಎಂಬ ವಾಕ್ಯವು ಚೇತನ ರೂಪನಾದ ಜೀವನು ಬ್ರಹ್ಮಕ್ಕಿಂತ ಬೇರೆಯಾಗಿಲ್ಲ ಎಂದು ಹೇಳುತ್ತದೆ.

**ಅವಿದ್ಯೋಪಾಧಿಕೋ ಜೀವೋ ಮಾಯೋಪಾಧಿಕ ಈಶ್ವರಃ ।**
**ಮಾಯಾವಿದ್ಯಾಗುಣಾತೀತಂ ಬ್ರಹ್ಮ ವೇದಾನ್ತಡಿಣ್ಡಿಮಃ ॥೩೧॥**

೩೧. ಅವಿದ್ಯೆಯೆಂಬ ಉಪಾಧಿಯುಳ್ಳವನು ಜೀವನು, ಮಾಯೆ ಎಂಬ ಉಪಾಧಿಯುಳ್ಳವನು ಈಶ್ವರನು; ಮಾಯೆ, ಅವಿದ್ಯೆ- ಎಂಬಿವುಗಳ ಧರ್ಮಗಳನ್ನು ಮೀರಿರುವದೇ ಬ್ರಹ್ಮವು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಒಂದರಿಂದೊಂದನ್ನು ಬೇರ್ಪಡಿಸಿ ತಿಳಿಯುವ ಧರ್ಮವನ್ನು 'ವ್ಯಾವರ್ತಕ' ಎಂದು ಕರೆಯುತ್ತಾರೆ. ಕನ್ನೈದಿಲೆ, ಕೆನ್ನೈದಿಲೆ- ಇವುಗಳಲ್ಲಿ ಕಪ್ಪು, ಕೆಂಪು- ಎಂಬ

ಧರ್ಮಗಳು ಇತರ ವ್ಯಾವರ್ತಕಧರ್ಮಗಳು; ಏಕೆಂದರೆ ಕಪ್ಪೆಂಬ ಧರ್ಮ ವಿರುವದರಿಂದ ಕನ್ನೈದಿಲೆಯನ್ನು ಕೆನ್ನೈದಿಲೆಗಿಂತ ಬೇರೆ ಎಂದು ತಿಳಿಯುತ್ತೇವೆ; ಕೆಂಪೆಂಬ ಧರ್ಮವಿರುವದರಿಂದ ಕೆನ್ನೈದಿಲೆಯನ್ನು ಕನ್ನೈದಿಲೆಗಿಂತ ಬೇರೆ ಎಂದು ಭಾವಿಸುತ್ತೇವೆ. ಈ ಧರ್ಮಗಳು ವಿಶೇಷಣಗಳಾಗಿರುತ್ತವೆ; ಎಂದರೆ ಧರ್ಮಿಗೆ ಸೇರಿಕೊಂಡೇ ಅದನ್ನು ಮತ್ತೊಂದರಿಂದ ವ್ಯಾವೃತ್ತಿಮಾಡುತ್ತವೆ. ಕೆನ್ನೈದಿಲೆಯಲ್ಲಿ ಕೆಂಪೆಂಬ ಧರ್ಮವು ಸೇರಿಕೊಂಡೇ ಇರುತ್ತದೆ; ಇದರಂತೆ ಕನ್ನೈದಿಲೆಯಲ್ಲಿ ಕಪ್ಪೂ ಸೇರಿಕೊಂಡೇ ಇರುತ್ತದೆ. ಆದರೆ ಕೆಲವು ವಸ್ತುಗಳು ವ್ಯಾವರ್ತ್ಯವಸ್ತುವಿನಲ್ಲಿ ಸೇರಿಕೊಳ್ಳದೆಯೇ ಅದನ್ನು ಮತ್ತೊಂದರಿಂದ ಬೇರ್ಪಡಿಸುತ್ತವೆ. ಉದಾಹರಣೆಗೆ- ಘಟಾಕಾಶವು ಮಠಾಕಾಶಕ್ಕಿಂತ ಬೇರೆ- ಎನ್ನುವಾಗ ಗಡಿಗೆಯು ಸೇರಿಕೊಂಡಿರುವ ಧರ್ಮವಲ್ಲ; ಮಠವೂ ಮಠಾಕಾಶಕ್ಕೆ ಸೇರಿಕೊಂಡಿರುವದಿಲ್ಲ. ಹೀಗೆ ವ್ಯಾವರ್ತ್ಯಸ್ವರೂಪಕ್ಕೆ ಸೇರಿಕೊಳ್ಳದೆಯೇ ಅದನ್ನು ಬೇರ್ಪಡಿಸುವ ವಸ್ತುವನ್ನು ಅದರ 'ಉಪಾಧಿ' ಎನ್ನುತ್ತಾರೆ.

ಜೀವ, ಈಶ್ವರ- ಎಂಬ ಭೇದವು ವ್ಯವಹಾರದಲ್ಲಿರುವದಷ್ಟೆ; ಅದು ಉಪಾಧಿ ಯಿಂದಾದದ್ದೇ ಹೊರತು ಜೀವೇಶ್ವರಸ್ವರೂಪಕ್ಕೆ ಸೇರಿಕೊಂಡಿರುವದಿಲ್ಲ, ಹೇಗೆಂದರೆ ಅವಿದ್ಯೆಯಿಂದಲೇ ತಾನು ಜೀವನು ಎಂದುಕೊಂಡಿರುತ್ತಾನೆ; ಅವಿದ್ಯೆ ಎಂದರೆ ಶರೀರ, ಇಂದ್ರಿಯಗಳು, ಮನಸ್ಸು- ಎಂಬ ಸಂಘಾತವೇ ತಾನೆಂದು ಕಲ್ಪಿಸಿಕೊಂಡಿರುವ ತಪ್ಪುತಿಳಿವಳಿಕೆ. ತಪ್ಪು ತಿಳಿವಳಿಕೆಯಿಂದಲೇ ನನಗೆ ಈ ಕಾರ್ಯಕರಣಗಳ ಸಂಘಾತವಿದೆಯೆಂದು, ಅಥವಾ ಕಾರ್ಯಕರಣಸಂಘಾತಸ್ವರೂಪವೇ ನಾನು ಎಂದು, ತಿಳಿದುಕೊಂಡಿರುತಾರೆಂಬುದಕ್ಕೆ ಸ್ವಪ್ನದೃಷ್ಟಾಂತವನ್ನು ಕೊಡಬಹುದು. ಸ್ವಪ್ನದಲ್ಲಿ ಯಾವ ಕಾರ್ಯಕರಣಸಂಘಾತವು ಇಲ್ಲದಿದ್ದರೂ ಒಂದು ಸಂಘಾತವು ತನಗಿರುವದೆಂದೂ ಅದರಿಂದ ತಾನು ಸಂಸಾರಿಯಾಗಿರುವೆನೆಂದೂ ಜೀವರೆಲ್ಲರೂ ಭಾವಿಸಿಕೊಂಡಿರುತ್ತಾರೆ. ಆದರೂ ಅದು ನಿಜವಲ್ಲ. ಇದರಂತೆಯೇ ಎಚ್ಚರದಲ್ಲಿಯೂ ತಿಳಿಯಬೇಕು. ಹೀಗೆ ಅವಿದ್ಯಾಕೃತಕಾರ್ಯಕರಣಸಂಘಾತವೇ ಜೀವನಿಗೆ ಜೀವತ್ವಕ್ಕೆ ಉಪಾಧಿಯಾಗಿರುತ್ತದೆ. ಇದರಂತೆ ಅವಿದ್ಯಾಕೃತವಾದ ನಾಮರೂಪಬೀಜವೆಂಬ ಮಾಯೆಯೇ ಈಶ್ವರನಿಗೆ ಉಪಾಧಿಯು. ಜಗತಿಗೆ ಈಶ್ವರನು ಕಾರಣನು; ಅದನು ಅವನು ಆಳುತ್ತಿದಾನೆ- ಎಂದು ತಿಳಿಯುವದಕ್ಕೆ ಈ ನಾಮರೂಪಮಾಯೆಯನ್ನು ಅವಿದ್ಯೆಯಿಂದ ಆತ್ಮನಿಗೆ ಸೇರಿದ್ದೆಂದು ತಿಳಿದಿರುವದೇ ಕಾರಣವಾಗಿರುತ್ತದೆ.

ಹೀಗೆ ಈ ಎರಡು ಉಪಾಧಿಗಳೂ ಅವಿದ್ಯಾಕೃತವಾಗಿರುವದರಿಂದ ಬ್ರಹ್ಮಚೈತನ್ಯವು ಮಾಯಾವಿದ್ಯಾಗುಣಾತೀತವಾಗಿರುತ್ತದೆ, ಎಂದರೆ ಮಾಯಾವಿದ್ಯೆಗಳಿಂದಾಗಿರುವ

ಈಶ್ವರತ್ವ, ಜೀವತ್ವ- ಎಂಬ ವಿಶೇಷಗಳಿಲ್ಲದೆ ನಿತ್ಯಶುದ್ಧಬುದ್ಧಮುಕ್ತಸ್ವಭಾವದ್ದಾಗಿರುತ್ತದೆ. ಆದ್ದರಿಂದ ಬ್ರಹ್ಮವು ಅದ್ವಿತೀಯವೆಂಬುದಕ್ಕೆ ಜೀವೇಶ್ವರಭೇದವೇನೂ ಬಾಧಕವಲ್ಲ.

ಈ ವಿಷಯದಲ್ಲಿ ವೇದಾಂತಡಿಂಡಿಮವೂ ಇದೆ. 'ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮನ್ತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಪುರುಷಃ' (ಈ ವಿಜ್ಞಾತೃಸ್ವರೂಪನಾದ ಕಾರ್ಯಕರಣಸಂಘಾತವನ್ನು ವ್ಯಾಪಿಸಿಕೊಂಡಿರುವ ಪುರುಷನು ನೋಡುವವನು, ಮುಟ್ಟುವವನು, ಕೇಳುವವನು, ಮೂಸುವವನು, ಸವಿಯುವವನು, ಯೋಚಿಸುವವನು, ಅರಿಯುವವನು, ಕರ್ತೃವು, ಪ್ರ. ೪-೯), 'ಮಾಯಿನಂ ತು ಮಹೇಶ್ವರಮ್' (ಮಹೇಶ್ವರನನ್ನು ಮಾಯಿ ಎಂದು ತಿಳಿಯಬೇಕು, ಶ್ವೇ. ೪-೧೦), 'ಅಸ್ಥೂಲಮನಣು' (ಅಕ್ಷರವೆಂಬ ಬ್ರಹ್ಮವು ದಪ್ಪದಲ್ಲ, ಸಣ್ಣದಲ್ಲ, ಬೃ. ೩-೮-೮), 'ಅಥಾತ ಆದೇಶೋ ನೇತಿ ನೇತಿ' (ಇನ್ನು ಮೂರ್ತಾಮೂರ್ತ ರೂಪಗಳಿಗಿಂತ ವ್ಯತಿರಿಕ್ತವಾದ ಬ್ರಹ್ಮದ ಸ್ವರೂಪವನ್ನು ತಿಳಿಸುವೆವು, ಅದು ಹೀಗಲ್ಲ, ಹೀಗಲ್ಲ ಎಂದು ಹೇಳುವದಕ್ಕೆ ತಕ್ಕದ್ದು, ಬೃ. ೨-೩-೩).

**ಸಾಕಾರಂ ಚ ನಿರಾಕಾರಂ ಸಗುಣಂ ಚಾಗುಣಾತ್ಮಕಮ್ ।**
**ತತ್ತ್ವಂ ತದ್ ಬ್ರಹ್ಮ ಪರಮಮಿತಿ ವೇದಾನ್ತಡಿಣ್ಡಿಮಃ ॥೩೨॥**

೩೨. ಆ ಪರಬ್ರಹ್ಮವೆಂಬ ತತ್ತ್ವವು ಸಾಕಾರವೂ, ನಿರಾಕಾರವೂ ಆಗಿದೆ; ಸಗುಣವೂ ನಿರ್ಗುಣವೂ ಆಗಿದೆ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಬ್ರಹ್ಮವು ಸ್ವರೂಪದಿಂದ ನಿರಾಕಾರವೂ ನಿರ್ಗುಣವೂ ಆಗಿರುತ್ತದೆಯಾದರೂ ಸಾಧಕಾನುಗ್ರಹಾರ್ಥವಾಗಿ ಮಾಯಾಸಂಬಂಧದಿಂದ ಸಾಕಾರವೂ ಸಗುಣವೂ ಆಗಿರುತ್ತದೆ. ಆದ್ದರಿಂದಲೇ ವೇದಾಂತಡಿಂಡಿಮವು ಎರಡು ಬಗೆಯಿಂದಲೂ ಬ್ರಹ್ಮವನ್ನು ತಿಳಿಸುತ್ತದೆ. ಹೇಗೆಂದರೆ, 'ಅಸ್ಥೂಲಮನಣ್ವ ಹ್ರಸ್ವಮದೀರ್ಘಮ್' (ಅಕ್ಷರಬ್ರಹ್ಮವು ದಪ್ಪಗಿಲ್ಲ, ಸಣ್ಣಗೂ ಇಲ್ಲ; ಮೊಟಕಲ್ಲ, ಉದ್ದನೆಯದೂ ಅಲ್ಲ; ಬೃ. ೩-೮-೮), 'ಸರ್ವಕರ್ಮಾ ಸರ್ವಕಾಮಃ ಸರ್ವಗನ್ಧಃ ಸರ್ವರಸಃ (ಆತ್ಮನು ಎಲ್ಲವನ್ನೂ ಮಾಡುವವನು, ಎಲ್ಲಾ ಕಾಮಗಳೂ ಪ್ರಾಪ್ತವಾಗಿರುವವನು, ಎಲ್ಲಾ ಪುಣ್ಯಗಂಧಗಳೂ ಉಳ್ಳವನು, ಎಲ್ಲಾ ಉತ್ತಮರಸಗಳೂ ಇರುವವನು, ಛಾಂ. ೩-೧೪-೨), 'ಹಿರಣ್ಯ ಶ್ಮಶ್ರುರ್ಹಿರಣ್ಯಕೇಶ ಆ ಪ್ರಣಖಾತ್ ಸರ್ವ ಏವ ಸುವರ್ಣಃ' (ಹೊಳೆಯುವ ಗಡ್ಡಮೀಸೆಗಳವನು, ಹೊಳೆಯುವ ಕೂದಲಿನವನು, ಉಗುರುತುದಿಯವರೆಗೂ ಎಲ್ಲವೂ ಸುವರ್ಣವೇ ಆಗಿರುವವನು, ಛಾಂ. ೧-೬-೬).

ದ್ವಿಜತ್ವಂ ವಿಧ್ಯನುಷ್ಠಾನಾದ್ ವಿಪ್ರತ್ವಂ ವೇದಪಾಠತಃ ।
ಬ್ರಾಹ್ಮಣ್ಯಂ ಬ್ರಹ್ಮವಿಜ್ಞಾನಾದಿತಿ ವೇದಾನ್ತಡಿಣ್ಡಿಮಃ ॥೩೩॥

೩೩. ವಿಧಿಸಿದ ಕರ್ಮಗಳನ್ನು ಮಾಡುವದರಿಂದ ದ್ವಿಜತ್ವವು (ಬರುತ್ತದೆ); ವೇದವನ್ನು ಅಧ್ಯಯನಮಾಡುವದರಿಂದ ವಿಪ್ರತ್ವವು (ಬರುತ್ತದೆ). ಬ್ರಹ್ಮವನ್ನು ಅರಿತುಕೊಂಡರೆ ಬ್ರಾಹ್ಮಣ್ಯ (ವುಂಟಾಗುತ್ತದೆ). ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಮುಖ್ಯವಾದ ದ್ವಿಜತ್ವ, ವಿಪ್ರತ್ವ- ಎಂಬಿವು ಜನ್ಮತಃ ಯಾವನಿಗೂ ಬಂದಿರುವದಿಲ್ಲ, ವೇದೋಕ್ತಕರ್ಮಗಳನ್ನು ಮಾಡಿದಮೇಲೆಯೇ ದ್ವಿಜನೆನಿಸುತ್ತಾನೆ, ವೇದಾಧ್ಯಯನವನ್ನು ಮಾಡಿದಮೇಲೆಯೇ ವಿಪ್ರನೆನಿಸುತ್ತಾನೆ. ಇದರಂತೆ ಅದ್ವಿತೀಯಬ್ರಹ್ಮವನ್ನು ಅನುಭವಕ್ಕೆ ತಂದುಕೊಂಡಮೇಲೆ ಮುಖ್ಯಾರ್ಥದಲ್ಲಿ ಬ್ರಾಹ್ಮಣನೆನಿಸುತ್ತಾನೆ.

ಇದಕ್ಕೆ ವೇದಾಂತಗಳ ಡಂಗುರವಿದೆ. 'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' (ಇದು ಬ್ರಾಹ್ಮಣನಿಗಿರುವ ನಿತ್ಯವಾದ ಮಹಿಮೆಯು, ಬೃ. ೪-೪-೨೨), 'ಅಥ ಬ್ರಾಹ್ಮಣಃ' (ಇನ್ನು ಅವನು ಬ್ರಾಹ್ಮಣನು, ಬೃ. ೩-೬-೧).

ಸರ್ವಾತ್ಮನಾ ಸ್ಥಿತಂ ಬ್ರಹ್ಮ ಸರ್ವಂ ಬ್ರಹ್ಮಾತ್ಮನಾ ಸ್ಥಿತಮ್ ।
ನ ಕಾರ್ಯಂ ಕಾರಣಾದ್ ಭಿನ್ನಮಿತಿ ವೇದಾನ್ತಡಿಣ್ಡಿಮಃ ॥೩೪॥

೩೪. ಬ್ರಹ್ಮವೇ ಎಲ್ಲದರ ರೂಪದಲ್ಲಿ ಇರುವದು; ಸರ್ವವೂ ಬ್ರಹ್ಮಸ್ವರೂಪವಾಗಿರುವದು, ಕಾರ್ಯವು ಕಾರಣಕ್ಕಿಂತ ಭಿನ್ನವಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಜೀವೇಶ್ವರಭೇದವನ್ನೂ ಸಗುಣನಿರ್ಗುಣಭೇದವನ್ನೂ ಅಲ್ಲಗಳೆದದ್ದಾಯಿತು ; ಈಗ ಬ್ರಹ್ಮಜಗದ್ಭೇದವನ್ನು ಅಲ್ಲಗಳೆಯುತ್ತಾರೆ. ಮಣ್ಣು ಮಡಕೆಯಾಗಿ ತೋರುವಂತೆಯೂ ಹಗ್ಗವು ಹಾವಾಗಿ ತೋರುವಂತೆಯೂ ಬ್ರಹ್ಮವೇ ಜಗತ್ತಿಗೆ ಕಾರಣವಾಗಿರುವದರಿಂದ ಜಗತ್ತಾಗಿ ತೋರುತ್ತಿದೆ. ಎಲ್ಲವೂ ಬ್ರಹ್ಮದ ಕಾರ್ಯವೇ ಆಗಿರುವದರಿಂದ, ಮಡಕೆಕುಡಿಕೆ- ಮುಂತಾದ ಕಾರ್ಯವು ಮಣ್ಣಿಗಿಂತ

ಬೇರೆಯಾಗಿಲ್ಲದಂತೆಯೂ ಹಾವು ಹಗ್ಗಕ್ಕಿಂತ ಬೇರೆಯಾಗಿಲ್ಲದಂತೆಯೂ ತೋರುವ ಜಗತ್ತೆಲ್ಲವೂ ಬ್ರಹ್ಮವೇ ಆಗಿರುತ್ತದೆ.

ಜಗತ್ತಿಗೆಲ್ಲಕ್ಕೂ ಬ್ರಹ್ಮವೇ ಕಾರಣವು, ಯಾವದೂ ಬ್ರಹ್ಮಕ್ಕಿಂತ ಬೇರೆಯಿಲ್ಲ, ಎಲ್ಲವೂ ಪರಮಾರ್ಥವಾಗಿ ಬ್ರಹ್ಮವೇ- ಎಂಬುದಕ್ಕೆ ವೇದಾಂತಗಳ ಡಂಗುರವಿದೆ. 'ಇದಗ್ಂ ಸರ್ವಮಸೃಜತ' (ಇದೆಲ್ಲವನ್ನೂ ಆತನೇ ಸೃಷ್ಟಿ ಮಾಡಿರುತ್ತಾನೆ, ತೈ. ೨-೬), 'ಯತಃ ಪ್ರಸೂತಾ ಜಗತಃ ಪ್ರಸೂತೀ' (ಯಾವನಿಂದಲೇ ಜಗತ್ತಿನ ಹುಟ್ಟು ಆಗಿರುವದೋ, ತೈ. ನಾ. ೧) 'ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ' (ಅಪ್ಪ, ಈ ಪ್ರಾಣಿಗಳೆಲ್ಲವೂ ಸದ್ಬ್ರಹ್ಮವೆಂಬ ಮೂಲದಿಂದ ಬಂದವು, ಛಾಂ. ೬-೮-೪), 'ವಾಚಾರಮ್ಭಣಂ ವಿಕಾರೋ ನಾಮಧೇಯಮ್' (ಕಾರ್ಯವೆಂಬುದು ಮಾತಿನಿಂದಾಗಿರುವ ಬರಿಯ ಹೆಸರು, ಛಾಂ. ೬-೪-೧), 'ಬ್ರಹ್ಮೈವೇದಂ ವಿಶ್ವಮ್' (ಇದೆಲ್ಲವೂ ಬ್ರಹ್ಮವೇ, ಮುಂ. ೨-೨-೧೧).

**ಸತ್ತಾಸ್ಫುರಣಸೌಖ್ಯಾನಿ ಭಾಸನ್ತೇ ಸರ್ವವಸ್ತುಷು ।**
**ತಸ್ಮಾದ್ ಬ್ರಹ್ಮಮಯಂ ಸರ್ವಮಿತಿ ವೇದಾನ್ತಡಿಣ್ಡಿಮಃ ॥೩೫॥**

೩೫. ಇರವು, ತೋರಿಕೆ, ಪ್ರಿಯವಾಗಿರುವಿಕೆ- ಇವು ಎಲ್ಲಾ ವಸ್ತುಗಳಲ್ಲಿಯೂ ಕಾಣುತ್ತಿರುತ್ತವೆ. ಆದ್ದರಿಂದ ಸರ್ವವೂ ಬ್ರಹ್ಮಮಯವು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಬ್ರಹ್ಮವು ಜಗತ್ತಿಗೆ ಕಾರಣವಾದರೆ ಮಡಕೆಕುಡಿಕೆಗಳಿಗೆ ಕಾರಣವಾದ ಮಣ್ಣು ಅವುಗಳಲ್ಲಿ ಅನುಗತವಾಗಿರುವಂತೆ ಜಗತ್ತಿನಲ್ಲಿ ಬ್ರಹ್ಮಬುದ್ಧಿಯೂ ಇರಬೇಕಲ್ಲವೆ?- ಎಂದು ಶಂಕಿಸಿ ಇಲ್ಲಿ ಉತ್ತರವನ್ನು ಹೇಳಿರುತ್ತದೆ.

ಇದೇ, ತೋರುತ್ತದೆ, ಪ್ರಿಯವಾಗಿದೆ- ಎಂದು ಎಲ್ಲೆಲ್ಲಿಯೂ ನಮಗೆ ಬುದ್ಧಿಯುಂಟಾಗುತ್ತದೆ. ಜ್ಞಾನರೂಪವು ಎಲ್ಲಾ ವಸ್ತುಗಳಲ್ಲಿಯೂ ಕಾಣದಿದ್ದರೂ 'ತೋರುತ್ತದೆ' ಎಂಬ ಜ್ಞಾನದ ಸ್ಫುರಣರೂಪಧರ್ಮವು ಎಲ್ಲೆಲ್ಲಿಯೂ ಇದ್ದೇ ಇದೆ. ಎಲ್ಲಾ ವಸ್ತುಗಳಲ್ಲಿಯೂ ಇದು ಪ್ರಿಯವು ಎಂಬ ಬುದ್ಧಿಯಿರುವದಿಲ್ಲ ; ಏಕೆಂದರೆ ದುಃಖಕಾರಣವಾಗಿರುವ ವಸ್ತುಗಳು ಎಷ್ಟೋ ತೋರುತ್ತಿವೆ. ಆದರೂ ಅಪ್ರಿಯವೆಂದು ನಮಗೆ ತೋರುವ ವಸ್ತುಗಳೂ ಮತ್ತೆ ಕೆಲವರಿಗೆ ಪ್ರಿಯವಾಗಿರಬಹುದಾಗಿದೆ. ಆದ್ದರಿಂದ ಪ್ರಿಯತ್ವವು ಕಾಣದೆ ಇರುವದಕ್ಕೆ ಆಯಾ ಜೀವರ ಅದೃಷ್ಟವೇ ಕಾರಣವೆಂದು ಹೇಳಬೇಕಾಗಿದೆ. ಹೀಗೆ ಬ್ರಹ್ಮದ ಸಚ್ಚಿದಾನಂದಧರ್ಮಗಳು ಜಗತ್ತಿನಲ್ಲಿಯೂ

ತೋರುತ್ತಿರುವದರಿಂದ ಬ್ರಹ್ಮವು ಜಗತ್ಕಾರಣವೆಂದು ಹೇಳಬಹುದಾಗಿದೆ. ಬ್ರ ಸಚ್ಚಿದಾನಂದಮಯವು, ಅದೇ ಎಲ್ಲಾ ಜಗತ್ತೂ ಆಗಿದೆ ಎಂಬುದಕ್ಕೆ ಶ್ರುತಿಯ ಡಂಗುರವೂ ಇದೆ. ಉದಾಹರಣೆ : 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು, ತೈ. ೨-೧), 'ವಿಜ್ಞಾನಮಾನನ್ದಂ ಬ್ರಹ್ಮ' (ಬ್ರಹ್ಮವು ವಿಜ್ಞಾನವೂ ಆನಂದವೂ ಆಗಿದೆ, ಬೃ. ೩-೯-೨೮), 'ಸಚ್ಚತ್ಯಚ್ಚಾಭವತ್... ವಿಜ್ಞಾನಂ ಚಾವಿಜ್ಞಾನಂ ಚ ' (ಮೂರ್ತವೂ ಅಮೂರ್ತವೂ ಚೇತನವೂ ಅಚೇತನವೂ ಬ್ರಹ್ಮವೇ ಆಗಿದೆ, ತೈ. ೨-೬), 'ಆನನ್ದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ। ಆನನ್ದೇನ ಜಾತಾನಿ ಜೀವನ್ತಿ' (ಆನಂದದಿಂದಲೇ ಪ್ರಾಣಿಗಳು ಹುಟ್ಟಿವೆ. ಆನಂದದಿಂದಲೇ ಹುಟ್ಟಿದವು ಜೀವಿಸಿಕೊಂಡಿವೆ, ತೈ. ೩-೬).

ಘಟಕುಡ್ಯಾದಿಕಂ ಸರ್ವಂ ಮೃತ್ತಿಕಾಮಾತ್ರಮೇವ ಚ ।
ತಥಾ ಬ್ರಹ್ಮ ಜಗತ್ಸರ್ವಮಿತಿ ವೇದಾನ್ತಡಿಣ್ಡಿಮಃ ॥೩೬॥

೩೬. ಗಡಿಗೆ, ಗೋಡೆ- ಮುಂತಾದದ್ದೆಲ್ಲವೂ ಮಣ್ಣೇ; ಹೀಗೆಯೇ ಜಗತ್ತೆಲ್ಲವೂ ಬ್ರಹ್ಮವೇ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಕಾರ್ಯವೆಲ್ಲವೂ ಕಾರಣಮಾತ್ರವೇ, ಕಾರಣರೂಪದಿಂದಲೇ ಸತ್ಯವು- ಎಂಬುದಕ್ಕೆ ಮಣ್ಣುಮಡಕೆಗಳ ದೃಷ್ಟಾಂತವಿದೆ. ಇದರಂತೆ ಕಾರ್ಯವಾದ ಜಗತ್ತು ಕಾರಣವಾದ ಬ್ರಹ್ಮಮಾತ್ರವೇ. ಹೀಗೆಂಬುದಕ್ಕೆ ಶ್ರುತಿಡಿಂಡಿಮವೂ ಇದೆ. 'ಯಥಾ ಸೋಮ್ಯೈಕೇನ ಮೃತ್ಪಿಣ್ಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾದ್ ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್' (ಒಂದು ಮಣ್ಣುಮುದ್ದೆಯಿಂದ ಮಣ್ಣಿನಿಂದಾದದ್ದೆಲ್ಲವನ್ನೂ ಹೇಗೆ ಅರಿತುಕೊಳ್ಳಬಹುದಾಗಿರುವದೋ ಹಾಗೆಯೇ ಆ ತತ್ತ್ವದ ಉಪದೇಶವಿರುತ್ತದೆ. ವಿಕಾರವೆಂಬುದು ಬರಿಯ ಮಾತಿನಿಂದಾದ ಹೆಸರು, ಮಣ್ಣೆಂಬುದೇ ಸತ್ಯವು, ಛಾಂ. ೬-೧-೪), 'ಇದಂ ಸರ್ವಂ ಯದಯ ಮಾತ್ಮಾ' (ಇದೆಲ್ಲವೂ ಈ ಆತ್ಮನೇ, ಬೃ. ೨-೪-೬) ಇತ್ಯಾದಿ.

ಅವಸ್ಥಾತ್ರಿತಯಂ ಯಸ್ಯ ಕ್ರೀಡಾಭೂಮಿತಯಾ ಸ್ಥಿತಮ್ ।
ತದೇವ ಬ್ರಹ್ಮ ಜಾನೀಯಾದಿತಿ ವೇದಾನ್ತಡಿಣ್ಡಿಮಃ ॥೩೭॥

೩೭. ಯಾವದಕ್ಕೆ ಅವಸ್ಥಾತ್ರಯವೂ ಆಟದ ಬಯಲೋ, ಅದೇ ಬ್ರಹ್ಮವೆಂದರಿಯಬೇಕು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಲೌಕಿಕವೈದಿಕವ್ಯವಹಾರಕ್ಕೆ ಆಶ್ರಯವಾಗಿರುವ ಅವಸ್ಥೆಯು ಜಾಗರಿತವು, ವಸ್ತುವಿಲ್ಲದಿದ್ದರೂ ವಸ್ತುವಿನಂತೆ ಕಾಣುವ ದೃಶ್ಯಗಳಿರುವ ಅವಸ್ಥೆಯು ಸ್ವಪ್ನವು, ಗ್ರಾಹ್ಯಗ್ರಾಹಕಗ್ರಹಣಗಳಿಲ್ಲದಿರುವ ಅವಸ್ಥೆಯು ಸುಷುಪ್ತವು. ಹೀಗೆ ಈ ಮೂರು ಅವಸ್ಥೆಗಳು ಯಾವ ಆತ್ಮಚೈತನ್ಯಕ್ಕೆ ಕ್ರೀಡಾಭೂಮಿಯಾಗಿರುವವೋ, ಬರಿಯ ಮಾಯಾತ್ಮಕವಾಗಿರುವವೋ, ಆ ಸಾಕ್ಷಿಚೈತನ್ಯವೇ ಬ್ರಹ್ಮವು; ಅವಸ್ಥಾತ್ರಯದ ಪರೀಕ್ಷೆಯಿಂದ ಎಲ್ಲವನ್ನೂ ಪರೀಕ್ಷೆಮಾಡಿದಂತೆ ಆಗುತ್ತದೆ. ಏಕೆಂದರೆ ವಾದಿಗಳೆಲ್ಲರೂ ಕಲ್ಪಿಸಿರುವ ತತ್ತ್ವಗಳೆಲ್ಲವೂ ಈ ಅವಸ್ಥೆಗಳಲ್ಲಿಯೇ ಅಡಕವಾಗಿವೆ. ಈ ಮೂರವಸ್ಥೆಗಳ ತತ್ತ್ವದ ಪರೀಕ್ಷೆಯಿಂದ ಆತ್ಮನೇ ಬ್ರಹ್ಮವು ಎಂಬುದು ಅನುಭವಕ್ಕೆ ಬರುತ್ತದೆ.

ಇದಕ್ಕೆ ವೇದಾಂತಡಿಂಡಿಮದ ಆಧಾರವೂ ಇದೆ. 'ಸ ಏವ ಮಾಯಾ ಪರಿಮೋಹಿತಾತ್ಮಾ ಶರೀರಮಾಸ್ಥಾಯ ಕರೋತಿ ಸರ್ವಮ್ ಸ್ತ್ರ್ಯನ್ನ ಪಾನಾದಿ ವಿಚಿತ್ರಭೋಗೈಃ ಸ ಏಷ ಜಾಗ್ರತ್ ಪರಿತೃಪ್ತಿಮೇತಿ ಸ್ವಪ್ನೇ ತು ಜೀವಃ ಸುಖದುಃಖಭೋಕ್ತಾ ಸ್ವಮಾಯಯಾ ಕಲ್ಪಿತವಿಶ್ವಲೋಕೇ । ಸುಷುಪ್ತಿಕಾಲೇ ಸಕಲೇ ವಿಲೀನೇ ತಮೋಽಭಿಭೂತಃ ಸುಖರೂಪಮೇತಿ । ಪುನಶ್ಚ ಜನ್ಮಾನ್ತರಕರ್ಮಯೋಗಾತ್ ಸ ಏವ ಜೀವಃ ಸ್ವಪಿತಿ ಪ್ರಬುದ್ಧಃ । ಪುರತ್ರಯೇ ಕ್ರೀಡತಿ ಯಶ್ಚ ಜೀವಸ್ತತಸ್ತು ಜಾತಂ ಸಕಲಂ ವಿಚಿತ್ರಮ್ । ಆಧಾರಮಾನನ್ದಮಖಣ್ಡಬೋಧಂ ಯಸ್ಮಿಲ್ಲಯಂ ಯಾತಿ ಪುರತ್ರಯಂ ಚ ॥' (ಆತನೇ ಮಾಯಾಪರಿಮೋಹಿತವಾದ ಅಂತಃಕರಣವುಳ್ಳವನಾಗಿ ಶರೀರವನ್ನಾಂತು ಎಲ್ಲವನ್ನೂ ಮಾಡುತ್ತಿರುತ್ತಾನೆ; ಹೆಂಡತಿ, ಅನ್ನ, ಪಾನ- ಮುಂತಾದ ವಿಚಿತ್ರಭೋಗಗಳಿಂದ ಜಾಗ್ರತ್ತಿನಲ್ಲಿ ಪರಿತೃಪ್ತಿಯನ್ನು ಹೊಂದುತ್ತಿರುವನು; ಸ್ವಪ್ನದಲ್ಲಾದರೋ ಜೀವನು ಸುಖದುಃಖಭೋಕ್ತೃವಾಗಿ ತನ್ನ ಮಾಯೆಯಿಂದ ಕಲ್ಪಿತವಾದ ಲೋಕದಲ್ಲೆಲ್ಲ ಇರುವನು; ಸುಷುಪ್ತಿ ಕಾಲದಲ್ಲಿ ಸಕಲವೂ ವಿಲಯವಾಗಲು ಆ ತಮೋಽಭಿಭೂತನಾದ ಜೀವನು ಆನಂದರೂಪವನ್ನು ಹೊಂದುತ್ತಾನೆ. ಮತ್ತೂ ಮತ್ತೂ ಜನ್ಮಾಂತರದಲ್ಲಿ ಮಾಡಿದ ಕರ್ಮದ ಸಂಬಂಧದಿಂದ ಅದೇ ಜೀವನು ಎಚ್ಚತ್ತು ನಿದ್ರಿಸುತ್ತಿರುವನು. ಹೀಗೆ ಪುರತ್ರಯದಲ್ಲಿಯೂ ಯಾವ ಜೀವನು ಆಡುತ್ತಿರುವನೋ ಅವನಿಂದಲೇ ವಿಚಿತ್ರವಾದ ಸಕಲಜಗತ್ತೂ ಆಗಿರುವದು. ಅದಕ್ಕೆ ಆಧಾರವಾಗಿರುವದು ಅಖಂಡಬೋಧರೂಪವಾದ ಆನಂದವು. ಅದರಲ್ಲಿಯೇ ಮೂರು ಪುರಗಳೂ ಲಯವಾಗುತ್ತಿರುವವು, ಕೈ. ೧-೧೧).

ಯಸ್ನಾದೌ ಯಚ್ಚ ನಾಸ್ತ್ಯನ್ತೇ ತನ್ಮಧ್ಯೇ ಭಾತಮಪ್ಯಸತ್ ।
ಅತೋ ಮಿಥ್ಯಾ ಜಗತ್ಸರ್ವಮಿತಿ ವೇದಾನ್ತಡಿಣ್ಡಿಮಃ ॥೩೮॥

೩೮. ಯಾವದು ಮೊದಲಿರುವದಿಲ್ಲವೋ ಯಾವದು ಕೊನೆಯಲ್ಲಿಯೂ ಇರುವದಿಲ್ಲವೋ ಅದು ನಡುವೆ ತೋರಿಕೊಂಡರೂ ಮಿಥ್ಯೆಯೇ. ಆದ್ದರಿಂದ ಜಗತ್ತೆಲ್ಲವೂ ಮಿಥ್ಯೆಯೇ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಅವಸ್ಥಾತ್ರಯರೂಪವಾದ ಜಗತ್ತು ತೋರುತ್ತಿದೆ; ಸಾಕ್ಷಿಚೈತನ್ಯವೂ ತೋರುತ್ತಿದೆ. ಹೀಗಿರುವಲ್ಲಿ ಇವುಗಳೊಳಗೆ ಪ್ರಪ್ರಂಚವು ಮಾತ್ರ ಮಾಯಿಕವೆಂದು ಹೇಳುವದೇಕೆ?- ಎಂಬ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳಿರುತ್ತದೆ.

ಯಾವದು ಸ್ವರೂಪವ್ಯಭಿಚಾರವಿಲ್ಲದೆ ತೋರುತ್ತಿರುವದೋ ಅದು ಸತ್ಯವು; ಯಾವದು ಮೊದಲು ತೋರದೆ ಕೊನೆಯಲ್ಲಿಯೂ ತೋರದೆ ನಡುವೆ ಮಾತ್ರ ತೋರುತ್ತಿರುವದೋ ಅದು ಮಿಥ್ಯೆಯೇ, ಹುಸಿತೋರಿಕೆಯೇ. ಜಾಗ್ರದವಸ್ಥೆಯಲ್ಲಿ ಕಾಣುವ ಪ್ರಪಂಚವು ಆ ಅವಸ್ಥೆಯಲ್ಲಿ ಮಾತ್ರ ತೋರುತ್ತದೆ; ಆ ಅವಸ್ಥೆಯು ಬರುವ ಮೊದಲೂ ಆಮೇಲೆಯೂ ತೋರುವದಿಲ್ಲ. ಆದ್ದರಿಂದ ಆ ಅವಸ್ಥೆಗೆ ಮಾತ್ರ ಕಟ್ಟುಬಿದ್ದಿರುವ ಆ ಪ್ರಪಂಚವು ಮಿಥ್ಯೆಯೇ. ಇದರಂತೆಯೇ ಸ್ವಪ್ನದಲ್ಲಿ ಕಾಣುವ ಸ್ವಪ್ನಪ್ರಪಂಚವೂ ಮಿಥ್ಯೆಯೇ; ಅದು ಮಿಥ್ಯೆ ಎಂಬ ವಿಷಯಕ್ಕೆ ಎಲ್ಲರ ಅನುಭವವೂ ಇದೆ. ಸುಷುಪ್ತಿಯಲ್ಲಂತೂ ಯಾವ ಪ್ರಪಂಚವೂ ತೋರುವದೇ ಇಲ್ಲ . ಇನ್ನು ಅವಸ್ಥೆಯು ತನ್ನ ಪ್ರಪಂಚವನ್ನಾಗಲಿ, ಪ್ರಪಂಚವು ತನ್ನ ಅವಸ್ಥೆಯನ್ನಾಗಿಲಿ ಬಿಟ್ಟಿರುವದಿಲ್ಲ; ಆದ್ದರಿಂದ ನಿಜವಾಗಿ ಅವಸ್ಥೆಯೆಂದರೇ ಪ್ರಪಂಚವೆನ್ನಬೇಕು. ಈ ದೃಷ್ಟಿಯಿಂದ ನೋಡಿದರೆ ಅವಸ್ಥೆಗಳು ತಮ್ಮ ಸ್ವರೂಪದಿಂದ ಯಾವಾಗಲೂ ಇರುವದಿಲ್ಲ; ಆದ್ಯಂತಗಳಲ್ಲಿ ಅವಕ್ಕೆ ತೋರಿಕೆಯಿಲ್ಲವೆಂಬುದೇ ನಮ್ಮ ಅನುಭವ. ಆದ್ದರಿಂದ ಅವಸ್ಥೆಗಳು ಮಿಥ್ಯೆಯೇ.

ತನ್ನ ಕಾಲದಲ್ಲಿ ತೋರುವದೇ ಸತ್ಯವು; ಯಾವಾಗಲೂ ತೋರಬೇಕೆನ್ನುವ ನಿಯಮವೇತಕ್ಕೆ ?- ಎಂದು ಯಾರಾದರೂ ಶಂಕಿಸಬಹುದು. ಸ್ವಕಾಲದಲ್ಲಿ ತೋರಿದಮಾತ್ರಕ್ಕೆ ಸತ್ಯವೆನ್ನುವದಾದರೆ ಶುಕ್ತಿರಜತ (ಕಪ್ಪೆಯ ಚಿಪ್ಪಿನಲ್ಲಿ ಕಾಣುವ ಬೆಳ್ಳಿ), ಮರುಮರೀಚಿಕಾಜಲ (ಮರುಭೂಮಿಯಲ್ಲಿ ಬಿಸಿಲುಕಿರಣದಲ್ಲಿ ತೋರುವ ನೀರು)- ಮುಂತಾದವುಗಳೂ ತಮ್ಮ ಕಾಲಕ್ಕೆ ತೋರುತ್ತಿರುವದರಿಂದ ಆ ಕಾಲದಲ್ಲಿ ಅಲ್ಲಿ ನಿಜವಾಗಿ

ಬೆಳ್ಳಿಯೂ ನೀರೂ ಇರುವದೆಂದು ಕಲ್ಪಿಸಬೇಕಾದೀತು. ಆದರೆ ಅವು ನಿಜವಾಗಿರುವವೆಂದು ಯಾರೂ ಒಪ್ಪಿಲ್ಲ; ಕಪ್ಪೆಯಚಿಪ್ಪು, ಮರುಭೂಮಿ- ಇವನ್ನು ಕಂಡುಕೊಂಡಾಗ ಇಲ್ಲಿ ಬೆಳ್ಳಿಯು ಯಾವಾಗಲೂ ಇರಲಿಲ್ಲ, ನೀರು ಯಾವಾಗಲೂ ಇರಲಿಲ್ಲ; ಕಪ್ಪೆಯಚಿಪ್ಪೇ ಭ್ರಾಂತಿಯಿಂದ ಬೆಳ್ಳಿಯಂತೆ ತೋರಿತು, ಮರಳು ಕಾಡೇ ನೀರಿನಂತೆ ತೋರಿತು- ಎಂದೇ ನಿಶ್ಚಯವಾದ ಅನುಭವವು ನಮ್ಮೆಲ್ಲರಿಗೂ ಆಗುತ್ತದೆ. ಆದ್ದರಿಂದ ಸ್ವರೂಪವು ಎಂದಿಗೂ ತಪ್ಪದೆ ತೋರುವದೇ ಸತ್ಯವೆಂದು ತಿಳಿಯಬೇಕು. ಹೀಗೆ ನೋಡಿದರೆ ಅವಸ್ಥೆಗಳು ಯಾವವೂ ಯಾವಾಗಲೂ ತೋರುತ್ತಿರುವದಿಲ್ಲವಾಗಿ ಅವು ಮಿಥ್ಯೆಯೆಂದೇ ನಿಶ್ಚಯಿಸಬೇಕು. ಇದು ರಜತವಲ್ಲ ಶುಕ್ತಿಯೇ, ಜಲವಲ್ಲ ಮರುಭೂಮಿಯೇ- ಎಂದು ಬಾಧೆಯುಂಟಾಗುವಂತೆ ಇದು ಜಾಗ್ರತ್ತಲ್ಲ, ಇದು ಸ್ವಪ್ನವಲ್ಲ, ಇದು ಸುಷುಪ್ತಿಯಲ್ಲ- ಎಂದು ಬಾಧಿತವಾಗುವದಿಲ್ಲವಲ್ಲ!- ಎಂದು ಶಂಕಿಸುವದು ಸಲ್ಲದು. ಏಕೆಂದರೆ ಭ್ರಾಂತಿಕಾಲದಲ್ಲಿ ಯಾವದೂ ಬಾಧಿತವಾಗುವದಿಲ್ಲ; ವಿಚಾರದಿಂದ ಅಧಿಷ್ಠಾನದ ನಿಶ್ಚಯಜ್ಞಾನವಾದಮೇಲೆಯೇ ಆರೋಪಿತವು ಮಿಥ್ಯೆಯೆಂಬುದು ಗೊತ್ತಾಗುತ್ತದೆ. ಪ್ರಕೃತದಲ್ಲಿ ಅವಸ್ಥಾತ್ರಯವು ಸತ್ಯವೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲ; ಅವು ಸತ್ಯವೆಂಬ ನಂಬಿಕೆಯೊಂದೇ ಇದೆ. ವಿಚಾರದಿಂದ ಈ ನಂಬಿಕೆಯು ಹಾರಿಹೋದರೆ ಅವಸ್ಥೆಗಳು ಮಿಥ್ಯೆ ಎಂಬ ನಿಶ್ಚಯವಾಗುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ .

ಈ ಶ್ಲೋಕದಲ್ಲಿ ಅವಸ್ಥೆಗಳು 'ಮೊದಲು ಕಾಣುವದಿಲ್ಲ , ಕೊನೆಯಲ್ಲಿಯೂ ಕಾಣುವದಿಲ್ಲ, ನಡುವೆ ಕಾಣುತ್ತವೆ' ಎಂದಿರುವದೂ ಲೋಕದೃಷ್ಟಿಯನ್ನು ಅನುಸರಿಸಿ ಹೇಳಿದ್ದೇ ಎಂದು ತಿಳಿಯಬೇಕು. ಏಕೆಂದರೆ ಅವಸ್ಥಾತ್ರಯಕ್ಕೆ ಕಾಲವು ಆಧಾರವಾಗಿಲ್ಲ; ಕಾಲವೆಂಬುದೇ ಜಾಗ್ರತ್ಸ್ವಪ್ನಗಳಲ್ಲಿ ಒಂದೊಂದವಸ್ಥೆಯಲ್ಲಿಯೇ ಒಂದೊಂದು ಬಗೆಯಿಂದ ತೋರುತ್ತಿರುತ್ತದೆ.

ಜಗತ್ತೆಲ್ಲವೂ ಹುಸಿಯೇ ಎಂಬುದಕ್ಕೆ ವೇದಾಂತಗಳ ಡಂಗುರವೂ ಇದೆ. ಹೇಗೆಂದರೆ: 'ನ ತತ್ರ ರಥಾ ನ ರಥಯೋಗಾ ನ ಪನ್ಥಾನೋ ಭವನ್ತ್ಯಥ ರಥಾನ್ ರಥಯೋಗಾನ್ ಪಥಃ ಸೃಜತೇ' (ಆ ಕನಸಿನಲ್ಲಿ ಗಾಡಿಗಳಾಗಲಿ ಅವಕ್ಕೆ ಕಟ್ಟಿದ ಕುದುರೆಗಳಾಗಲಿ ಅವು ನಡೆಯುವ ದಾರಿಗಳಾಗಲಿ ಇರುವದಿಲ್ಲ; ಆದರೂ ಗಾಡಿಗಳನ್ನೂ ಕುದುರೆಗಳನ್ನೂ ದಾರಿಗಳನ್ನೂ ಕಲ್ಪಿಸಿಕೊಳ್ಳುತ್ತಾನೆ, ಬೃ. ೪-೩-೧೦), 'ನ ತು ತದ್ದ್ವಿತೀಯಮಸ್ತಿ ತತೋಽನ್ಯ ದ್ವಿಭಕ್ತಂ ಯತ್ ಪಶ್ಯೇತ್' (ಆ ಆತ್ಮನಿಗಿಂತ ಬೇರೆಯಾಗಿ ವಿಂಗಡಿಸಿಕೊಂಡ ಎರಡನೆಯದೇ ಆ ಸುಷುಪ್ತಿಯಲ್ಲಿರುವದಿಲ್ಲ; ಹಾಗಿದ್ದರಲ್ಲವೆ, ಅದನ್ನು ಕಾಣಬಹುದಾಗಿತ್ತು? ಬೃ. ೪-೩-೨೩), 'ನೇಹ ನಾನಾಸ್ತಿ ಕಿಂಚನ' (ಈ

ಬ್ರಹ್ಮದಲ್ಲಿ ಒಂದಿಷ್ಟೂ ನಾನಾರೂಪವಾದದ್ದು ಇರುವದಿಲ್ಲ, ಬೃ. ೪-೪-೧೯), 'ಯತ್ರ ಹಿ ದ್ವೈತಮಿತಿ ಭವತಿ ತದಿತರ ಇತರಂ ಪಶ್ಯತಿ' (ಎಲ್ಲಿ ಅವಿದ್ಯೆಯಿಂದ ಎರಡನೆಯದಿದ್ದಂತೆ ಇರುವದೋ ಅಲ್ಲಿ ಒಬ್ಬನು ಇನ್ನೊಬ್ಬನನ್ನು ಕಾಣುವನು, ಬೃ. ೪-೫-೧೫).

**ಯದಸ್ತ್ಯಾದೌ ಯದಸ್ತ್ಯನ್ತೇ ಯನ್ಮಧ್ಯೇ ಭಾತಿ ತತ್ ಸ್ವಯಮ್ ।**
**ಬ್ರಹ್ಮೈವೈಕಮಿದಂ ಸತ್ಯಮಿತಿ ವೇದಾನ್ತಡಿಣ್ಡಿಮಃ ॥೩೯॥**

೩೯. ಯಾವದು ಮೊದಲೂ ಇರುವದೋ ಯಾವದು ಕೊನೆಯಲ್ಲಿಯೂ ಇರುವದೋ ಯಾವದು ನಡುವೆಯೂ ತಾನೇ ತೋರುತ್ತಿರುವದೋ- ಈ ಬ್ರಹ್ಮವೊಂದೇ ಸತ್ಯವು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಇನ್ನು ಸಾಕ್ಷಿಚೈತನ್ಯರೂಪವಾಗಿರುವ ಬ್ರಹ್ಮವೊಂದೇ ಸತ್ಯವು ಎಂಬುದಕ್ಕೆ ಯುಕ್ತಿಯನ್ನು ತಿಳಿಸುತಾರೆ.

ಎಚ್ಚರದ ಮೊದಲು, ಕೊನೆ - ಎರಡು ಕಾಲದಲ್ಲಿಯೂ ಆತ್ಮಚೈತನ್ಯವು ಇರುತ್ತದೆ; ಹೀಗೆಯೇ ಕನಸಿನ ಆದ್ಯಂತಗಳಲ್ಲಿಯೂ ಇರುತ್ತದೆ. ಸುಷುಪ್ತಿಯ ಆದ್ಯಂತಗಳಲ್ಲಿಯೂ ಇರುತ್ತದೆ. ಆದ್ದರಿಂದ ಅದು ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿ ಯಾವದೊಂದಕ್ಕೂ ಕಟ್ಟುಬಿದ್ದಿರುವ ಇರವಿನದಲ್ಲವೆಂದಾಯಿತು.

ಇನ್ನು ಈ ಆತ್ಮನ ತೋರಿಕೆಯು ಇಲ್ಲವೆಂಬ ಅವಸ್ಥೆಯೇ ಇಲ್ಲ; ಜಗತ್ತು ಇಲ್ಲವೇ ಇಲ್ಲವಾದರೂ ಸುಷುಪ್ತಿಯಲ್ಲಿಯೂ ಅದಕ್ಕೆ ಸಾಕ್ಷಿಯಾಗಿ ಇದ್ದೇ ಇರುತ್ತದೆ. ಮತ್ತು ಆತ್ಮಚೈತನ್ಯದ ತೋರಿಕೆಯು ಮತ್ತೊಂದಕ್ಕೆ ಅಧೀನವೂ ಅಲ್ಲ; ಜಗತ್ತಿನ ತೋರಿಕೆಯು ಮಾತ್ರ ಆತ್ಮನ ತೋರಿಕೆಯ ಹಂಗಿನಲ್ಲಿಯೇ ಜೀವಿಸಬೇಕಾಗಿದೆ.

ಅಂತೂ ಹೀಗೆ ಆತ್ಮಚೈತನ್ಯವು ನಿತ್ಯಸ್ವಯಂಪ್ರಕಾಶವಾಗಿರುವದರಿಂದ ಅದೊಂದೇ ಸತ್ಯವು, ಜಗತ್ತಲ್ಲ ಎಂದು ಸಿದ್ಧವಾಯಿತು.

ವೇದಾಂತವಚನಗಳೂ ಈ ವಿಷಯವನ್ನು ಹೀಗೆಂದು ಸಾರುತ್ತಿವೆ. 'ಆತ್ಮೈವಾಸ್ಯ ಜ್ಯೋತಿರ್ಭವತಿ' (ಮಿಕ್ಕೆಲ್ಲ ಜ್ಯೋತಿಗಳೂ ಅಸ್ತವಾದರೂ ಆತ್ಮನೇ ಈ ಪುರುಷನಿಗೆ ಜ್ಯೋತಿಯಾಗಿರುತ್ತದೆ, ಬೃ. ೪-೩-೬), 'ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇಽವಿನಾಶಿತ್ವಾತ್ (ದ್ರಷ್ಟೃವಾದ ಆತ್ಮನ ದೃಷ್ಟಿಚೈತನ್ಯಕ್ಕೆ ಲೋಪವಿಲ್ಲವಷ್ಟೆ

ಏಕೆಂದರೆ ಅದು ಅವಿನಾಶಿಯಾಗಿದೆ, ಬೃ ೪-೩-೨೩), 'ತತ್ ಸತ್ಯಂ ಸ ಆತ್ಮಾ' (ಆ ಸತ್ತೇ ಸತ್ಯವು, ಅದೇ ಆತ್ಮನು, ಛಾಂ. ೬-೮-೭), 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು, ತೈ. ೨-೧)- ಇಂಥ ವಚನಗಳು ಬ್ರಹ್ಮವು ಸತ್ಯವೆಂದೇ ಹೇಳುತ್ತಿವೆ.

## ಮೋಕ್ಷಾರ್ಥಕ್ಕಾಗಿ ಮಾಡಬೇಕಾದ ಸಾಧನ

**ಪುರುಷಾರ್ಥತ್ರಯಾವಿಷ್ಟಾಃ ಪುರುಷಾಃ ಪಶವೋ ಧ್ರುವಮ್ ।**
**ಮೋಕ್ಷಾರ್ಥೀ ಪುರುಷಶ್ರೇಷ್ಠ ಇತಿ ವೇದಾನ್ತಡಿಣ್ಡಿಮಃ ॥೪೦॥**

೪೦. ಪುರುಷಾರ್ಥತ್ರಯದಲ್ಲಿ ಅಭಿನಿವೇಶವುಳ್ಳ ಪುರುಷರು ನಿಜವಾಗಿಯೂ ಪಶುಗಳೇ. ಮೋಕ್ಷಾರ್ಥಿಯೇ ಪುರುಷಶ್ರೇಷ್ಠನು. ಹೀಗೆಂಬುದು ವೇದಾಂತಗಳ ಡಂಗುರವು.

ಇನ್ನು ಮುಂದೆ ಮೋಕ್ಷಪ್ರಾಪ್ತಿಗೆ ಮಾರ್ಗವನ್ನು ಹೇಳಬೇಕೆಂದು ಇಲ್ಲಿ ಮುಮುಕ್ಷುತ್ವವನ್ನು ಹೊಗಳುತ್ತಾರೆ.

ಧರ್ಮಾರ್ಥಕಾಮಗಳೆಂಬ ಮೂರು ಪುರುಷಾರ್ಥಗಳಲ್ಲಿಯೇ ನೆಟ್ಟ ಮನಸ್ಸಿನವರು ಪಶುಗಳೇ ಸರಿ. ಪಶುಗಳಿಗೆ ಜನ್ಮಾಂತರಲೋಕಾಂತರಸಂಬಂಧಿಯಾದ ಆತ್ಮನ ಜ್ಞಾನವಿರುವದಿಲ್ಲವೆಂಬುದು ನಿಜ. ಆದರೆ ಪರಮಾರ್ಥವನ್ನು ಅರಿಯದಿರುವದೂ ಇಷ್ಟದ ಪ್ರಾಪ್ತಿಗೂ ಅನಿಷ್ಟದ ನಿವೃತ್ತಿಗೂ ಹರಿದಾಡುತ್ತಿರುವದೂ ಇವರಿಗೂ ಪಶುಗಳಿಗೂ ಸಮಾನವಾಗಿರುತ್ತದೆ. ಇದಲ್ಲದೆ ಹಾಲು ಕೊಡುವದು, ಹೊರುವದು- ಮುಂತಾದ ಉಪಕಾರಗಳಿಂದ ಜನರಿಗೆ ಪಶುಗಳು ಉಪಭೋಗ್ಯವಾಗಿದ್ದುಕೊಂಡು ಅವರು ಕೊಟ್ಟ ಹುಲ್ಲು ಮುಂತಾದವುಗಳಿಂದ ತೃಪ್ತವಾಗಿರುವಂತೆಯೇ ಪುರುಷಾರ್ಥತ್ರಯಾರ್ಥಿಗಳೂ ಯಾಗಾದಿಗಳನ್ನು ಮಾಡಿ ದೇವತೆಗಳಿಗೆ ಉಪಭೋಗ್ಯರಾಗಿ ಅವರು ಕೊಡುವ ಅರ್ಥಕಾಮಗಳಿಂದ ತೃಪ್ತರಾಗಿರುತ್ತಾರೆ. ಹೀಗೆ ಪಶುಗಳಂತೆ ಕ್ಷುದ್ರಫಲಗಳಿಂದ ತೃಪ್ತರಾಗಿ ಮತ್ತೊಬ್ಬರಿಗಾಗಿ ದುಡಿಯುತ್ತಿರುವದರಿಂದ ಇವರನ್ನು ಪಶುಗಳೆಂದಿರುವದು ಯುಕ್ತವೇ ಆಗಿದೆ. ಆದರೆ ಯಾವನಿಗೆ ಜ್ಞಾನೈಕಲಭ್ಯವಾದ ಮೋಕ್ಷವೇ ಬೇಕೋ, ಅವನೇ ಪುರುಷಶ್ರೇಷ್ಠನು.

ಹೀಗೆಂಬುದಕ್ಕೆ ವೇದಾಂತಗಳ ಡಿಂಡಿಮವಿದೆ. 'ಯಥಾ ಹ ವೈ ಬಹವಃ ಪಶವೋ ಮನುಷ್ಯಂ ಭುಞ್ಜ್ಯುರೇವಮೇಕೈಕಃ ಪುರುಷೋ ದೇವಾನ್ ಭುನಕ್ತಿ' (ಹೇಗೆ ಬಹುಪಶುಗಳು ಮನುಷ್ಯನಿಗೆ ಭೋಗವನ್ನು ಕೊಡುತ್ತಿರುವವೋ ಹಾಗೆಯೇ ಒಬ್ಬೊಬ್ಬ

ಮನುಷ್ಯನೂ ದೇವತೆಗಳಿಗೆ ಭೋಗವನ್ನುಂಟು ಮಾಡುತ್ತಿರುವನು, ಬೃ. ೧-೪-೧೦), 'ಅಥ ಯ ಏತದಕ್ಷರಂ ಗಾರ್ಗಿ ವಿದಿತ್ವಾಽಸ್ಮಾಲ್ಲೋಕಾತ್ ಪ್ರೈತಿ ಸ ಬ್ರಾಹ್ಮಣಃ' (ಇನ್ನು ಎಲೌ ಗಾರ್ಗಿಯೆ, ಈ ಅಕ್ಷರವನ್ನು ಅರಿತುಕೊಂಡು ಯಾವನು ಈ ಲೋಕದಿಂದ ಹೊರಟು ಹೋಗುವನೋ ಅವನೇ ಬ್ರಾಹ್ಮಣನು, ಬೃ. ೩-೮-೧೦).

**ಷಣ್ನಿಹತ್ಯ ತ್ರಯಂ ಹಿತ್ವಾ ದ್ವಯಂ ಭಿತ್ತ್ವಾಽಖಿಲಾತಿಗಮ್ ।**
**ಏಕಂ ಬುದ್ಧ್ವಾಽಶ್ನುತೇ ಮೋಕ್ಷಮಿತಿ ವೇದಾನ್ತಡಿಣ್ಡಿಮಃ ॥೪೧॥**

೪೧. ಆರನ್ನು ನಾಶಮಾಡಿಕೊಂಡು, ಮೂರನ್ನು ಬಿಟ್ಟು, ಎರಡನ್ನು ಸೀಳಿ, ಎಲ್ಲವನ್ನೂ ಮೀರಿರುವ ಒಂದನ್ನು ಅರಿತುಕೊಂಡರೆ ಮೋಕ್ಷವನ್ನು ಪಡೆದುಕೊಳ್ಳುತ್ತಾನೆ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಆರು ಊರ್ಮಿಗಳನ್ನು ನಾಶಮಾಡಿಕೊಂಡು, ಮೂರು ಏಷಣೆಗಳನ್ನು ಬಿಟ್ಟು, ಕರ್ತೃತ್ವಭೋಕ್ತೃತ್ವಗಳೆಂಬ ಎರಡನ್ನು ಬಿಟ್ಟು , ಅದ್ವಿತೀಯವಾದ ಬ್ರಹ್ಮತತ್ತ್ವವೆಂಬ ಒಂದನ್ನು ಅರಿತುಕೊಂಡರೆ ಮೋಕ್ಷವನ್ನು ಹೊಂದುತ್ತಾನೆ.

ಹೀಗೆಂದು ವೇದಾಂತಡಿಂಡಿಮವಿದೆ. 'ಯೋಽಶನಾಯಾಪಿಪಾಸೇ ಶೋಕಂ ಮೋಹಂ ಜರಾಂ ಮೃತ್ಯುಮತ್ಯೇತಿ' (ಯಾವನು ಹಸಿವುಬಾಯರಿಕೆಗಳು, ಶೋಕ, ಮೋಹ, ಮುಪ್ಪು , ಸಾವು- ಇವುಗಳನ್ನು ಮೀರಿರುವನೋ, ಬೃ. ೩-೫-೧), 'ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರನ್ತಿ' (ಪುತ್ರೈಷಣೆಯನ್ನೂ ವಿತ್ತೈಷಣೆಯನ್ನೂ ಲೋಕೈಷಣೆಯನ್ನೂ ಬಿಟ್ಟೆದ್ದು ಭಿಕ್ಷಾಚರ್ಯೆಯನ್ನು ಆಚರಿಸುತ್ತಾರೆ, ಬೃ. ೩-೫-೧), 'ಕಾಮಃ ಕರೋತಿ ನಾಹಂ ಕರೋಮಿ ಕಾಮಃ ಕರ್ತಾ ನಾಹಂ ಕರ್ತಾ ಕಾಮಃ ಕಾರಯಿತಾ ನಾಹಂ ಕಾರಯಿತಾ' (ಕಾಮವೇ ಮಾಡುತ್ತದೆ, ನಾನು ಮಾಡುವದಿಲ್ಲ; ಕಾಮವೇ ಕರ್ತೃ, ನಾನು ಕರ್ತೃವಲ್ಲ; ಕಾಮವೇ ಕಾರಯಿತೃ, ನಾನು ಕಾರಯಿತೃವಲ್ಲ, ತೈ. ನಾ. ೭೯), 'ಏತಮಾನನ್ದಮಯಮಾತ್ಮಾನಮುಪಸಂಕ್ರಾಮತಿ' (ಈ ಆನಂದಮಯಾತ್ಮನನ್ನು ಮೀರುತ್ತಾನೆ, ತೈ. ೨-೮).

**ಹಿತ್ವಾ ಷಟ್ ಪಞ್ಚ ಭಿತ್ತ್ವಾಽಥ ಗತ್ವಾಽಗ್ರೇ ಚತುರಸ್ತ್ರಿಕಮ್**
**ದ್ವಯಂ ಹಿತ್ವಾ ಶ್ರಯೇದೇಕಮಿತಿ ವೇದಾನ್ತಡಿಣ್ಡಿಮಃ ॥೪೨॥**

೪೨. ಆರನ್ನು ಬಿಟ್ಟು, ಬಳಿಕ ಐದನ್ನು ಭೇದಿಸಿ, ನಾಲ್ಕನ್ನೂ ಮೂರನ್ನೂ ಮೊದಲೇ ಹೊಂದಿ, ಎರಡನ್ನು ಬಿಟ್ಟು ಒಂದನ್ನೇ ಆಶ್ರಯಿಸಬೇಕು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ- ಎಂಬ ಆರು ದೋಷಗಳನ್ನು ತಪ್ಪಿಸಿಕೊಳ್ಳಬೇಕು; ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ ಆತ್ಮನೆಂದು ಕಲ್ಪಿಸಿಕೊಂಡಿರುವ ಪಂಚಕೋಶಗಳನ್ನು ಅನಾತ್ಮವೆಂದು ವಿವೇಚನೆಮಾಡಿಕೊಳ್ಳಬೇಕು; ವಿವೇಕ, ವೈರಾಗ್ಯ, ಶಮಾದಮಾದಿಗಳು, ಮುಮುಕ್ಷುತ್ವ- ಎಂಬ ಸಾಧನಚತುಷ್ಟಯವನ್ನು ಮೊದಲೇ ಹೊಂದಿರಬೇಕು. ಆತ್ಮನ ಶ್ರವಣ ಮನನನಿದಿಧ್ಯಾಸನಗಳನ್ನು ಮಾಡಿಕೊಂಡಿರಬೇಕು. ಜೀವಬ್ರಹ್ಮಭೇದವನ್ನು ತೊಲಗಿಸಿಕೊಂಡು ಆತ್ಮತತ್ತ್ವವೊಂದನ್ನೇ ಆಶ್ರಯಿಸಿಕೊಳ್ಳಬೇಕು.

ಹೀಗೆಂಬುದಕ್ಕೆ ವೇದಾಂತಗಳ ಡಂಗುರವೂ ಇದೆ. 'ಯದಾ ಸರ್ವೇ ಪ್ರಮುಚ್ಯನ್ತೇ ಕಾಮಾ ಯೇಽಸ್ಯ ಹೃದಿ ಶ್ರಿತಾಃ' (ಇವನ ಹೃದಯದಲ್ಲಿ ಆಶ್ರಯಿಸಿಕೊಂಡಿರುವ ಕಾಮಗಳೆಲ್ಲ ಯಾವಾಗ ಬಿಟ್ಟುಹೋಗುವವೋ... ಕ. ೨-೩-೧೪), 'ಏತಮನ್ನಮಯಮಾತ್ಮಾನಮುಪಸಂಕ್ರಮ್ಯ' (ಈ ಅನ್ನಮಯವನ್ನು ಮೀರಿ... ತೈ. ೩-೧೦), 'ಬ್ರಾಹ್ಮಣೋ ನಿರ್ವೇದಮಾಯಾತ್' (ಬ್ರಾಹ್ಮಣನಾದವನು ವೈರಾಗ್ಯವನ್ನು ಹೊಂದಬೇಕು, ಮುಂ. ೧-೨-೧೨), 'ಶಾನ್ತೋ ದಾನ್ತ ಉಪರತಸ್ತಿತಿಕ್ಷುಃ ಸಮಾಹಿತಃ ಶ್ರದ್ಧಾವಿತ್ತೋ ಭೂತ್ವಾಽತ್ಮನ್ಯೇವಾತ್ಮಾನಂ ಪಶ್ಯೇತ್' (ಶಾಂತನಾಗಿ ದಾಂತನಾಗಿ ಉಪರತನಾಗಿ ತಿತಿಕ್ಷುವಾಗಿ, ಸಮಾಹಿತನಾಗಿ, ಶ್ರದ್ಧಾವಿತ್ತನಾಗಿ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳಬೇಕು, ಬೃ. ೪-೪-೨೩), 'ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ' (ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನ ಮಾಡಬೇಕು, ಬೃ. ೨-೪-೫), 'ಅನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ' (ಈ ದೇವತೆ ಬೇರೆ, ನಾನು ಬೇರೆ ಎನ್ನುವವನು ಅರಿಯನು, ಬೃ. ೧-೪-೧೦), 'ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ । ಏವಂ ಮುನೇರ್ವಿಜಾನತ ಆತ್ಮಾ ಭವತಿ ಗೌತಮ' (ಶುದ್ಧವಾದ ನೀರನ್ನು ಶುದ್ಧವಾದ ನೀರಿನಲ್ಲಿ ಹಾಕಿದಾಗ ಹೇಗಾಗುವದೋ, ಹಾಗೆಯೇ ತತ್ತ್ವವನ್ನರಿತುಕೊಂಡ ಮುನಿಯ ಆತ್ಮನು ಆಗುವನಯ್ಯ, ಗೌತಮನೆ, ಕ. ೨-೧-೧೫), 'ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ । ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್' (ಪ್ರಣವವೇ ಧನುಸ್ಸು, ಆತ್ಮನೇ ಬಾಣವು, ಆ

ಬ್ರಹ್ಮವೇ ಲಕ್ಷ್ಯವೆನಿಸುತ್ತದೆ. ಅಪ್ರಮತ್ತನಾಗಿ ಬಾಣವನ್ನು ಹೊಡೆಯಬೇಕು; ಬಾಣದಂತೆ ತನ್ಮಯನಾಗಬೇಕು, ಮುಂ. ೨-೨-೪).

## ಹಿಂದಿನ ಶ್ಲೋಕದ್ವಯದ ವಿವರಣೆ

**ದೇಹೋ ನಾಹಮಹಂ ದೇಹೀ ದೇಹಸಾಕ್ಷೀತಿ ನಿಶ್ಚಯಾತ್ ।**
**ಜನ್ಮಮೃತ್ಯುಪ್ರಹೀಣೋಽಸಾವಿತಿ ವೇದಾನ್ತಡಿಣ್ಡಿಮಃ ॥೪೩॥**

೪೩. ನಾನು ದೇಹವಲ್ಲ, ದೇಹವುಳ್ಳವನೂ ಅಲ್ಲ, ದೇಹಸಾಕ್ಷಿಯು - ಎಂದು ನಿಶ್ಚಯಿಸಿಕೊಂಡರೆ ಆತನು ಹುಟ್ಟು ಸಾವುಗಳಿಲ್ಲದವನಾಗುವನು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಷಡೂರ್ಮಿಗಳನ್ನು ಹೇಗೆ ಗೆಲ್ಲಬೇಕೆಂಬುದನ್ನು ವಿವರಿಸುವುದಕ್ಕೆ ಈಗ ಹೊರಟಿರುತ್ತಾರೆ. ಅವುಗಳೊಳಗೆ ಹುಟ್ಟು ಸಾವುಗಳನ್ನು ಹೇಗೆ ಮೀರಬೇಕು? ಎಂದರೆ ದೇಹವು ನಾನಲ್ಲ, ದೇಹಿಯೂ ನಾನಲ್ಲ- ಎಂದು ನಿಶ್ಚಯಿಸಿಕೊಂಡರೆ ದೇಹದ ಧರ್ಮಗಳ ಸಂಬಂಧವು ಇಲ್ಲವಾಗುವದು. ಶ್ಲೋಕದಲ್ಲಿ 'ದೇಹೀ' ಎಂದಿರುವದರಿಂದ 'ನ ದೇಹೀ' ಎಂದು ಸಂಬಂಧವನ್ನು ಮಾಡಿಕೊಳ್ಳಬೇಕಾಗಿದೆ. ಆದರೆ ಮುಂದಿನ ಶ್ಲೋಕಗಳಲ್ಲೆಲ್ಲ 'ದೇವೋ' ಎಂದೇ ಇರುವದರಿಂದ ಇಲ್ಲಿಯೂ 'ದೇವೋ ದೇಹಸಾಕ್ಷಿ' ಎಂಬ ಪಾಠವನ್ನೇ ಕಲ್ಪಿಸಿಕೊಂಡರೆ ಆಗ ದೇಹಸಾಕ್ಷಿಯಾದ ಚಿತ್ಸ್ವಭಾವನೇ ನಾನು ಎಂಬರ್ಥವು ಹೊರಡುತ್ತದೆ. ಈ ಜ್ಞಾನದಿಂದ ಜನ್ಮಮೃತ್ಯುಗಳನ್ನು ಮೀರಿದಂತೆ ಆಗುತ್ತದೆ ಎಂದರ್ಥ.

'ಜರಾಮೃತ್ಯುಪ್ರಹೀಣೋಽಸೌ' ಎಂದೂ ಒಂದು ಪಾಠವಿದೆ. ಆಗ ಊರ್ಮಿಷಟ್ಕದಲ್ಲಿ ಕೊನೆಯ ಎರಡಾದ ಜರಾಮೃತ್ಯುಗಳನ್ನು ದೇಹವಿವೇಕದಿಂದ ನಾಶಮಾಡಿಕೊಳ್ಳಬೇಕು ಎಂದರ್ಥ.

ಇದಕ್ಕೆ ಆಧಾರವಾಗಿರುವ ವೇದಾಂತದ ಡಂಗುರಗಳಿವು: 'ಅಶರೀರಂ ಶರೀರೇಷು' (ಶರೀರಗಳಲ್ಲಿ ಅಶರೀರನಾಗಿರುವ, ಕ. ೧-೨-೧೧), 'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್' (ಆತ್ಮನು ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ, ಕ. ೧-೨-೧೮).

**ಪ್ರಾಣೋ ನಾಹಮಹಂ ದೇವಃ ಪ್ರಾಣಸಾಕ್ಷೀತಿ ನಿಶ್ಚಯಾತ್ ।**
**ಕ್ಷುತ್ಪಿಪಾಸೋಪಶಾನ್ತಿಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೪೪॥**

೪೪. ನಾನು ಪ್ರಾಣವಲ್ಲ, ಪ್ರಾಣಸಾಕ್ಷಿಯಾದ ದೇವನು- ಎಂದು ನಿಶ್ಚಯವಾಗಿ ಅರಿತುಕೊಳ್ಳುವದರಿಂದ ಹಸಿವು ಬಾಯಾರಿಕೆಯೂ ಇಲ್ಲವಾಗುವವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ದೇಹಸಾಕ್ಷಿಯು ನಾನು ಎಂಬ ಅರಿವಿನಿಂದ ದೇಹಧರ್ಮಗಳು ಆತ್ಮನಿಗೆ ಇಲ್ಲ ಎಂಬುದು ನಿಶ್ಚಯವಾಗುವಂತೆಯೇ ಪ್ರಾಣಸಾಕ್ಷಿಯು ನಾನು ಎಂಬ ಅರಿವಿನಿಂದ ಪ್ರಾಣಧರ್ಮಗಳೂ ಆತ್ಮನಿಗೆ ಇಲ್ಲವೆಂದಾಗುವದು.

ಇದಕ್ಕೆ 'ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ । ಇತರೇಣ ತು ಜೀವನ್ತಿ ಯಸ್ಮಿನ್ನೇತಾವುಪಾಶ್ರಿತೌ' (ಯಾವ ಮನುಷ್ಯನೂ ಪ್ರಾಣದಿಂದ ಜೀವಿಸಿರುವದಿಲ್ಲ, ಅಪಾನದಿಂದಲೂ ಜೀವಿಸಿರುವದಿಲ್ಲ; ಈ ಎರಡೂ ಯಾವನನ್ನು ಆಶ್ರಯಿಸಿಕೊಂಡಿರುವವೋ ಆ ಆತ್ಮನಿಂದಲೇ ಜೀವಿಸಿರುತ್ತಾನೆ, ಕ. ೨-೨-೫) ಮುಂತಾದ ವೇದಾಂತಡಿಂಡಿಮವಿದೆ.

**ಮನೋ ನಾಹಮಹಂ ದೇವೋ ಮನಃಸಾಕ್ಷೀತಿ ನಿಶ್ಚಯಾತ್ ।**
**ಶೋಕಮೋಹಾಪಹಾನಿಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೪೫॥**

೪೫. ನಾನು ಮನಸ್ಸಲ್ಲ, ಮನಸ್ಸಿಗೂ ಸಾಕ್ಷಿಯಾದ ದೇವನು -ಎಂದು ಗೊತ್ತುಪಡಿಸಿಕೊಳ್ಳುವದರಿಂದ ಶೋಕಮೋಹಗಳು ಇಲ್ಲವಾಗುವವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಇದರಂತೆ ಮನಸ್ಸಿನಿಂದ ಸಾಕ್ಷಿಯನ್ನು ಬೇರ್ಪಡಿಸಿಕೊಳ್ಳುವದರಿಂದ ಶೋಕಮೋಹಗಳೆಂಬ ಮನೋಧರ್ಮಗಳೂ ಆತ್ಮನಿಗಿಲ್ಲವೆಂದಾಗುವದು. ಇಲ್ಲಿ ಮನಸ್ಸೆಂದರೆ ಸಂಕಲ್ಪವಿಕಲ್ಪಾತ್ಮಕವಾದ ವೃತ್ತಿಗಳುಳ್ಳ ಅಂತಃಕರಣವು. 'ಸರ್ವೇಷಾಂ ಸಂಕಲ್ಪಾನಾಂ ಮನ ಏಕಾಯನಮ್' (ಸಂಕಲ್ಪಗಳಿಗೆಲ್ಲ ಮನಸ್ಸೊಂದೇ ಗತಿಯು, ಬೃ. ೨-೪-೧೧) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.

ಇಲ್ಲಿ ಏಷಣಾತ್ರಯವನ್ನು ತ್ಯಾಗಮಾಡುವ ಉಪಾಯವನ್ನು ತಿಳಿಸಿ ಕೊಟ್ಟಂತೆ ಆಯಿತು. ಏಕೆಂದರೆ 'ಕಾಮಃ ಸಂಕಲ್ಪೋ ವಿಚಿಕಿತ್ಸಾ ಶ್ರದ್ಧಾಽಶ್ರದ್ಧಾ' (ಬೃ. ೧-೫-೩) ಎಂಬ ಶ್ರುತಿಯಲ್ಲಿ ಇಚ್ಛೆಯೂ ಮನಸ್ಸಿನ ಧರ್ಮವೆಂದೇ ಹೇಳಿರುತ್ತಾರೆ.

**ಬುದ್ಧಿರ್ನಾಹಮಹಂ ದೇವೋ ಬುದ್ಧಿಸಾಕ್ಷೀತಿ ನಿಶ್ಚಯಾತ್ ।**
**ಕರ್ತೃಭಾವನಿವೃತ್ತಿಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೪೬॥**

೪೬. ನಾನು ಬುದ್ಧಿಯಲ್ಲ , ಬುದ್ಧಿಗೂ ಸಾಕ್ಷಿಯಾದ ದೇವನು -ಎಂದು ಗೊತ್ತುಪಡಿಸಿಕೊಳ್ಳುವದರಿಂದ ಕರ್ತೃತ್ವವು ನೀಗಿಹೋಗುವದು. ಹೀಗೆಂಬುದು ವೇದಾಂತಗಳ ಡಂಗುರವು.

**ವಿವರಣೆ**

ಬುದ್ಧಿಯು ನಾನಲ್ಲ ಎಂದು ತಿಳಿದುಕೊಳ್ಳುವದರಿಂದ ಕರ್ತೃತ್ವವು ನಿವೃತ್ತಿಯಾಗುತ್ತದೆ. ನಿಶ್ಚಯಾತ್ಮಕವಾದ ಅಂತಃಕರಣವೇ ಬುದ್ಧಿಯು. ಬುದ್ಧಿಯಿಂದ ಕೂಡಿದವನೇ ಕರ್ತೃ ಎನ್ನುವದಕ್ಕೆ 'ವಿಜ್ಞಾನಂ ಯಜ್ಞಂ ತನುತೇ' (ವಿಜ್ಞಾನವು ಯಜ್ಞವನ್ನು ಮಾಡುತ್ತದೆ, ತೈ. ೨-೫) ಎಂಬ ಶ್ರುತಿಯು ಪ್ರಮಾಣವು.

ಬುದ್ಧಿಯು ನಾನಲ್ಲ ಎಂದು ತಿಳಿದುಕೊಂಡರೆ ಭೋಕ್ತೃತ್ವದಿಂದಲೂ ಬಿಡುಗಡೆಯಾಗುವದು; ಏಕೆಂದರೆ ಬುದ್ಧಿಯನ್ನು ಆಶ್ರಯಿಸಿಕೊಂಡೇ ಭೋಕ್ತೃತ್ವವೂ ತೋರಿಕೊಳ್ಳುತ್ತದೆ. ಆದ್ದರಿಂದಲೇ 'ಆತ್ಮೇನ್ದ್ರಿಯ ಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ' (ದೇಹ, ಇಂದ್ರಿಯ, ಅಂತಃಕರಣ- ಇವುಗಳಿಂದ ಕೂಡಿಕೊಂಡವನೇ ಭೋಕ್ತೃವೆಂದು ತಿಳಿದವರು ಹೇಳುತ್ತಾರೆ, ಕ. ೧-೩-೪) ಎಂದು ಶ್ರುತಿಯು ಸಾರುತ್ತಿರುವದು.

ಆತ್ಮನು ಬುದ್ಧಿಯನ್ನು ತಾನೆಂದು ತಿಳಿದುಕೊಂಡಿರುವದರಿಂದಲೇ ಕರ್ತೃಭೋಕ್ತೃವಾಗಿರುವಂತೆ ತೋರುತ್ತಾನೆಂದೂ ನಿಜವಾಗಿ ತಾನುತಾನು ಕರ್ತೃವೂ ಅಲ್ಲ, ಭೋಕ್ತೃವೂ ಅಲ್ಲ ಎಂದೂ ಶ್ರುತಿಯ ಡಂಗುರವಿದೆ. 'ಸ ಸಮಾನಃ ಸನ್ನುಭೌ ಲೋಕಾವನುಸಂಚರತಿ ಧ್ಯಾಯತೀವ ಲೇಲಾಯತೀವ' (ಅವನು ಬುದ್ಧಿಯೊಡನೆ ಒಂದಾಗಿರುವವನಾಗಿ ಎಚ್ಚರಕನಸುಗಳೆಂಬ ಎರಡವಸ್ಥೆಗಳನ್ನೂ ಒಂದೊಂದಾಗಿ ಸೇರಿ ಸಂಚರಿಸುತ್ತಿರುವನು, ಅರಿಯುವವನಂತೆಯೂ ಕೆಲಸಮಾಡುವವನಂತೆಯೂ ತೋರುತ್ತಿರುವನು, ಬೃ. ೪-೩-೭) ಎಂಬ ವಚನವು ಇಲ್ಲಿ ಉದಾಹರಣೆಯಾಗಿದೆ.

**ನಾಜ್ಞಾನಂ ಸ್ಯಾಮಹಂ ದೇವೋಽಜ್ಞಾನಸಾಕ್ಷೀತಿ ನಿಶ್ಚಯಾತ್ ।**
**ಸರ್ವಾನರ್ಥನಿವೃತ್ತಿಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೪೭॥**

೪೭. ನಾನು ಅಜ್ಞಾನವಲ್ಲ , ಅಜ್ಞಾನಕ್ಕೂ ಸಾಕ್ಷಿಯಾದ ದೇವನು- ಎಂದು ಗೊತ್ತುಪಡಿಸಿಕೊಳ್ಳುವದರಿಂದ ಎಲ್ಲಾ ಅನರ್ಥಗಳೂ ತೊಲಗುವವು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

'ಎಲ್ಲವನ್ನೂ ಮೀರಿರುವ ಒಂದನ್ನು ಅರಿತುಕೊಂಡರೆ ಮೋಕ್ಷವನ್ನು ಹೊಂದುತ್ತಾನೆ' (೪೧) ಎಂದು ಹಿಂದೆ ಹೇಳಿದ್ದದ್ದು ಹೊಂದುವದಿಲ್ಲವಲ್ಲ!- ದೇಹಪ್ರಾಣಮನೋಬುದ್ಧಿಗಳ ಸಂಬಂಧವು ಆತ್ಮನಿಗೆ ಇಲ್ಲವೆಂದರೂ ಸುಷುಪ್ತಿಯಲ್ಲಿ ಅಜ್ಞಾನವಿರುತ್ತದೆಯಲ್ಲವೆ? ಆ ಅಜ್ಞಾನವನ್ನು ತಪ್ಪಿಸಿಕೊಳ್ಳುವದಕ್ಕೆ ಉಪಾಯವೆಲ್ಲಿದೆ?- ಎಂಬ ಆಕ್ಷೇಪಕ್ಕೆ ಇಲ್ಲಿ ಪರಿಹಾರವನ್ನು ಹೇಳಿರುತ್ತದೆ.

'ನಾನು ಅಜ್ಞಾನವು' ಎಂದು ಯಾರಿಗೂ ಅರಿವಿರುವದಿಲ್ಲ . ಆದರೂ ದೇಹವು ನಾನು ಎಂದು ಯಾರೂ ಅಂದುಕೊಳ್ಳದಿದ್ದರೂ ದೇಹದ ಧರ್ಮವನ್ನು ಅಧ್ಯಾರೋಪಮಾಡಿಕೊಂಡು 'ಹೋಗುತ್ತೇನೆ, ಬರುತ್ತೇನೆ'- ಎಂದು ಮುಂತಾಗಿ ವ್ಯವಹಾರಮಾಡುವಂತೆಯೇ 'ನಾನು ಮೂಢನು, ನನ್ನ ಸ್ವರೂಪವು ಕೂಡ ನನಗೆ ತಿಳಿಯದು' 'ನಿದ್ರೆಯಲ್ಲಿ ನನಗೆ ಏನೊಂದೂ ತಿಳಿಯಲಿಲ್ಲ' ಎಂಬ ಪರಾಮರ್ಶವಾಗುವದರಿಂದಲೂ ಅಜ್ಞಾನವೆಂಬ ಧರ್ಮವುಳ್ಳವನಿಗೆ ನಾನು ಎಂಬ ತಪ್ಪುತಿಳಿವಳಿಕೆಯು ಇದ್ದೇ ಇರುತ್ತದೆ. ಈ ತಪ್ಪುತಿಳಿವಳಿಕೆಯು ನಾನು ಅಜ್ಞಾನಕ್ಕೆ ಸಾಕ್ಷಿಯು ಎಂಬ ಜ್ಞಾನದಿಂದ ಬಾಧಿತವಾಗಿಬಿಡುತ್ತದೆ.

'ನಾನು ಮೂಢನು' ಎಂಬಲ್ಲಿ ಅಜ್ಞಾನವನ್ನು ಅರಿಯುತ್ತಿರುವ ಸಾಕ್ಷಿಯೇ ನಾನಾಗಿರುವದರಿಂದ ಸಾಕ್ಷ್ಯವಾದ ಅಜ್ಞಾನವು ನನ್ನ ಧರ್ಮವಲ್ಲ ಎಂದು ನಿಶ್ಚಯವಾಗುತ್ತದೆ. ಸುಷುಪ್ತಿಯಲ್ಲಿ ನನಗೆ ಏನೂ ತಿಳಿಯಲಿಲ್ಲ ಎಂಬ ಪರಾಮರ್ಶವು ಎಚ್ಚರದಲ್ಲಾಗುತ್ತದೆಯಾದರೂ ನಿದ್ರೆಯಲ್ಲಿ ನನಗೆ ಏನೂ ತಿಳಿಯುತ್ತಿಲ್ಲ- ಎಂಬ ಅರಿವು ಯಾರಿಗೂ ಆಗುವಂತಿಲ್ಲ. ಆದ್ದರಿಂದ ನಿದ್ರೆಯಲ್ಲಿ ಏನೂ ತಿಳಿಯುವದಿಲ್ಲ ಎಂಬುದು ಎಚ್ಚರದ ದೃಷ್ಟಿಯಿಂದಲೇ ಎಂದಾಯಿತು. ಆಗಲೂ ಅಲ್ಲಿ ಅರಿಯುವದಿಲ್ಲವೆಂಬುದಾದರೂ ಏಕೆ? ಆತ್ಮನಲ್ಲಿ ಜ್ಞಾನವಿಲ್ಲದ್ದರಿಂದಲೆ?- ಎಂದು ವಿಚಾರಿಸಿದರೆ ಹಾಗಿಲ್ಲ; ಏಕೆಂದರೆ ಅಲ್ಲಿ ಅರಿಯುವದಕ್ಕೆ ತಕ್ಕ ವಿಷಯವೇ ಇಲ್ಲ . ಆದ್ದರಿಂದಲೇ ಶ್ರುತಿಯು 'ಯದ್ವೈ ತನ್ನ ಪಶ್ಯತಿ ಪಶ್ಯನ್ ವೈ ತನ್ನ ಪಶ್ಯತಿ ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇಽವಿನಾಶಿತ್ವಾತ್ । ನ ತು ತದ್ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯತ್ ಪಶ್ಯೇತ್ ।' (ಅಲ್ಲಿ ಕಾಣುವದಿಲ್ಲವಷ್ಟೆ, ನೋಡುವವನಾಗಿಯೇ ಇದ್ದು ಅಲ್ಲಿ ಏನನ್ನೂ ಕಾಣುವದಿಲ್ಲ; ನೋಡುವವನ ನೋಟಕ್ಕೆ ವಿಪರಿಲೋಪವಿಲ್ಲವಷ್ಟೆ. ಆದರೆ ಅದಕ್ಕಿಂತ ಬೇರೆಯಾಗಿ ವಿಂಗಡವಾಗಿರುವ ಎರಡನೆಯದು ಇಲ್ಲ; ಇದ್ದರಲ್ಲವೆ, ಅದನ್ನು ಕಾಣಬಹುದಾಗಿತ್ತು? ಬೃ. ೪-೩-೨೩) ಎಂದು ಸಾರುತ್ತಿದೆ.

ಈ ಶ್ಲೋಕದಲ್ಲಿ ಹೇಳಿರುವ ಸುಷುಪ್ತಿಯ ಅಜ್ಞಾನವು ಎಂದರೆ ಯಾವದು? ಎಂಬುದನ್ನು ತಿಳಿದುಕೊಳ್ಳುವದರಲ್ಲಿ ಪ್ರಯೋಜನವುಂಟು. ಏಕೆಂದರೆ ಸುಷುಪ್ತಿಯಲ್ಲಿ ಆತ್ಮನನ್ನು ಮುಸುಕಿರುವ ಒಂದಾನೊಂದು ಮರಹು ಇದೆ ಎಂದೇ ಕೆಲವರು ಹೇಳುತ್ತಿದಾರೆ. ಆದರೆ ಅದು ಇರುವದಕ್ಕೆ ಸುಷುಪ್ತಿಯ ಅನುಭವದ ಆಧಾರವಿಲ್ಲ; ಎಚ್ಚರದಲ್ಲಿ ಆಗುವ ಸುಷುಪ್ತಿಯ ನೆನಪಿನ ಆಧಾರವೂ ಇಲ್ಲ. ಹೇಗೆಂದರೆ ಸುಷುಪ್ತಿಯಲ್ಲಿ ನಮಗೆ ಏತರ ಅನುಭವವೂ ಇಲ್ಲದ್ದರಿಂದ ಅಲ್ಲಿ ಅಜ್ಞಾನವನ್ನು ಅನುಭವಿಸಿದೆವು ಎಂದು ಹೇಳುವದಕ್ಕಿಲ್ಲ. ಎಚ್ಚರದಲ್ಲಿ ನನಗೆ ಸುಷುಪ್ತಿಯಲ್ಲಿ ಯಾವ ಅರಿವೂ ಇರಲಿಲ್ಲ ಎಂದು ನೆನಪಾಗುತ್ತದೆಯೇ ಹೊರತು; ನನಗೆ ಸುಷುಪ್ತಿಯಲ್ಲಿ ಅಜ್ಞಾನದ ಅನುಭವವು ಆಯಿತು ಎಂದೇನೂ ಆಗುವದಿಲ್ಲ. ಹಾಗಾದರೆ ಎಚ್ಚರದಲ್ಲಾಗುವ ನೆನಪು ಜ್ಞಾನಾಭಾವರೂಪವಾದ ಅಜ್ಞಾನದ್ದಾಗಿರಬಾರದೆ?- ಎಂದರೆ ಅದೂ ಹೊಂದುವದಿಲ್ಲ. ಏಕೆಂದರೆ ಸುಷುಪ್ತಿಯಲ್ಲಿ ಎಂದಿಗಾದರೂ ಜ್ಞಾನವಾಗುವಂತಿದ್ದರೆ ಅಲ್ಲಿ ಜ್ಞಾನದ ಅಭಾವವನ್ನು ಅನುಭವಿಸಿದೆವೆಂದು ಹೇಳಬಹುದಾಗಿತ್ತು. ಗಡಿಗೆಯಿರಬಹುದಾದ ಕಡೆಯಲ್ಲಿ ಗಡಿಗೆಯಿಲ್ಲ ಎನ್ನುತ್ತೇವೆಯೇ ಹೊರತು ಸೂರ್ಯನ ಕಿರಣದಲ್ಲಿ ಗಡಿಗೆಯಿಲ್ಲ ಎಂದು ನಾವು ಯಾರೂ ಹೇಳುವದಿಲ್ಲ. ಆದ್ದರಿಂದ ಎಚ್ಚರದಲ್ಲಿ ನಮಗೆ ವಿಶೇಷಜ್ಞಾನವಾಗುವಂತೆ ಸುಷುಪ್ತಿಯಲ್ಲಿ ಆಗಲಿಲ್ಲ ಎಂಬುದೇ ಎಚ್ಚರದ ನೆನಪಿನ ಅಭಿಪ್ರಾಯವೆಂದಾಯಿತು.

ಅಂತೂ ಹೀಗೆ ಒಳಹೊಕ್ಕು ವಿಚಾರಮಾಡಿದರೆ ನಮ್ಮ ಆತ್ಮಕ್ಕೆ ಯಾವ ಅವಸ್ಥೆಯಲ್ಲಿಯೂ ಅಜ್ಞಾನದ ಸಂಬಂಧವಿಲ್ಲವೆಂದೇ ಆಗುವದು. ನನಗೂ ಅಜ್ಞಾನಕ್ಕೂ ಸಂಬಂಧವಿಲ್ಲ; ಅಜ್ಞಾನವನ್ನು ಕೂಡ ಬೆಳಗುತ್ತಿರುವ ಸಾಕ್ಷಿಯು ನಾನು. ಸಾಕ್ಷ್ಯದ ಸಂಬಂಧವು ಸಾಕ್ಷಿಗೆ ಹೇಗೆ ಉಂಟಾದೀತು? -ಎಂದು ವಿಚಾರಮಾಡಿ ಆತ್ಮನ ಸಾಕ್ಷಿಸ್ವರೂಪವನ್ನು ನಿಶ್ಚಯಿಸಿಕೊಂಡರೆ ಸರ್ವಾನರ್ಥಗಳೂ ತೊಲಗುವವು. 'ಅಜ್ಞಾನಕ್ಕೆ ಸಾಕ್ಷಿ'ಯಾಗಿರುವೆನೆಂಬ ಸಂಬಂಧವಾದರೂ ಇಲ್ಲವೇ?- ಎಂದು ಯಾರಾದರೂ ಆಕ್ಷೇಪವನ್ನು ಒಡ್ಡಬಹುದು. ಆ ಆಕ್ಷೇಪಕ್ಕೆ ಇಲ್ಲಿ ಅವಕಾಶವಿಲ್ಲ. ಏಕೆಂದರೆ ಜ್ಞಾನಾಜ್ಞಾನಗಳು ಎಚ್ಚರದಲ್ಲಿ ಮಾತ್ರ ತೋರುವವೆಂದೂ ಆಗಲೂ ಅಜ್ಞಾನಕ್ಕೆ ಆತ್ಮನು ಸಾಕ್ಷಿಯಾಗಿರುವನೆಂದೂ ಮೇಲೆ ತೋರಿಸಿಕೊಡಲಾಗಿದೆ. ಸುಷುಪ್ತಿಯಲ್ಲಿ ಜ್ಞಾನವಾಗಲಿ ಅಜ್ಞಾನವಾಗಲಿ ಇಲ್ಲ; ಆದ್ದರಿಂದ ಅಜ್ಞಾನದ ಸಾಕ್ಷಿತ್ವವೆಂಬುದೂ ಆತ್ಮನ ಧರ್ಮವಲ್ಲ. ಅಂತಃಕರಣಕ್ಕೆ ಸಂಬಂಧಿಸಿರುವ ಜ್ಞಾನಾಜ್ಞಾನಗಳ ಹಂಗು ಆತ್ಮನಿಗೆ ಇಲ್ಲವೇ ಇಲ್ಲ ಎಂಬುದೇ ಅಜ್ಞಾನಸಾಕ್ಷಿತ್ವ ನಿಶ್ಚಯದಿಂದ ಹೊರಡುವ ಕಟ್ಟಕಡೆಯ ಸಿದ್ಧಾಂತವು.

'ಮನಸ್ಸಿಗೆ ಸಾಕ್ಷಿಯು ನಾನು' ಎಂದು ನಿಶ್ಚಯಿಸಿಕೊಂಡದ್ದರಿಂದ

ಶೋಕಮೋಹಗಳು ಇಲ್ಲವಾಗುವವು ಎಂದು (೪೫) ಹಿಂದೆ ಹೇಳಲಾಗಿತ್ತು. ಆದರಿಂದ ಅಜ್ಞಾನದ ಕಾರ್ಯವಾದ ಮೋಹವು ಮಾತ್ರ ಆತ್ಮನಿಗೆ ಸಂಬಂಧಿಸಿಲ್ಲ ಎಂಬುದಿಷ್ಟೇ ನಿಶ್ಚಯವಾಗಿತ್ತು. ಈಗಲೊ, ಎಂದರೆ ಅಜ್ಞಾನದ ಸ್ವರೂಪವೇ ಸಾಕ್ಷಿಗೆ ಗೋಚರವಾಗಿರುತ್ತದೆ ಎಂದಾದ್ದರಿಂದ ಅಜ್ಞಾನದ ಹಂಗೇ ಇಲ್ಲ ಎಂದಾಯಿತು. ಅಜ್ಞಾನದಿಂದ ಕಾಮ, ಕಾಮದಿಂದ ಕರ್ಮ, ಕರ್ಮದಿಂದ ಫಲಭೋಗ, ಆ ಭೋಗದಿಂದ ವಿಷಯವಾಸನೆ, ಮತ್ತೆ ಆ ವಾಸನೆಯು ಎದ್ದುಕೊಂಡಾಗ ಕಾಮದಿಂದ ಕರ್ಮದಲ್ಲಿ ತೊಡಗುವದು- ಎಂಬೀ ಸರ್ವಸಂಸಾರನರ್ಥಗಳಿಗೂ ಅಜ್ಞಾನವೇ ಕಾರಣವು. ಆದ್ದರಿಂದ ಆ ಅಜ್ಞಾನದ ವಿವೇಕದಿಂದ ಸರ್ವಾನರ್ಥಗಳೂ ತೊಲಗುವವು ಎಂದಿದೆ- ಎಂದು ತಿಳಿಯಬೇಕು.

ಅಹಂ ಸಾಕ್ಷೀತಿ ಯೋ ವಿದ್ಯಾದ್ವಿವಿಚ್ಯೈವಂ ಪುನಃ ಪುನಃ ।
ಸ ಏವ ಮುಕ್ತೋಽಸೌ ವಿದ್ವಾನಿತಿ ವೇದಾನ್ತಡಿಣ್ಡಿಮಃ ॥೪೮॥

೪೮. ಹೀಗೆ ಮತ್ತೆ ಮತ್ತೆ ವಿವೇಚನೆಮಾಡಿ ನಾನು ಸಾಕ್ಷಿಯು ಎಂದು ಯಾವನು ಅರಿತುಕೊಳ್ಳುವನೋ ಅವನೇ ಮುಕ್ತನು, ಅವನೇ ಜ್ಞಾನಿಯು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಇಲ್ಲಿಯವರೆಗೆ 'ಆರನ್ನು ನಾಶಮಾಡಿಕೊಂಡು' ಎಂಬದರ ವಿವರಣೆಯಾಯಿತು. ಆದ್ದರಿಂದ ಈ ಜ್ಞಾನವನ್ನು ಇಲ್ಲಿ ಹೊಗಳಿ ಉಪಸಂಹಾರ ಮಾಡಿರುತ್ತದೆ.

ಅಹಂಪ್ರತ್ಯಯಗೋಚರನಾದವನೇ ಆತ್ಮನು ಎಂದು ಕೆಲವರೆನ್ನುವರು. ಅದು ಸರಿಯಲ್ಲ. ಏಕೆಂದರೆ ತನಿನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿ ಅಹಂಕಾರವಿರುವದಿಲ್ಲ; ಆದರ ಸಾಕ್ಷಿಯಾದ ಆತ್ಮನು ಮಾತ್ರ ಇದ್ದೇ ಇರುತ್ತಾನೆ. ಆ ಅವಸ್ಥೆಗಳಲ್ಲಿ ಸಾಕ್ಷಿರೂಪದಲ್ಲಿ ಆತ್ಮನು ಇಲ್ಲವೆಂದರೆ ಆ ಅವಸ್ಥೆಗಳ ಅನುಭವವನ್ನು 'ನನಗೆ ಆಗ ಯಾವ ಅರಿವೂ ಇರಲಿಲ್ಲ' ಎಂದು ಪರಾಮರ್ಶಿಸುವದಕ್ಕೆ ಅವಕಾಶವೇ ಇರುವದಿಲ್ಲ. ಸುಷುಪ್ತಿ, ಸಮಾಧಿ- ಮುಂತಾದ ಅವಸ್ಥೆಗಳಲ್ಲಿ ಸಾಕ್ಷಿಯ ಅನುಭವವಾಗುವದಿಲ್ಲವೆಂಬುದೇನೋ ನಿಜ, ಆದರೂ ಯಾವಾತನಿಗೆ ಆ ಅವಸ್ಥೆಗಳ ಅನುಭವವಾಗುವದೋ ಆ ಸಾಕ್ಷಿಯನ್ನು ಇಲ್ಲವೆನ್ನುವದು ಯಾರಿಂದಲೂ ಆಗಲಾರದೆಂಬುದು ಸ್ಪಷ್ಟ. ಸಾಕ್ಷಿಯ ಅನುಭವವಾಗುವದಿಲ್ಲವೆಂಬುದು ಸಾಕ್ಷಿಗೆ ಒಪ್ಪೇ ಆಗಿರುತ್ತದೆ; ಏಕೆಂದರೆ ಅನುಭವಕ್ಕೆ ವಿಷಯವಾಗಿದ್ದಿದ್ದರೆ ಅವನು ಸಾಕ್ಷಿಯೆಂಬುದೇ ಹೊಂದುತ್ತಿರಲಿಲ್ಲ .

ಆದ್ದರಿಂದ ನಾನು ದೇಹಕ್ಕೆ ಸಾಕ್ಷಿ, ಪ್ರಾಣಕ್ಕೆ ಸಾಕ್ಷಿ, ಮನಸ್ಸಿಗೆ ಸಾಕ್ಷಿ, ಬುದ್ಧಿಗೆ ಸಾಕ್ಷಿ, ಜ್ಞಾನಕ್ಕೂ ಸಾಕ್ಷಿ ಎಂದು ಹೀಗೆ ವಿವೇಚನೆ ಮಾಡಿ ಮಾಡಿ ಯಾವನು ತನ್ನ ಆತ್ಮನನ್ನು ಎಲ್ಲಾ ಅನಾತ್ಮದಿಂದಲೂ ವಿಂಗಡಿಸಿಕೊಂಡು ಅರಿಯುವನೋ ಆತನೇ ಮುಕ್ತನು, ಅವನೇ ಜ್ಞಾನಿಯು ಎಂದು ವೇದಾಂತಗಳಲ್ಲಿ ಸಾರಿರುತ್ತದೆ. ಉದಾಹರಣೆಗೆ 'ತ್ವಂ ಸ್ವಾಚ್ಛರೀರಾತ್ಪ್ರವೃಹೇನ್ಮುಞ್ಜಾದಿವೇಷೀಕಾಂ ಧೈರ್ಯೇಣ । ತಂ ವಿದ್ಯಾಚ್ಛುಕ್ರಮಮೃತ ಮಿತಿ' (ನೊಸೆಯಹುಲ್ಲಿನಿಂದ ದಂಟನ್ನು ತೆಗೆಯುವಂತೆ ಜಾಣತನದಿಂದ ಆತನನ್ನು ಶರೀರದಿಂದ ಬಿಡಿಸಿ ಹಿರಿದುಕೊಳ್ಳಬೇಕು. ಅವನು ಶುಕ್ರನು, ಅಮೃತನು ಎಂದು ತಿಳಿದುಕೊಳ್ಳಬೇಕು, ಕ. ೨-೩-೧೭) ಎಂಬ ಶ್ರುತಿಯಲ್ಲಿ ಹಾಗೆಂದು ಹೇಳಿದೆ.

**ನಾಹಂ ಮಾಯಾ ನ ತತ್ಕಾರ್ಯಂ ತತ್ಸಾಕ್ಷೀ ಪರಮೋಽಸ್ಮ್ಯಹಮ್।**
**ಇತಿ ನಿಃಸಂಶಯಜ್ಞಾನಾನ್ಮುಕ್ತಿರ್ವೇದಾನ್ತಡಿಣ್ಡಿಮಃ ॥೪೯॥**

೪೯. "ನಾನು ಮಾಯೆಯಲ್ಲ, ಅದರ ಕಾರ್ಯವೂ ಅಲ್ಲ; ಅದಕ್ಕೂ ಸಾಕ್ಷಿಯಾಗಿರುವ ಪರಮಾತ್ಮನೇ ನಾನು"- ಎಂದು ಯಾವ ಸಂದೇಹವೂ ಇಲ್ಲದಂತೆ ಅರಿತುಕೊಳ್ಳುವದರಿಂದ ಮುಕ್ತಿಯಾಗುವದು. ಹೀಗೆಂಬುದು ವೇದಾಂತಗಳ ಡಂಗುರವು.

ನಾನು ಮಾಯೆಯಲ್ಲ . ಅವಿದ್ಯೆಯಿಂದ ಕಲ್ಪಿತವಾಗಿರುವ, ಬಿಡಿಬಿಡಿಯಾಗಿ ವಿಂಗಡವಾಗದ ನಾಮರೂಪಗಳ ಬೀಜವೆಂಬ ಜಗತ್ತಿನ ಸೃಷ್ಟಿಗಿಂತ ಮೊದಲಿನ ಅವಸ್ಥೆಯೇ ಮಾಯೆ. ಅವ್ಯಾಕೃತ, ಅವ್ಯಕ್ತ , ಅಕ್ಷರ, ಆಕಾಶ , ಬ್ರಹ್ಮ , ಬೀಜ , ಶಕ್ತಿ , ಪ್ರಕೃತಿ- ಎಂಬಿವೆಲ್ಲವೂ ಮಾಯೆಯನ್ನು ಹೇಳುವ ಪರ್ಯಾಯಶಬ್ದಗಳು. ನಾನು ಮಾಯೆಯೂ ಅಲ್ಲ , ಮಾಯೆಯ ಕಾರ್ಯವಾದ ಪಂಚಭೂತಗಳೂ ಅಲ್ಲ , ಪಂಚಭೂತಗಳ ಕಾರ್ಯವಾದ ಭೌತಿಕಪದಾರ್ಥಗಳೂ ಅಲ್ಲ- ಎಂದರ್ಥ. ಆಧ್ಯಾತ್ಮಿಕವಾದ ಕಾರ್ಯಕರಣ ಸಂಘಾತವು ನಾನಲ್ಲ ಎಂದು ಈ ಹಿಂದೆಯೇ ಹೇಳಿರುವದರಿಂದ ಇಲ್ಲಿ ಮಾಯಾಕಾರ್ಯವೆಂಬ ಶಬ್ದದಿಂದ ಆಧಿಭೌತಿಕವಾದ ಪೃಥ್ವ್ಯಾದಿಗಳನ್ನೇ ಹೇಳಿದೆಯೆಂದು ತಿಳಿಯಬೇಕು.

"ನಾನು ಮಾಯೆ" ಎಂದಾಗಲಿ "ನಾನು ಮಾಯಾಕಾರ್ಯವಾದ ಪ್ರಪಂಚವು" ಎಂದಾಗಲಿ ಯಾರೂ ತಿಳಿದುಕೊಂಡಿಲ್ಲವೆಂಬುದು ನಿಜ. ಆದರೂ ಮಾಯಾಕಾರ್ಯವಾದ ಪ್ರಪಂಚದೊಳಗೆ ಸೇರಿರುವ ದನಕರು, ಹಣಕಾಸು, ಹೊಲಮನೆ-ಮುಂತಾದವು ನನಗೆ ಸಂಬಂಧಪಟ್ಟವು ಎಂದುಕೊಂಡು ಅವುಗಳ ಹಿಗ್ಗುಕುಗ್ಗುಗಳಿಂದ ತನಗೇ ಹಿಗ್ಗುಕುಗ್ಗುಗಳಾದಂತೆ ಎಂದು ಸಂಸಾರಿಗಳು

ತಿಳಿದುಕೊಂಡಿರುತ್ತಾರೆಂಬುದು ಎಲ್ಲರಿಗೂ ತಿಳಿದೇ ಇದೆ. ಆದ್ದರಿಂದ 'ನಾನು ಇವಕ್ಕೆಲ್ಲ ಸಾಕ್ಷಿ' ಎಂಬುದನ್ನು ಮನದಂದುಕೊಂಡು ಅವುಗಳಲ್ಲಿರುವ ಅಭಿಮಾನವನ್ನು ಬಿಡಬೇಕು ಎಂಬುದೇ ಇಲ್ಲಿ ಅಭಿಪ್ರಾಯ. ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ: ತನಗೆ ತೀರ ಹತ್ತಿರವಾಗಿರುವವೆಂದು ಭಾವಿಸಿಕೊಂಡಿರುವ ದೇಹೇಂದ್ರಿಯಮನೋಬುದ್ಧಿಗಳೇ ಅನಾತ್ಮವು ಎಂದು ಹೊರಕ್ಕೆ ತಳ್ಳಿ ಅದನ್ನು ಕೈಬಿಟ್ಟಮೇಲೆ ಇನ್ನೂ ದೂರವಾಗಿರುವ ಹೊಲ ಮನೆ ಹಣಕಾಸು ಮುಂತಾದವುಗಳಲ್ಲಿ ನಾನು ನನ್ನದೆಂಬ ಭಾವನೆಯು ಸರಿಯಲ್ಲವೆಂದು ಹೇಳತಕ್ಕದ್ದೇನಿದೆ?

ಹೀಗಿರುವದರಿಂದ ನಾನು ಈ ಮಾಯೆಗೆ ಸಾಕ್ಷಿಯೇ ಎಂದು ಎಳ್ಳಷ್ಟೂ ಸಂಶಯವಿಲ್ಲದಂತೆ ನಿಶ್ಚಯಿಸಿಕೊಂಡರೆ ಆ ಜ್ಞಾನದಿಂದ ಮುಕ್ತಿಯಾಗುವದು -ಎಂದು ವೇದಾಂತಗಳು ಸಾರುತ್ತಿರುವವು. 'ಕ್ಷರಂ ಪ್ರಧಾನಮಮೃತಾಕ್ಷರಂ ಹರಃ ಕ್ಷರಾತ್ಮಾನಾವೀಶತೇ ದೇವ ಏಕಃ । ತಸ್ಯಾಭಿಧ್ಯಾನಾದ್ಯೋಜನಾ ತತ್ತ್ವಭಾವಾದ್ಭೂಯಶ್ಚಾನ್ತೇ ವಿಶ್ವಮಾಯಾನಿವೃತ್ತಿಃ' (ಕ್ಷಯವೆಂದರೆ ಪ್ರಧಾನವು; ಅಮೃತವಾದ ಅಕ್ಷರವು ಎಂದರೆ ಆತ್ಮನು; ಈ ಕ್ಷರ ಮತ್ತು ಅಕ್ಷರ-ಎರಡನ್ನೂ ಆಳುತ್ತಿರುವವನು ಒಬ್ಬನೇ ದೇವನು. ಆತನನ್ನು ಧ್ಯಾನಿಸಿ, ಅವನಲ್ಲಿಯೇ ಮನಸ್ಸನ್ನು ನೆಡಿಸಿ, ಅವನೇ ತಾನಾದರೆ ಕೊನೆಗೆ ಮತ್ತೂ ಮಾಯೆಯೆಲ್ಲವೂ ತೊಲಗುವದು, ಶ್ವೇ. ೧-೧೦), 'ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ' (ಅದು ವಿದಿತವಾದ ವ್ಯಾಕೃತಪ್ರಪಂಚಕ್ಕಿಂತಲೂ ಅವಿದಿತವಾದ ಅವ್ಯಾಕೃತಪ್ರಪಂಚಕ್ಕಿಂತಲೂ ವಿಲಕ್ಷಣವಾದ ಸಾಕ್ಷಿತತ್ತ್ವವು, ಕೇ. ೧-೪) -ಮುಂತಾದ ವಾಕ್ಯಗಳು ಇದಕ್ಕೆ ಉದಾಹರಣೆ.

'ತತ್ಸಾಕ್ಷೀ' ಎಂಬುದಕ್ಕೆ ಬದಲು 'ನ ಸಾಕ್ಷೀ' ಎಂಬ ಪಾಠಾಂತರವೂ ಕೆಲವು ಪುಸ್ತಕಗಳಲ್ಲಿ ಇದೆ. ಆಗ ಹೀಗೆ ಅಭಿಪ್ರಾಯವನ್ನು ಕಲ್ಪಿಸಬೇಕು, ಸಾಕ್ಷಿಗೆ ವಿಷಯವಾಗಿರುವದೆಲ್ಲವೂ ಮಾಯಿಕವೇ ಆಗಿರುವದರಿಂದ ಆತ್ಮನು ಸಾಕ್ಷಿಯೆಂಬುದೂ ಕಡೆಯಮಾತಲ್ಲ. ಏಕೆಂದರೆ ನಾನು ಪರಮನೇ ಎಂದು ವೇದಾಂತಗಳ ಡಂಗುರವಿದೆ. 'ಅಯಮಾತ್ಮಾ ಬ್ರಹ್ಮ' (ಈ ಆತ್ಮನು ಬ್ರಹ್ಮವೇ, ಬೃ. ೨-೫-೧೯) ಎಂದಲ್ಲವೆ, ವೇದಾಂತಡಿಂಡಿಮ?

**ನಾಹಂ ಸರ್ವಮಹಂ ಸರ್ವಂ ಮಮ ಸರ್ವಮಿತಿ ಸ್ಫುಟಮ್ ।**
**ಜ್ಞಾತೇ ತತ್ತ್ವೇ ಕುತೋ ದುಃಖಮಿತಿ ವೇದಾನ್ತಡಿಣ್ಡಿಮಃ ॥೫೦॥**

೫೦. ನಾನು ಯಾವದೂ ಅಲ್ಲ, ನಾನು ಎಲ್ಲವೂ ಅಹುದು; ಎಲ್ಲವೂ

ನನ್ನದೇ- ಎಂಬ ತತ್ತ್ವವನ್ನು ಸ್ಫುಟವಾಗಿ ಅರಿತುಕೊಂಡರೆ ದುಃಖವೆಲ್ಲಿಯದು? ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಈಗ 'ಆರನ್ನು ಬಿಟ್ಟು ಬಳಿಕ ಐದನ್ನು ಭೇದಿಸಿ' (೪೨) ಎಂಬ ಎರಡನೆಯ ಶ್ಲೋಕದ ವ್ಯಾಖ್ಯಾನವನ್ನು ಆರಂಭಿಸಿರುತ್ತಾರೆ. ಇಲ್ಲಿ ಕಾಮ ಕ್ರೋಧಾದಿಗಳಿಂದಾದ ದುಃಖವನ್ನು ಹೇಗೆ ಬಿಡಿಸಿಕೊಳ್ಳಬೇಕು?- ಎಂಬುದನ್ನು ತಿಳಿಸುತ್ತಾರೆ.

ನಾನು ಯಾವದೂ ಅಲ್ಲ , ಏಕೆಂದರೆ ನಾನು ಎಲ್ಲಕ್ಕೂ ಸಾಕ್ಷಿಯು. ಸಾಕ್ಷಿಗೆ ವಿಷಯವಾಗಿರುವದು ಸಾಕ್ಷಿಯ ಧರ್ಮವಾಗಲಾರದಷ್ಟೆ? ನಾನೇ ಎಲ್ಲವು, ಏಕೆಂದರೆ ನನಗಿಂತ ಬೇರೆಯಾಗಿರುವ ಸ್ವತಂತ್ರವಸ್ತು ಯಾವದೊಂದೂ ಇಲ್ಲವೇ ಇಲ್ಲ. ಚೈತನ್ಯಸಂಬಂಧವಿಲ್ಲದ ಇರವು ಯಾವದಕ್ಕೆ ತಾನೆ ಇದೆ? ಇದನ್ನು ಅರಿತಿರುವೆನು, ಇದನ್ನು ಅರಿತಿಲ್ಲ- ಎಂದು ಹೇಗಾದರೂ ಪ್ರತಿಯೊಂದು ವಸ್ತುವೂ ಚೈತನ್ಯಕ್ಕೆ ಸಂಬದ್ಧವಾಗಿಯೇ ಇರಬೇಕಾಗಿದೆ. ಆದ್ದರಿಂದಲೇ ನನಗೆ ಎಲ್ಲವೂ ಸೇರಿದ್ದೇ ಹೊರತು ನಾನು ಯಾವದಕ್ಕೂ ಸೇರಿದವನಲ್ಲ. ಯಾವನಿಗೆ ಯಾವದು ಅಧೀನ ವಾಗಿರುತ್ತದೆಯೋ ಅದು ಅವನದು ಎನ್ನುತ್ತಾರೆ. ಉದಾಹರಣೆಗೆ ಅರಸನ ಆಳು, ಶೆಟ್ಟಿಯ ಹಸು ಎಂದು ಮುಖ್ಯಾರ್ಥವಾದ ವ್ಯವಹಾರವಿದೆಯೇ ಹೊರತು ಆಳಿನ ಅರಸು, ಹಸುವಿನ ಶೆಟ್ಟಿ- ಎಂದು ಮುಖ್ಯಾರ್ಥದಲ್ಲಿ ಪ್ರಯೋಗವಿರುವದಿಲ್ಲ. ಎಲ್ಲವೂ ನನ್ನ ಚೈತನ್ಯಕ್ಕೆ ಅಧೀನವಾಗಿರುತ್ತದೆ, ಆದ್ದರಿಂದ ಎಲ್ಲವೂ ನನ್ನದೇ.

ಹೀಗೆಂಬ ತತ್ತ್ವವನ್ನು ಅರಿತುಕೊಂಡರೆ ದುಃಖವೆಲ್ಲಿಯದು? ಬೇಕಾದದ್ದು ಸಿಕ್ಕದೆ ಇದ್ದರೇ, ಬೇಡವಾದದ್ದು ಬಂದೊದಗಿದರೇ ಅಲ್ಲವೆ, ದುಃಖವಾಗುವದು? ಹೀಗಿರುವದರಿಂದ ನಾನು ಎಲ್ಲಕ್ಕೂ ಸಾಕ್ಷಿಯು, ಎಲ್ಲವೂ ನನ್ನ ಅಧೀನದಲ್ಲಿರತಕ್ಕದ್ದು- ಎಂದು ಅರಿತುಕೊಂಡವನು ಏತಕ್ಕೆ ತಾನೆ ದುಃಖಿಸುವನು?

ಹೀಗೆಂದು ವೇದಾಂತಗಳಲ್ಲಿ ಸಾರಿಯೂ ಇದೆ. 'ಸರ್ವಂ ತಂ ಪರಾದಾದ್ಯೋಽನ್ಯತ್ರಾತ್ಮನಃ ಸರ್ವಂ ವೇದೇದಂ ಬ್ರಹ್ಮೇದಂ ಕ್ಷತ್ರಮಿಮೇ ಲೋಕಾ ಇಮೇ ದೇವಾ ಇಮಾನಿ ಭೂತಾನೀದಗ್ಂ ಸರ್ವಂ ಯದಯಮಾತ್ಮಾ' (ತನಗಿಂತ ಎಲ್ಲವೂ ಬೇರೆಯಾಗಿದೆ ಎಂದು ಯಾವನು ಅರಿತಿರುವನೋ ಅವನನ್ನು ಎಲ್ಲವೂ ನಿರಾಕರಿಸುವದು; ಈ ಬ್ರಾಹ್ಮಣಜಾತಿಯು, ಈ ಕ್ಷತ್ರಿಯಜಾತಿ, ಈ ಲೋಕಗಳು, ಈ ದೇವತೆಗಳು, ಈ ಪ್ರಾಣಿಗಳು- ಇದೆಲ್ಲವೂ ಈ ಆತ್ಮನೆಂಬುದೇ; ಬೃ. ೨-೪-೬),

'ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ । ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ' (ಯಾವನಾದರೆ ಎಲ್ಲಾ ಭೂತಗಳನ್ನೂ ತನ್ನ ಆತ್ಮನಲ್ಲಿಯೇ ಕಂಡುಕೊಳ್ಳುವನೋ, ಸರ್ವಭೂತಗಳಲ್ಲಿಯೂ ತನ್ನ ಆತ್ಮನನ್ನೇ ಕಂಡುಕೊಳ್ಳುವನೋ, ಅವನು ಅದರಿಂದ ಏನನ್ನೂ ನಿಂದಿಸದೆ ಇರುವವನು, ಈ. ೬) -ಎಂಬಿವು ಇದಕ್ಕೆ ಉದಾಹರಣೆ.

**ದೇಹಾದಿಪಞ್ಚಕೋಶಸ್ಥಾ ಯಾ ಸತ್ತಾ ಪ್ರತಿಭಾಸತೇ ।**
**ಸಾ ಸತ್ತಾऽऽತ್ಮಾ ನ ಸಂದೇಹ ಇತಿ ವೇದಾನ್ತಡಿಣ್ಡಿಮಃ ॥೫೧॥**

೫೧. ದೇಹವೇ ಮುಂತಾದ ಐದು ಕೋಶಗಳಲ್ಲಿ ಯಾವ ಸತ್ತೆಯು (ಇರವು) ತೋರುತ್ತಲಿರುವದೋ ಆ ಸತ್ತೆಯು ಆತ್ಮನೇ, ಸಂದೇಹವಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಇನ್ನು ಪಂಚಕೋಶಗಳ, ಮತ್ತು ಪಂಚಭೂತಗಳ ವಿವೇಚನೆಯನ್ನು ಮಾಡಿ ಆತ್ಮತತ್ತ್ವವನ್ನು ಗೊತ್ತುಪಡಿಸುವ ಬಗೆಯನ್ನು ತಿಳಿಸುವದಕ್ಕೆ ಹೊರಟಿರುತ್ತಾರೆ. 'ಐದನ್ನು ಭೇದಿಸಿ' (೪೨) ಎಂಬುದರ ವಿವರಣೆಯಿದು.

ದೇಹಾದಿಗಳು ಎಂದರೆ ದೇಹ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ -ಇವು; ದೇಹಾದಿಗಳೆಂಬ ಪಂಚಕೋಶಗಳನ್ನು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ ಹೆಸರಿನಿಂದ ಶ್ರುತಿಯಲ್ಲಿ ಕರೆದಿರುತ್ತದೆ. ಕತ್ತಿಯನ್ನು ಒರೆಯು ಮುಚ್ಚಿಕೊಂಡಿರುವಂತೆ, ಆತ್ಮತತ್ತ್ವವನ್ನು ಮುಚ್ಚಿಕೊಂಡಿರುವದರಿಂದ ಇವನ್ನು "ಕೋಶ"ಗಳು ಎಂದು ಕರೆಯುತ್ತಾರೆ. ಆ ಕೋಶಗಳಿಗೆ ಸೇರಿಕೊಂಡಿರುವಂತೆ ಯಾವ ಇರವು ಕಾಣುತ್ತಿರುವದೋ- ಇದು ದೇಹವು, ಇದು ಪ್ರಾಣವು ಎಂದು ಮುಂತಾಗಿ ಅರಿಯುವಾಗ ಅವುಗಳು "ಇರುವವು" ಎಂದೇ ಅಲ್ಲವೆ, ನಮಗೆ ತೋರುತ್ತಿರುವದು?- ಆ ಇರವು ಆತ್ಮನೇ. ಈ ವಿಷಯದಲ್ಲಿ ಸಂದೇಹವಿಲ್ಲ.

ಇಲ್ಲಿ ಸಂಶಯಕ್ಕೆ ಕಾರಣವಾದರೂ ಏನು?- ಎಂದು ಓದುಗರು ಕೇಳಬಹುದು. ತಾರ್ಕಿಕರು ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ- ಎಂಬ ಆರು ಭಾವಪದಾರ್ಥಗಳನ್ನು ಒಪ್ಪಿರುತ್ತಾರೆ. ಅವುಗಳೊಳಗೆ ದ್ರವ್ಯ, ಗುಣ, ಕರ್ಮ- ಈ ಮೂರು ಪದಾರ್ಥಗಳಲ್ಲಿಯೂ ಅನುಸರಿಸಿಕೊಂಡು ಕಾಣುವ ಇರವು ಎಂಬ

ಪರಸಾಮಾನ್ಯವೇ ಸತ್ತಾಜಾತಿಯು ಎಂದು ಅವರ ಮತ. ಪ್ರಾಭಾಕರರಾದರೋ ವಸ್ತುವಿನ ಆಕಾರದಿಂದ ತೋರಿ ಬರುವ ಸಾಮಾನ್ಯವು ದ್ರವ್ಯದಲ್ಲಿ ಮಾತ್ರ ಇರುವದೇ ಹೊರತು ಗುಣಕರ್ಮಗಳಲ್ಲಿಯೂ ಇರವು ಎಂಬ ಸಾಮಾನ್ಯವಿದೆ ಎಂಬುದಕ್ಕೆ ಪ್ರಮಾಣವಿಲ್ಲ ಎನ್ನುತ್ತಾರೆ. ಆದರೆ ವೇದಾಂತಸಿದ್ಧಾಂತದಂತೆ ನೋಡಿದರೆ ಸತ್ತಾಸಾಮಾನ್ಯವೆಂಬುದೊಂದು ಇದೆ ಎಂಬುದಕ್ಕೆ ಪ್ರಮಾಣವಿಲ್ಲ. ಏಕೆಂದರೆ ಎಲ್ಲವೂ ಆತ್ಮ ಚೈತನ್ಯಕ್ಕೆ ವಿಷಯವಾಗಿಯೇ ತೋರಿಕೊಳ್ಳುತ್ತಿರುತ್ತದೆ; ಆದ್ದರಿಂದ ಚೈತನ್ಯದ ಇರವಿಗಿಂತ ಬೇರೆಯಾಗಿ ಮತ್ತೊಂದು ಸತ್ತೆಯನ್ನು (ಇರವನ್ನು) ಅಂಗೀಕರಿಸುವ ಕಾರಣವಿರುವದಿಲ್ಲ.

ಇಲ್ಲೊಂದು ಆಕ್ಷೇಪ; 'ಇದೊಂದು ದ್ರವ್ಯವು' ಎನ್ನುವಾಗ ಅದರಲ್ಲಿ ಇರವೂ ತೋರುತ್ತಿರುತ್ತದೆ. ಹೀಗೆಯೇ ಗುಣಕರ್ಮಗಳಲ್ಲಿಯೂ ಇರವು ಸೇರಿಕೊಂಡೇ ಇರುತ್ತದೆ. ಆದ್ದರಿಂದ ಪ್ರತೀತಿಗೆ ಅನುಸಾರವಾಗಿ ವಿಷಯದಲ್ಲಿಯೂ ಯಾವದೋ ಒಂದು ಬಗೆಯ-ಆತ್ಮಸತ್ತೆಗಿಂತಲೂ ಬೇರೆಯಾದ- ಸತ್ತಾಜಾತಿಯನ್ನು ಒಪ್ಪಬೇಕಲ್ಲವೆ?

ಇದಕ್ಕೆ ಪರಿಹಾರವೇನೆಂದರೆ: ಹೀಗೆ ಇನೊಂದು ಸತ್ತೆಯನ್ನು ಒಪ್ಪಬೇಕೆಂದರೆ, 'ಇದು ನೀರು' ಎಂದು ಬಿಸಿಲುಕುದುರೆಯಲ್ಲಿ ತೋರುವ ನೀರಿಗೂ 'ಇದು ಬೆಳ್ಳಿ' ಎಂದು ತೋರುವ ಶುಕ್ತಿರಜತಕ್ಕೂ ಒಂದಾನೊಂದು ಬೇರೆಯ ಸತ್ತೆಯನ್ನು ಒಪ್ಪಬೇಕಾಗಿಬರುವದು; ಏಕೆಂದರೆ ನೀರು, ಬೆಳ್ಳಿ-ಮುಂತಾದವುಗಳು ಇವೆ ಎಂದೇ ತೋರುತ್ತವೆ. ಆದರೂ ವಿಚಾರಮಾಡಿದಾಗ ಮರುಭೂಮಿಗಿಂತ ಬೇರೆಯಾಗಿ ನೀರಿರಲಿಲ್ಲ, ಕಪ್ಪೆಯಚಿಪ್ಪಿಗಿಂತ ಬೆಳ್ಳಿಯಿರಲಿಲ್ಲ- ಎಂದೇ ನಿಶ್ಚಯವಾಗುವದರಿಂದ ಮರುಭೂಮಿಯ ಮತ್ತು ಕಪ್ಪೆಯಚಿಪ್ಪಿನ ಇರವೇ ಅವುಗಳಲ್ಲಿಯೂ ತೋರಿತೇ ಹೊರತು ಅಲ್ಲಿ ಬೇರೊಂದು ಸತ್ತೆ (ಇರವು) ಇರಲಿಲ್ಲ- ಎಂದೇ ವ್ಯವಹಾರದಲ್ಲಿ ನಿಶ್ಚಯಿಸುತ್ತಾರೆ. ಅಲ್ಲವೆ? ಇದರಂತೆ ಆತ್ಮನು ಸದ್ರೂಪನಾಗಿಯೇ ಇರುತ್ತಾನೆ ; ಆತ್ಮನ ಸಂಬಂಧದಿಂದಲೇ ಮಿಕ್ಕದ್ದೆಲ್ಲವೂ ತೋರುತ್ತಿದೆ. ಆದ್ದರಿಂದ ಆತ್ಮನ ಸತ್ತೆಯೇ ಅವುಗಳಲ್ಲಿ ತೋರುತ್ತಿದೆ, ಅವಕ್ಕೆ ಬೇರೊಂದು ಸತ್ತೆಯಿಲ್ಲ ಎಂದು ನಿಶ್ಚಯಿಸುವದೇ ಯುಕ್ತ. ಇಲ್ಲಿ ಬೆಂಕಿಯ ಬಿಸಿ ಎಂಬಂತೆ 'ಆತ್ಮನ ಸತ್ತೆ' ಎಂಬ ವ್ಯವಹಾರದಲ್ಲಿ ಎರಡು ಪದಾರ್ಥಗಳು ಇರುವಂತೆ ತೋರುತ್ತವೆಯಾದರೂ ನಿಜವಾಗಿ ಬೆಂಕಿಗಿಂತ ಬೇರೆಯಾದ ಬಿಸಿ ಹೇಗೆ ಇರುವದೇ ಇಲ್ಲವೋ ಅದರಂತೆಯೇ ಆತ್ಮನೇ ಸತ್ತೆ. ಆತ್ಮನಿಗಿಂತ ಬೇರೆಯಾಗಿ ಸತ್ತೆಯೆಂಬುದೇ ಇಲ್ಲ- ಎಂದು ನಿಶ್ಚಯಿಸುವದೇ ಯುಕ್ತವಾಗಿರುತದೆ.

ಆದ್ದರಿಂದ ಪಂಚಕೋಶಗಳಲ್ಲಿ ಕಾಣಬರುವ ಸತ್ತೆ ಎಂದರೆ ಆತ್ಮನೇ ಎಂಬ ವಿಷಯಕ್ಕೆ ಯಾವ ಸಂದೇಹವೂ ಇರುವದಿಲ್ಲ. 'ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ' (ಅಪ್ಪ, ಈ ಪ್ರಜೆಗಳೆಲ್ಲವೂ ಸನ್ಮೂಲವಾಗಿರುತ್ತವೆ, ಸತ್ತಿನಲ್ಲಿಯೇ ನೆಲೆನಿಂತಿವೆ, ಸತ್ತನ್ನು ಕುರಿತೇ ಹೋಗುತ್ತವೆ, ಛಾಂ. ೬-೮-೪) ಎಂದು ತಾನೆ ವೇದಾಂತದ ಡಂಗುರವಿದೆ?

**ದೇಹಾದಿಪಞ್ಚಕೋಶಸ್ಥಾ ಯಾ ಸ್ಫೂರ್ತಿರನುಭೂಯತೇ ।**
**ಸಾ ಸ್ಫೂರ್ತಿರಾತ್ಮಾ ನೈವಾನ್ಯದಿತಿ ವೇದಾನ್ತಡಿಣ್ಡಿಮಃ ॥೫೨॥**

೫೨. ದೇಹವೇ ಮುಂತಾದ ಐದು ಕೋಶಗಳಲ್ಲಿ ಯಾವ ತೋರಿಕೆಯು ಅನುಭವಕ್ಕೆ ಬರುತ್ತಿರುವದೋ ಆ ತೋರಿಕೆಯು ಆತ್ಮನೇ, ಮತ್ತೊಂದಲ್ಲ, ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಹೀಗೆಯೇ ದೇಹಾದಿಗಳಲ್ಲಿರುವ ತೋರಿಕೆಯು ಆತ್ಮನೇ. ಏಕೆಂದರೆ ಆತ್ಮಚೈತನ್ಯವು ಯಾವಾಗಲೂ ಬೆಳಗುತ್ತಲೇ ಇರುತ್ತದೆ. ಎಚ್ಚರದಲ್ಲಿ ತೋರುವ ದೇಹಾದಿಗಳೂ ಕನಸಿನಲ್ಲಿ ತೋರುವ ದೇಹಾದ್ಯಾಭಾಸಗಳೂ ಆ ಚೈತನ್ಯಕ್ಕೆ ವಿಷಯವಾಗಿಯೇ ತೋರುತ್ತಿರುತ್ತವೆಯಾದ್ದರಿಂದ ಅವು ಆತ್ಮ ಚೈತನ್ಯದ ಬೆಳಕಿಗಿಂತ ಬೇರೊಂದು ತೋರಿಕೆಯುಳ್ಳವು ಎನ್ನುವದಕ್ಕೆ ಬರುವದಿಲ್ಲ. ಇದನ್ನು ಅರಿಯುತ್ತಿದ್ದೇನೆ, ಎಂಬ ಜ್ಞಾನದ ತೋರಿಕೆಗಿಂತ ಬೇರೆಯಾಗಿರುವ ವಿಷಯದ ತೋರಿಕೆಯು ಯಾರೊಬ್ಬರ ಅನುಭವದಲ್ಲಿಯೂ ಇರುವದಿಲ್ಲ.

ಹೀಗೆಂದು ವೇದಾಂತಗಳು ಸಾರುತ್ತಿವೆ: 'ಆತ್ಮೈವಾಸ್ಯ ಜ್ಯೋತಿಃ'' (ಈ ಪುರುಷನಿಗೆ ಆತ್ಮನೇ ಬೆಳಕು, ಬೃ. ೪-೩-೬), 'ತಮೇವ ಭಾನ್ತಮನುಭಾತಿ ಸರ್ವಮ್' (ಬೆಳಗುತ್ತಿರುವ ಆ ಆತ್ಮನನ್ನು ಅನುಸರಿಸಿಕೊಂಡೇ ಎಲ್ಲವೂ ಬೆಳಗುತ್ತಿರುವದು, ಮುಂ. ೨-೨-೧೧)- ಇವೇ ಮುಂತಾದವು ಉದಾಹರಣೆ.

**ದೇಹಾದಿಪಞ್ಚಕೋಶಸ್ಥಾ ಯಾ ಪ್ರೀತಿರನುಭೂಯತೇ ।**
**ಸಾ ಪ್ರೀತಿರಾತ್ಮಾ ಕೂಟಸ್ಥ ಇತಿ ವೇದಾನ್ತಡಿಣ್ಡಿಮಃ ॥೫೩॥**

೫೩. ದೇಹವೇ ಮುಂತಾದ ಐದು ಕೋಶಗಳಲ್ಲಿ ಯಾವ ಪ್ರೀತಿಯು ಅನುಭವಕ್ಕೆ ಬರುತ್ತಿರುವದೋ ಆ ಪ್ರೀತಿಯು ಕೂಟಸ್ಥನಾದ ಆತ್ಮನೇ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ದೇಹಾದಿಗಳಲ್ಲಿ ನಮಗೆ ಪ್ರೇಮವಿದೆ, ಅವುಗಳಲ್ಲಿ ಸುಖವಿದೆ ಎಂದು ನಮಗೆ ತೋರುತ್ತಿರುತ್ತದೆಯಷ್ಟೆ? ಆ ಸುಖವೂ ನಿಜವಾಗಿ ಆತ್ಮನೇ. ದೇಹಾದಿಗಳು ನಾನು ಎಂದು ಆತ್ಮಬುದ್ಧಿಯನ್ನು ಅವುಗಳಲ್ಲಿ ಆರೋಪಿಸಿಕೊಳ್ಳುತ್ತಿರುವದರಿಂದಲೇ ನಮಗೆ ದೇಹಾದಿಗಳು ಸುಖಾಶ್ರಯವೆಂಬ ಭಾವನೆಯುಂಟಾಗಿ ಅವುಗಳಲ್ಲಿ ಪ್ರೇಮವುಂಟಾಗಿರುತ್ತದೆ. ನಾನು ಎಂಬ ಭ್ರಾಂತಿಬುದ್ಧಿಯಿಲ್ಲದಿರುವಾಗ, ಹುಣ್ಣಿನಿಂದ ಕೊಳೆಯುತ್ತಿರುವ ದೇಹಭಾಗದಲ್ಲಿ, ನಮಗೆ ಪ್ರೇಮವಿರುವದಿಲ್ಲ. ಅದನ್ನು ಕತರಿಸಿಹಾಕಿದರೂ ನಮಗೆ ಸಂತೋಷವೇ ಆಗುತದೆ. ಆದ್ದರಿಂದಲೇ 'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ' (ತನ್ನ ಕಾಮಕ್ಕಾಗಿಯೇ ಎಲ್ಲವೂ ಪ್ರಿಯವಾಗಿರುತ್ತದೆ, ಬೃ. ೨-೪-೫) ಎಂದೂ 'ರಸೋ ವೈ ಸಃ । ರಸಂ ಹ್ಯೇವಾಯಂ ಲಬ್ಧ್ವಾಽಽನನ್ದೀ ಭವತಿ ॥' (ಆತನು ರಸವೇ; ರಸವನ್ನು ಪಡೆದವನಲ್ಲವೆ, ಆನಂದಿಯಾಗಿರುತ್ತಾನೆ? ತೈ. ೨-೭) ಎಂದು ಶ್ರುತಿಗಳು ಸಾರುತ್ತಿರುವವು.

ಇಲ್ಲೊಂದು ಶಂಕೆಯುಂಟಾಗಬಹುದು; ದೇಹಾದಿಗಳಲ್ಲಿರುವ ಸುಖವು ಹೆಚ್ಚುಕಡಿಮೆಯಾಗುವದೆಂಬ ತಾರತಮ್ಯವುಳ್ಳದ್ದು, ಅದು ಅನಿತ್ಯವೂ ಆಗಿರುತ್ತದೆ. ಹೀಗಿರುವಲ್ಲಿ ಅದು ನಿತ್ಯವಾದ ಆತ್ಮನು ಹೇಗಾದೀತು?

ಈ ಶಂಕೆಗೆ ಪರಿಹಾರವಿದು; ಗಳಿಸಿದ ಪುಣ್ಯದ ಫಲವಾಗಿ ಅಂತಃಕರಣವು ನಿರ್ಮಲವಾದಷ್ಟೂ ಪ್ರಸನ್ನವಾಗುತ್ತ ಆ ತಿಳಿಯಾದ ಅಂತಃಕರಣದಲ್ಲಿ ಆತ್ಮನ ಆನಂದವು ಅಷ್ಟಷ್ಟು ಮಟ್ಟಿಗೆ ಹೊರತೋರಿಕೊಳ್ಳುತ್ತಿರುತ್ತದೆ. ಆಯಾ ಗ್ಯತೆಗೆ ಅನುಗುಣವಾಗಿ ಆ ಆನಂದವು ಹೆಚ್ಚೋ ಕಡಿಮೆಯೋ ಆಗಿ ತೋರುವದು ಸ್ವಾಭಾವಿಕವಾಗಿರುತ್ತದೆ. ಆ ವೃತ್ತಿಯು ಅನಿತ್ಯವಾಗಿರುವದರಿಂದ ಆನಂದವೂ ಅನಿತ್ಯವಾಗಿರುವಂತೆ ತೋರುವದೂ ಸ್ವಾಭಾವಿಕವಾಗಿರುತ್ತದೆ. ಆದರೆ ಹೀಗೆ ವೃತ್ತಿಯಲ್ಲಿ ಹೊರತೋರುವ ಆನಂದದ ಪ್ರತಿಬಿಂಬವು ತಾರತಮ್ಯವುಳ್ಳದ್ದೂ ಅನಿತ್ಯವೂ ಆಗಿರುತ್ತಿದ್ದರೂ ಬಿಂಬದಂತಿರುವ ಆತ್ಮಾನಂದದಲ್ಲಿ ಯಾವ ತಾರತಮ್ಯವೂ ಇರುವದಿಲ್ಲ; ಅದರಲ್ಲಿ ಅನಿತ್ಯತ್ವವೂ ಇರುವದಿಲ್ಲ, ಏಕೆಂದರೆ ಆತ್ಮನು ಕಾಲಸಾಕ್ಷಿಯಾಗಿರುವದರಿಂದ ಕಾಲಾತೀತನಾಗಿರುತ್ತಾನೆ. ಅವನು **ಕೂಟಸ್ಥನು.** ಕೂಟವೆಂದರೆ ಬೆಟ್ಟವೇ ಮುಂತಾದ ರಾಶಿಯು; ಅದರಂತೆ ಅಚಲನಾಗಿ ನಿರ್ವಿಕಾರನಾಗಿರುತ್ತಾನೆ ಎಂದು ತಿಳಿಸುವದಕ್ಕೆ ಆತ್ಮನಿಗೆ **ಕೂಟಸ್ಥನು** ಎಂದು ವಿಶೇಷಣವನ್ನು ವೇದಾಂತಿಗಳು ಕೊಟ್ಟಿರುತ್ತಾರೆ.

ಅಂತೂ ವಿಷಯಾನಂದರೂಪವಾಗಿ ಎಲ್ಲರ ಪ್ರೇಮಕ್ಕೂ

ಆಸ್ಪದವಾಗಿರುವದೆಂಬುದು ನಿಜವಾಗಿ ನೋಡಿದಾಗ ಆತ್ಮಸ್ವರೂಪವಾದ ಕೂಟಸ್ಥವಾದ ಆನಂದವೇ ಎಂದು ಸಿದ್ಧವಾಯಿತು. "ನ ತತ್ರಾನನ್ದಾ ಮುದಃ ಪ್ರಮುದೋ ಭವನ್ತ್ಯಥಾನನ್ದಾನ್ ಮುದಃ ಪ್ರಮುದಃ ಸೃಜತೇ" (ಅಲ್ಲಿ ಆನಂದಗಳಿರುವದಿಲ್ಲ, ಮೋದಗಳಿರುವದಿಲ್ಲ , ಪ್ರಮೋದಗಳಿರುವುದಿಲ್ಲ; ಆದರೂ ಆನಂದಗಳನ್ನೂ ಮೋದಗಳನ್ನು ಪ್ರಮೋದಗಳನ್ನೂ ಹುಟ್ಟಿಸಿಕೊಳ್ಳುತ್ತಾನೆ, ಬೃ. ೪-೩-೧೦) ಎಂಬ ಶ್ರುತಿಡಿಂಡಿಮದಲ್ಲಿ ಆತ್ಮನೇ ವಿಷಯಾನಂದಗಳನ್ನು ಸೃಷ್ಟಿಸುವನೆಂದು ಸಾರಿರುವದರಿಂದಲೂ 'ಏಷೋಽಸ್ಯ ಪರಮ ಆನನ್ದಃ' (ಈ ಜೀವನಿಗೆ ಇದೇ ಪರಮಾನಂದವು, ಬೃ. ೪-೩-೩೨) ಎಂದು ಸುಷುಪ್ತಿಯಲ್ಲಿ ಕೂಟಸ್ಥಾನಂದ ಸ್ವರೂಪವು ಅನುಭವಕ್ಕೆ ಬರುತ್ತಿರುವದರಿಂದಲೂ ಎಲ್ಲಾ ಆನಂದವೂ ಆತ್ಮನೇ ಎಂದು ಏರ್ಪಡುತ್ತದೆ.

**ವ್ಯೋಮಾದಿಪಞ್ಚ ಭೂತಸ್ಥಾ ಯಾ ಸತ್ತಾ ಭಾಸತೇಽನ್ಯಶಾಮ್ ।**
**ಸಾ ಸತ್ತಾ ಪರಮಂ ಬ್ರಹ್ಮ ಇತಿ ವೇದಾನ್ತಡಿಣ್ಡಿಮಃ ॥೫೪॥**

**ವ್ಯೋಮಾದಿಪಞ್ಚ ಭೂತಸ್ಥಾ ಯಾ ಚಿದೇಕಾನುಭೂಯತೇ ।**
**ಸಾ ಚಿದೇವ ಪರಂ ಬ್ರಹ್ಮ ನಾನ್ಯದ್ವೇದಾನ್ತಡಿಣ್ಡಿಮಃ ॥೫೫॥**

**ವ್ಯೋಮಾದಿಪಞ್ಚ ಭೂತಸ್ಥಾ ಯಾ ಪ್ರೀತಿರನುಭೂಯತೇ ।**
**ಸಾ ಪ್ರೀತಿರೇವ ಬ್ರಹ್ಮ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೫೬॥**

೫೪-೫೬. ಆಕಾಶವೇ ಮುಂತಾದ ಐದು ಭೂತಗಳಲ್ಲಿ ಯಾವ ಸತ್ತೆಯು ತೋರುತ್ತಿರುವದೋ ಆ ಸತ್ತೆಯು ಪರಬ್ರಹ್ಮವೇ- ಹೀಗೆಂಬುದು ವೇದಾಂತಗಳ ಡಂಗುರವು. ಆಕಾಶವೇ ಮುಂತಾದ ಐದು ಭೂತಗಳಲ್ಲಿ ಯಾವ ಜ್ಞಾನವೊಂದೇ ಜನರಿಗೆ ಅನುಭವಕ್ಕೆ ಬರುತ್ತಿರುವದೋ ಆ ಜ್ಞಾನವೇ ಪರಬ್ರಹ್ಮವು, ಮತ್ತೊಂದಲ್ಲ. ಹೀಗೆಂಬುದು ವೇದಾಂತಗಳ ಡಂಗುರವು. ಆಕಾಶವೇ ಮುಂತಾದ ಐದು ಭೂತಗಳಲ್ಲಿ ಯಾವ ಪ್ರೀತಿಯು ಅನುಭವಕ್ಕೆ ಬರುತ್ತಿರುವದೋ ಆ ಪ್ರೇಮವೇ ಬ್ರಹ್ಮವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಇಲ್ಲಿಯವರೆಗೆ ಕಾರ್ಯರೂಪವಾದ ಪಂಚಕೋಶಗಳಲ್ಲಿ ಇರುವಂತೆ ತೋರುತ್ತಿರುವ ಸಚ್ಚಿದಾನಂದತ್ವವು ಆತ್ಮನದೇ ಎಂಬುದನ್ನು ತಿಳಿಸಿದ್ದಾಯಿತು. ಈಗ

ಕಾರಣರೂಪವಾಗಿರುವ ಪಂಚಭೂತಗಳಲ್ಲಿ ತೋರುತ್ತಿರುವ ಆ ಸಚ್ಚಿದಾನಂದತ್ವವೂ ಆತ್ಮನದೇ ಎಂಬುದನ್ನು ಈ ಮೂರು ಶ್ಲೋಕಗಳಿಂದ ತಿಳಿಸಿಕೊಟ್ಟಿರುತ್ತಾರೆ.

ಹೇಗೆ ಅಧ್ಯಾತ್ಮವಾಗಿರುವ ದೇಹಾದಿಪಂಚಕೋಶಗಳ ಸತ್ತಾಸ್ಫೂರ್ತಿಪ್ರೀತಿಗಳೆಂಬ ಮೂರೂ ಆತ್ಮನೇ, ಬೇರೆಯಲ್ಲ- ಎಂದಾಯಿತೋ ಹಾಗೆಯೇ ಅಧಿಭೂತವಾಗಿರುವ ಆಕಾಶ, ವಾಯು, ತೇಜಸ್ಸು , ಅಪ್ಪು , ಪೃಥಿವಿ - ಎಂಬೀ ಐದು ಭೂತಗಳಲ್ಲಿರುವ ಈ ಮೂರೂ ಆತ್ಮನದೇ. ಆಕಾಶಾದಿಗಳಿಗೆ ಕಾರಣವಾಗಿರುವ ಬ್ರಹ್ಮವೆಂದರೆ ಈ ನಮ್ಮ ಆತ್ಮನೇ ಆಗಿರುತ್ತಾನೆ.

ಹೀಗಿರುವದರಿಂದಲೇ ಬ್ರಹ್ಮವೇ ಎಲ್ಲವೂ, ಈ ಆತ್ಮನೇ ಬ್ರಹ್ಮವೂ- ಎಂದು ಹೇಳಿರುವ ಪ್ರಕರಣದಲ್ಲಿ ಮಾಂಡೂಕ್ಯಶ್ರುತಿಯಲ್ಲಿ 'ಜಾಗರಿತಸ್ಥಾನೋ ಬಹಿಷ್ಪ್ರಜ್ಞಃ ಸಪ್ತಾಙ್ಗ ಏಕೋನವಿಂಶತಿಮುಖಃ ಸ್ಥೂಲಭುಗ್ವೈಶ್ವಾನರಃ ಪ್ರಥಮಃ ಪಾದಃ' (ಎಚ್ಚರವೆಂಬ ಸ್ಥಾನದಲ್ಲಿರುವವನೂ ಬಹಿಷ್ಪ್ರಜ್ಞನೂ ಸಪ್ತಾಂಗನೂ ಹತ್ತೊಂಬತ್ತು ದ್ವಾರಗಳುಳ್ಳವನೂ ಸ್ಥೂಲಭೋಕ್ತೃವೂ ಆಗಿರುವ ವೈಶ್ವಾನರನು ಮೊದಲನೆಯ ಪಾದವು, ಮಾಂ. ೩) ಎಂದು ಎಚ್ಚರದವಸ್ಥೆಯ ಆತ್ಮನೇ ದ್ಯುಲೋಕಾದಿಯಾದ ಲಿಂಗಗಳುಳ್ಳ ವೈಶ್ವಾನರನೆಂದು ಅವರಿಬ್ಬರಿಗೂ ಏಕತ್ವವನ್ನು ಹೇಳಿರುತ್ತದೆ. ತೈತ್ತಿರೀಯ ಶ್ರುತಿಯಲ್ಲಿ 'ತಸ್ಮಾದ್ವಾ ಏತಸ್ಮಾದಾತ್ಮನಃ ಆಕಾಶಃ ಸಂಭೂತಃ (ಆ ಈ ಬ್ರಹ್ಮವೆಂಬ ಆತ್ಮನಿಂದ ಆಕಾಶವುಂಟಾಯಿತು, ತೈ. ೨-೧) ಎಂದು ಆಕಾಶಾದಿ ಕಾರಣವಾಗಿರುವ ಬ್ರಹ್ಮವೇ ಆತ್ಮನೆಂದು ಹೇಳಿರುತ್ತದೆ. ಆದ್ದರಿಂದಲೇ 'ಯಶ್ಚಾಯಮಸ್ಯಾಂ ಪೃಥಿವ್ಯಾಂ ತೇಜೋಮಯೋಽಮೃತಮಯಃ ಪುರುಷೋ ಯಶ್ಚಾಯಮಧ್ಯಾತ್ಮಂ ಶಾರೀರಸ್ತೇಜೋಮಯೋಽಮೃತಮಯಃ ಪುರುಷೋಽಯಮೇವ ಸ ಯೋಽಯಮಾತ್ಮೇದಮಮೃತಮಿದಂ ಬ್ರಹ್ಮೇದಂ ಸರ್ವಮ್' (ಈ ಪೃಥಿವಿಯಲ್ಲಿರುವ ತೇಜೋಮಯನೂ ಅಮೃತಮಯನೂ ಆದ ಪುರುಷನೂ, ಅಧ್ಯಾತ್ಮವಾಗಿರುವ ಈ ಶರೀರದಲ್ಲಿರುವ ತೇಜೋಮಯನೂ ಅಮೃತಮಯನೂ, ಆಗಿರುವ ಪುರುಷನೂ- ಇವನೇ ಆ ಈ ಆತ್ಮನು, ಇದೇ ಅಮೃತವು, ಇದೇ ಬ್ರಹ್ಮವು, ಇದೇ ಸರ್ವವು, ಬೃ. ೨-೫-೧) ಎಂಬಿದೇ ಮುಂತಾದ ಶ್ರುತಿಡಿಂಡಿಮಗಳಲ್ಲಿ ಪೃಥಿವ್ಯಾದಿಗಳಲ್ಲಿಯೂ ಶರೀರದಲ್ಲಿಯೂ ಇರುವ ಆತ್ಮನು ಒಬ್ಬನೇ; ಅವನೇ ಇದೆಲ್ಲವೂ ಆಗಿರುತ್ತಾನೆಂದು ಸಾರಿರುತ್ತದೆ.

ದೇಹಾದಿಕೋಶಗಾ ಸತ್ತಾ ಯಾ ಸಾ ವ್ಯೋಮಾದಿಭೂತಗಾ ।
ಮಾನಾಭಾವಾನ್ನ ತದ್ಭೇದ ಇತಿ ವೇದಾನ್ತಡಿಣ್ಡಿಮಃ ॥೫೭॥

ದೇಹಾದಿಕೋಶಗಾ ಸ್ಫೂರ್ತಿರ್ಯಾ ಸಾ ವ್ಯೋಮಾದಿಭೂತಗಾ ।
ಮಾನಾಭಾವನ್ನ ತದ್ಭೇದ ಇತಿ ವೇದಾನ್ತಡಿಣ್ಡಿಮಃ ॥೫೮॥

**ದೇಹಾದಿಕೋಶಗಾ ಪ್ರೀತಿರ್ಯಾ ಸಾ ವ್ಯೋಮಾದಿಭೂತಗಾ ।**
**ಮಾನಾಭಾವಾನ್ನ ತದ್ಭೇದ ಇತಿ ವೇದಾನ್ತಡಿಣ್ಡಿಮಃ ॥೫೯॥**

೫೭-೫೯. ದೇಹವೇ ಮುಂತಾದ ಕೋಶಗಳಲ್ಲಿ ಯಾವ ಸತ್ತೆಯಿರುವದೋ ಆಕಾಶಾದಿಭೂತಗಳಲ್ಲಿಯೂ ಅದೇ ಸತ್ತೆ; ಅವೆರಡೂ ಬೇರೆಬೇರೆ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಹೀಗೆಂಬುದು ವೇದಾಂತಗಳ ಡಂಗುರವು. ದೇಹವೇ ಮುಂತಾದ ಕೋಶಗಳಲ್ಲಿ ಯಾವ ತೋರಿಕೆಯಿರುವದೋ ಅದೇ ಆಕಾಶವೇ ಮುಂತಾದ ಭೂತಗಳಲ್ಲಿರುವ ತೋರಿಕೆಯು; ಅವೆರಡೂ ಬೇರೆಬೇರೆ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಹೀಗೆಂಬುದು ವೇದಾಂತಗಳ ಡಂಗುರವು. ದೇಹವೇ ಮುಂತಾದ ಕೋಶಗಳಲ್ಲಿ ಯಾವ ಪ್ರೀತಿಯಿರುವದೋ ಅದೇ ಆಕಾಶವೇ ಮುಂತಾದ ಭೂತಗಳಲ್ಲಿರುವ ಪ್ರೀತಿಯು. ಅವೆರಡೂ ಬೇರೇಬೇರೆ ಎನ್ನುವದಕ್ಕೆ ಯಾವ ಪ್ರಮಾಣವೂ ಇಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಇಲ್ಲಿ ದೇಹಾದಿಕೋಶಗಳಲ್ಲಿರುವ ಸತ್ತಾಸ್ಫೂರ್ತ್ಯಾದಿಗಳು ನಿಜವಾಗಿ ಆತ್ಮನೇ ಎಂದು ಒಂದು ಸಲ ನಿರ್ಣಯಿಸಿದಮೇಲೂ ಆಕಾಶಾದಿಗಳಲ್ಲಿರುವ ಸತ್ತಾದಿಗಳೂ ಆತ್ಮನೇ ಎಂದು ಮತ್ತೆ ವಿಚಾರಮಾಡಿ ತಿಳಿಸಿದ್ದರಿಂದ ದೇಹಾದಿಕೋಶಗಳಲ್ಲಿ ಬೇರೆ ಸತ್ತಾದಿಗಳಿವೆಯೆಂದೂ ಆಕಾಶಾದಿಗಳಲ್ಲಿ ಬೇರೆ ಸತ್ತಾದಿಗಳಿವೆಯೆಂದೂ ಯಾರಾದರೂ ಶಂಕಿಸಿಯಾರೆಂದು ಆ ಶಂಕೆಯನ್ನು ಪರಿಹರಿಸಿರುತ್ತದೆ.

ದೇಹಾದಿಗಳಿಗಿಂತ ಬೇರೆಯಾಗಿರುವ ಹೊರಗಿನ ವಸ್ತುವು ಅನಾತ್ಮವೆಂಬುದು ಸ್ಫುಟವಾಗಿಯೇ ಇರುತ್ತದೆ; ಹಾಗೆಯೇ ಸಾಕ್ಷಿಯು ಆತ್ಮನೆಂಬುದೂ ಸ್ಫುಟವಾಗಿಯೇ ಇರುತ್ತದೆ. ಆದರೆ ಇವೆರಡರ ನಡುವೆಯಿರುವ ದೇಹಾದಿಕೋಶಗಳು ಕೆಲವು ವೇಳೆಗಳಲ್ಲಿ ನಾನು ಎಂದೂ ತೋರುತ್ತವೆ, ಕೆಲವು ವೇಳೆಗಳಲ್ಲಿ ಇದು ಎಂದೂ ತೋರುತ್ತಿರುತ್ತವೆ ; ಆದ್ದರಿಂದ ಅವುಗಳು ಆತ್ಮನೊ, ಅನಾತ್ಮವೊ ಎಂಬ ವಿಷಯದಲ್ಲಿ ಸಂಶಯವುಂಟಾಗಬಹುದಾಗಿದೆ. ಇಲ್ಲಿ ನಿರ್ಣಯವೇನೆಂದರೆ ಆಕಾಶಾದಿಗಳು ಇದು ಎಂದು ತೋರುತ್ತಿರುವದರಿಂದ ಹೇಗೆ ಅನಾತ್ಮವೋ ಹಾಗೆಯೇ ದೇಹಾದಿಗಳೂ ತೋರುತ್ತಿರುವದರಿಂದ ಅವೂ ಅನಾತ್ಮವೇ. ಹೇಗೆ ಆಕಾಶಾದಿಗಳಲ್ಲಿ ಬೇರೊಂದು ಸತ್ತೆಯಿರುವಂತೆ ವಿಚಾರದಶೆಯಲ್ಲಿ ತೋರುತ್ತಿರುವದೋ, ಆದರೂ ಆ ತೋರಿಕೆಯು

ಎಚ್ಚರದವಸ್ಥೆಗೆ ಮಾತ್ರ ಕಟ್ಟುಬಿದ್ದಿದ್ದು ಸ್ವಪ್ನದಲ್ಲಿಯೂ ಸುಷುಪ್ತಿಯಲ್ಲಿಯೂ ಇಲ್ಲದಿರುವದರಿಂದ ನಿಜವಾಗಿ ಅದಕ್ಕೆ ಬೇರೆಯ ಇರವು ಇಲ್ಲವೆಂದೇ ವಿಚಾರದ ಕೊನೆಯಲ್ಲಿ ನಿಶ್ಚಯವಾಗುವದೋ ಹಾಗೆಯೇ ದೇಹಾದಿಕೋಶಗಳಿಗೂ ಬೇರೆಯ ಇರವು ಇಲ್ಲವೆಂದು ಇದೇ ಯುಕ್ತಿಯಿಂದಲೇ ನಿಶ್ಚಯಿಸಬೇಕು.

ಇಲ್ಲಿ ಒಂದು ಪ್ರಶ್ನೆ. ದೇಹಾದಿಗಳಲ್ಲಿಯೂ ಆಕಾಶಾದಿಗಳಲ್ಲಿಯೂ ಇರುವಂತೆ ತೋರುವ ಸತ್ತೆ ಯಾವದು? ಅವುಗಳಲ್ಲಿ ನಿಜವಾಗಿ ಸತ್ತೆಯಿಲ್ಲದಿದ್ದರೆ ಇರುವಂತೆ ಏಕೆ ತೋರುತ್ತದೆ? ಈ ಪ್ರಶ್ನೆಗೆ ಉತ್ತರವೇನೆಂದರೆ ದೇಹಾದಿಗಳಾಗಲಿ ಆಕಾಶಾದಿಗಳಾಗಲಿ ಆತ್ಮನ ಸಂಬಂಧವಿಲ್ಲದೆ ತೋರುವದೇ ಇಲ್ಲ. ಕನ್ನಡಿಯಲ್ಲಿ ತೋರುವ ಮುಖದ ಪ್ರತಿಬಿಂಬವು ಹೇಗೆ ನಿಯಮದಿಂದ ಮುಖವನ್ನವಲಂಬಿಸಿಕೊಂಡೇ ತೋರುತ್ತಿರು-ವದೋ ಹಾಗೆಯೇ ಅವೂ ಆತ್ಮನನ್ನವಲಂಬಿಸಿಕೊಂಡೇ ತೋರುತ್ತಿರುವವು. ಕನ್ನಡಿಯಿಲ್ಲದಾಗ ಪ್ರತಿಬಿಂಬವೂ ತೋರದೆ ಇರುವಂತೆ ಎಚ್ಚರದ ಅಥವಾ ಕನಸಿನ ಮನಸ್ಸು ಇಲ್ಲದಾಗ- ಉದಾಹರಣೆಗೆ ತನಿನಿದ್ರೆಯಲ್ಲಿ- ಅವೂ ತೋರುವದೇ ಇಲ್ಲ. ಆದ್ದರಿಂದ ಅವುಗಳು ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆಯೇ ಮನಸ್ಸೆಂಬ ಉಪಾಧಿಯಿಂದ ತೋರುವ ಭ್ರಾಂತಿಮಾತ್ರವೆಂದೇ ನಿಸ್ಚಯಿಸಬೇಕು.

ಇನ್ನು ಆತ್ಮನಲ್ಲಿ ಒಂದು ಸತ್ತೆ, ಅನಾತ್ಮವಾದ ದೇಹಾದಿಗಳಲ್ಲಿ ಒಂದು ಸತ್ತೆ- ಎಂದು ತೋರುವಿಕೆಗೆ ಅನುಸಾರವಾಗಿ ಎರಡು ಬೇರೆಬೇರೆಯ ಸತ್ತೆಗಳನ್ನೇ ಏಕೆ ಒಪ್ಪಬಾರದು?- ಎಂಬ ಆಕ್ಷೇಪವೊಂದು ತಲೆ ಎತ್ತಿಕೊಳ್ಳಬಹುದಷ್ಟೆ? ಅದಕ್ಕೆ ಪರಿಹಾರವಿದು: ಈ ಎರಡು ಸತ್ತೆಗಳಿಗೂ ಭೇದವಿದೆಯೊ, ಇಲ್ಲವೊ?- ಎಂದು ಆಕ್ಷೇಪಕನನ್ನು ಕೇಳಬೇಕು. ಇದೆಯೆಂದರೆ ಅದಕ್ಕೂ ಒಂದು ಸತ್ತೆಯನ್ನು ಒಪ್ಪಿದಂತೆ ಆಗುವದು; ಆಗ ಎರಡು ಸತ್ತೆಗಳ ಬದಲು ಮೂರು ಸತ್ತೆಗಳನ್ನೇ ಆಕ್ಷೇಪಕನು ಒಪ್ಪಿದಂತೆ ಆಗುವದು. ಅದೂ ಆಗಲಿ!- ಎಂದು ಅವನು ಹಠದಿಂದ ನುಡಿದರೆ ಈ ಮೂರು ಸತ್ತೆಗಳಿಗೂ ಪರಸ್ಪರ ಭೇದವು ಇರುವದೊ ಇಲ್ಲವೊ? ಇವುಗಳನ್ನು ಎರಡೆರಡಾಗಿ ತೆಗೆದುಕೊಂಡರೆ ಅವುಗಳಿಗೆ ಭೇದವು ಇರುವದೊ, ಇಲ್ಲವೊ? ಎಂದು ಕೇಳಬೇಕು. ಇದೆಯೆಂದರೆ ಈ ಮೂರಕ್ಕೂ ಒಂದು ಭೇದವಿದೆಯೆಂದರೆ ನಾಲ್ಕು ಸತ್ತೆಗಳನ್ನು ಒಪ್ಪಬೇಕಾಗುವದು. ಎರಡೆರಡಕ್ಕೂ ಬೇರೆಬೇರೆ ಭೇದವು ಇದೆ ಎಂದರೆ ಆಗ ಒಂದನೆಯದಕ್ಕೂ ಎರಡನೆಯದಕ್ಕೂ ಭೇದ, ಎರಡನೆಯದಕ್ಕೂ ಮೂರನೆಯದಕ್ಕೂ ಭೇದ, ಮೂರನೆಯದಕ್ಕೂ ಒಂದನೆಯದಕ್ಕೂ ಭೇದ ಎಂದು- ಮೂರು ಬೇರೆಯ ಸತ್ತೆಗಳನ್ನು ಕಲ್ಪಿಸಿದಂತೆ ಆಗುವದು; ಆಗಲಂತೂ ಆರು ಸತ್ತೆಗಳಾಗುವವು. ಹೀಗೆ ಯುಕ್ತಿಯನ್ನು ಮುಂದುವರಿಸಿದಂತೆ ಅಪ್ರಾಮಾಣಿಕವಾದ

ಅನಂತಭೇದಗಳನ್ನೂ ಸತ್ತೆಗಳನ್ನೂ ಕಲ್ಪಿಸಬೇಕಾಗಿ ಬರುವದರಿಂದ ಆಕ್ಷೇಪಕನ ವಾದಕ್ಕೆ ಅನವಸ್ಥಾದೋಷವು ಗಂಟುಬೀಳುವದು. ಈ ದೋಷವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಆತ್ಮಾನಾತ್ಮಸತ್ತೆಗಳೆರಡಕ್ಕೂ ಭೇದವಿಲ್ಲ ಎಂದು ಆ ವಾದಿಯು ಹೇಳಿದರೆ ಎರಡು ಸತ್ತೆ-ಗಳನ್ನು ಒಪ್ಪುವದೇ ತಪ್ಪೆಂದಾಗುವದು. ಆದ್ದರಿಂದ ಅವನ ಆಕ್ಷೇಪಣೆಯು ಸರಿಯಲ್ಲ.

ಇಲ್ಲಿ ಇನ್ನೊಂದು ಬಗೆಯಿಂದಲೂ ಈ ಆಕ್ಷೇಪಕ್ಕೆ ಪರಿಹಾರವನ್ನು ಹೇಳಬಹುದಾಗುವದು. ಯಾವದಕ್ಕೆ ಸತ್ತೆಯು ಮತ್ತೊಂದರ ಅವಲಂಬನೆಯಿಂದಲೇ ತೋರುವದೋ ಅದು - ಕನ್ನಡಿಯಲ್ಲಿ ತೋರುವ ಪ್ರತಿಬಿಂಬದಂತೆ ಸತ್ತಾರಹಿತ ಎಂಬುದೇ ಯುಕ್ತ. ಇಲ್ಲಿ ಅನಾತ್ಮಕ್ಕೆ ಯಾವಾಗಲೂ ನಿರಪೇಕ್ಷವಾದ ಸತ್ತೆಯು ಕಂಡಿಲ್ಲ; ಆತ್ಮನ ಜೊತೆಯಲ್ಲಿಯೇ ಇದ್ದುಕೊಂಡು ಅದು ಬಾಳಬೇಕಾಗಿದೆ. ಆದರೆ ಸತ್ತೆಯಲ್ಲಿ ಮತ್ತೆ ಯಾವದೊಂದು ಬಗೆಯ ವಿಶೇಷವೂ ಇಲ್ಲವಾದ್ದರಿಂದ ಅದು ಬೇರೊಂದು ಸತ್ತೆಯೆಂದು ತಿಳಿಯುವದಕ್ಕೂ ಅವಕಾಶವಿಲ್ಲ. ಆದ್ದರಿಂದ ದೇಹಾದಿಗಳು ಆತ್ಮನಿಗಿಂತ ಬೇರೆ ಎಂದಾಗಲಿ ಆತ್ಮನೇ ಎಂದಾಗಲಿ ಗೊತುಪಡಿಸಿ ಹೇಳಲಿಕ್ಕಾಗದ ಅನಿರ್ವಚನೀಯವಾದ ತೋರಿಕೆಯೆಂದೇ ನಿಶ್ಚಯಿಸಬೇಕು.

ಹಾಗಾದರೆ ಆತ್ಮ, ಅನಾತ್ಮ - ಇವೆರಡೂ ಜೊತೆಯಲ್ಲಿಯೇ ಇದ್ದುಕೊಂಡಿರುವದರಿಂದ ಆತ್ಮನಿಗೇ ಇಂಥ ಅನಿರ್ವಚನೀಯತ್ವವನ್ನು ಏತಕ್ಕೆ ಹೇಳಬಾರದು?- ಎಂದು ಶಂಕಿಸುವದಕ್ಕಿಲ್ಲ. ಏಕೆಂದರೆ ಸುಷುಪ್ತಿಯಲ್ಲಿ ಅನಾತ್ಮದ ಹಂಗಿಲ್ಲದೆ ಆತ್ಮನೊಬ್ಬನೇ ಉಳಿದುಕೊಂಡಿರುವದು ಎಲ್ಲರ ಅನುಭವದಲ್ಲಿಯೂ ಇದೆ. ಸಮಾಧಿಯಲ್ಲಿಯೂ ಆತ್ಮನೊಬ್ಬನೇ ಇರುವಂತೆ ಮಾಡಿಕೊಳ್ಳಬಹುದೆಂದು ಅನುಭವಿಗಳು ಹೇಳುತ್ತಾರೆ. ಆದ್ದರಿಂದ ದೇಹಾದಿಗಳಲ್ಲಿರುವ ಸತ್ತೆಯು ಆತ್ಮನೇ ಎಂಬುದು ನಿರ್ವಿವಾದವಾಗಿ ಸಿದ್ಧವಾಯಿತು. ದೇಹಾದಿಗಳಿಗೂ ಆಕಾಶಾದಿಗಳಿಗೂ ಬೇರೆಬೇರೆಯ ಸತ್ತೆಯಿದೆ ಎಂಬುದಕ್ಕೆ ಪ್ರಮಾಣವಿಲ್ಲದಿರುವದರಿಂದಲೂ ಆತ್ಮನೊಬ್ಬನೇ ಸತ್ಸ್ವರೂಪದಿಂದ ಇರುವನೆಂಬುದು ಅನುಭವದಲ್ಲಿರುವದರಿಂದಲೂ ಅವೆರಡರ ಸತ್ತೆಯೂ ಒಂದೇ, ಅದು ಆತ್ಮಸ್ವರೂಪವೇ ಎಂದಾಯಿತು.

ಇಲ್ಲಿ ಕೊಟ್ಟಿರುವ ಕೊನೆಯ ಎರಡು ಶ್ಲೋಕಗಳು ಇಲ್ಲದ ಪಾಠವೂ ಕೆಲವು ಪುಸ್ತಕಗಳಲ್ಲಿ ಕಂಡು ಬರುತ್ತದೆ. ಆಗ 'ಮಾನಾಭಾವಾನ್ನ ತದ್ಭೇದಃ' (ಪ್ರಮಾಣವಿಲ್ಲದ್ದರಿಂದ ಆ ಎರಡು ಸತ್ತೆಗಳಿಗೆ ಯಾವ ಭೇದವೂ ಇಲ್ಲ) ಎಂಬ ಸತ್ತಾವಿಷಯವಾಕ್ಯವನ್ನು ಉಪಲಕ್ಷಣವಾಗಿ ತೆಗೆದುಕೊಂಡು ಸ್ಫೂರ್ತಿಪ್ರೀತಿಗಳಿಗೂ ಹೊಂದಿಸಿಕೊಳ್ಳಬೇಕು.

ಸಚ್ಚಿದಾನನ್ದರೂಪತ್ವಾದ್ಬ್ರಹ್ಮೈವಾತ್ಮಾ ನ ಸಂಶಯಃ ।
ಶ್ರುತಿಪ್ರಮಾನುಸಂಧಾನಾದಿತಿ ವೇದಾನ್ತಡಿಣ್ಡಿಮಃ ॥೬೦॥

೬೦. ಆತ್ಮನು ಸಚ್ಚಿದಾನಂದರೂಪನಾಗಿರುವದರಿಂದ ಬ್ರಹ್ಮವೇ, ಸಂಶಯವಿಲ್ಲ; ಶ್ರುತಿಯಿಂದಾಗುವ ಯಥಾರ್ಥಜ್ಞಾನವನ್ನು ಮನದಂದರೆ (ಈ ಅರ್ಥವು ಗೊತ್ತಾಗುವದು). ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

'ಇದನ್ನು ಭೇದಿಸಿ' (೪೨) ಎಂಬುದನ್ನು ವಿವರಿಸಿ ಹೇಳಿದ್ದಾಯಿತು. ಮುಂದೆ ಇರುವ 'ನಾಲ್ಕನ್ನೂ ಮೂರನ್ನೂ ಹೊಂದಿ' (೪೨) ಎಂಬುದಕ್ಕೆ ವ್ಯಾಖ್ಯಾನವೇನೂ ಬೇಕಿರುವದಿಲ್ಲ; ಏಕೆಂದರೆ ವಿವೇಕವೈರಾಗ್ಯಾದಿಗಳನ್ನೂ ಶ್ರವಣಾದಿಗಳನ್ನೂ ಮೊದಲೇ ವರ್ಣಿಸಿದ್ದಾಗಿದೆ. ಆದ್ದರಿಂದ 'ಎರಡನ್ನು ತೊಲಗಿಸಿಕೊಂಡು' (೪೨) ಎಂಬುದರ ವ್ಯಾಖ್ಯಾನವನ್ನು ಈಗ ಪ್ರಾರಂಭಿಸಲಾಗಿದೆ.

ಆತ್ಮನು ಬ್ರಹ್ಮವೇ; ಏಕೆಂದರೆ ಅವನು ಸಚ್ಚಿದಾನಂದರೂಪನಾಗಿರುತ್ತಾನೆ. ಬ್ರಹ್ಮವು ಸಚ್ಚಿದಾನಂದರೂಪವೆಂಬುದು 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ಸತ್ಯವೂ ಜ್ಞಾನವೂ ಅನಂತವೂ ಆದದ್ದು ಬ್ರಹ್ಮವು, ತೈ. ೨-೧), 'ವಿಜ್ಞಾನಮಾನನ್ದಂ ಬ್ರಹ್ಮ' (ವಿಜ್ಞಾನವೂ ಆನಂದವೂ ಆದದ್ದು ಬ್ರಹ್ಮವು, ಬೃ. ೩-೯-೨೮) ಮುಂತಾದ ಶ್ರುತಿಗಳಿಂದ ಗೊತ್ತಾಗಿರುತ್ತದೆ. ಆತ್ಮನೂ ಸಚ್ಚಿದನಂದಸ್ವರೂಪನೇ ಎಂಬುದನ್ನು ಆಯಾ ಶ್ರುತಿಗಳಿಂದಲೂ ಈವರೆಗೆ ನಿಶ್ಚಯಿಸಿದ್ದಾಗಿದೆ. ಆದ್ದರಿಂದ ಆತ್ಮನು ಬ್ರಹ್ಮವೇ. ಈ ವಿಷಯದಲ್ಲಿ ಸಂಶಯಪಡಲಾಗದು.

ಆತ್ಮನು ಬ್ರಹ್ಮವೆಂಬುದೂ ಶ್ರುತಿಯಿಂದುಂಟಾಗುವ ಪ್ರಮೆಯನ್ನು ಮನದಂದುಕೊಳ್ಳುವದರಿಂದ ಗೊತ್ತಾಗುತ್ತದೆ. ಪ್ರಮೆ ಎಂದರೆ ಮತ್ತೊಂದು ಪ್ರಮಾಣದಿಂದ ಅರಿಯುವದಕ್ಕೆ ಆಗದೆ ಇದ್ದ ಅಬಾಧಿತಾರ್ಥವಿಷಯಕವಾದ ಜ್ಞಾನವು. ಬ್ರಹ್ಮ, ಆತ್ಮ- ಇಬ್ಬರೂ ಒಂದೇ ಎಂಬುದು ಶ್ರುತಿಯಿಂದಲ್ಲದೆ ಮತ್ತೇತರಿಂದಲೂ ತಿಳಿಯಬಂದಿಲ್ಲ; ಈ ಅರ್ಥಕ್ಕೆ ಬಾಧೆಯೂ ಇಲ್ಲ. ಏಕೆಂದರೆ ಅದ್ವೈತದಲ್ಲಿ ಬಾಧಕವಾದ ಮತ್ತೊಂದು ಇರುವ ಸಂಭವವೇ ಇಲ್ಲ. ವೇದಾಂತದ ಅರ್ಥವನ್ನು ಶ್ರವಣಮನನನಿದಿಧ್ಯಾಸಗಳಿಂದ ಅರಿತುಕೊಂಡರೆ ಈ ಅಭಿಪ್ರಾಯವು ಸ್ಫುಟವಾಗುತ್ತದೆ. ಹೀಗೆಂದು ''ತತ್ತ್ವಮಸಿ'' (ಆ ಸದ್ಬ್ರಹ್ಮವೇ ನೀನಾಗಿರುವೆ, ಛಾಂ. ೬-೮-೭), 'ಅಹಂ ಬ್ರಹ್ಮಾಸ್ಮಿ' (ನಾನು ಬ್ರಹ್ಮವಾಗಿರುವೆನು, ಬೃ. ೧-೪-೧೦), 'ಅಯಮಾತ್ಮಾ ಬ್ರಹ್ಮ' (ಈ ಆತ್ಮನು ಬ್ರಹ್ಮವು, ಮಾ.೨) ಮುಂತಾದ ವೇದಾಂತಗಳು ಸಾರುತ್ತಿವೆ.

ನ ಜೀವಬ್ರಹ್ಮಣೋರ್ಭೇದಃ ಸತ್ತಾರೂಪೇಣ ವಿದ್ಯತೇ ।
ಸತ್ತಾಭೇದೇ ನ ಮಾನಂ ಸ್ಯಾದಿತಿ ವೇದಾನ್ತಡಿಣ್ಡಿಮ ॥೬೧॥

ನ ಜೀವಬ್ರಹ್ಮಣೋರ್ಭೇದಃ ಸ್ಫೂರ್ತಿರೂಪೇಣ ವಿದ್ಯತೇ ।
ಸ್ಫೂರ್ತಿಭೇದೇ ನ ಮಾನಂ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೬೨॥

ನ ಜೀವಬ್ರಹ್ಮಣೋರ್ಭೇದಃ ಪ್ರಿಯರೂಪೇಣ ವಿದ್ಯತೇ ।
ಪ್ರಿಯಭೇದೇ ನ ಮಾನಂ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೬೩॥

೬೧-೬೩. ಜೀವನಿಗೂ ಬ್ರಹ್ಮಕ್ಕೂ ಸತ್ತೆಯ ರೂಪದಿಂದ ಭೇದವಿಲ್ಲ; ಏಕೆಂದರೆ ಸತ್ತೆಯು ಬೇರೆಬೇರೆಯಿರುವದೆಂಬುದಕ್ಕೆ ಪ್ರಮಾಣವಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು. ಜೀವನಿಗೂ ಬ್ರಹ್ಮಕ್ಕೂ ತೋರಿಕೆಯಿಂದ ಭೇದವಿಲ್ಲ; ಏಕೆಂದರೆ ತೋರಿಕೆಯು ಬೇರೆಬೇರೆಯಿರುವದೆಂಬುದಕ್ಕೆ ಪ್ರಮಾಣವಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು. ಜೀವನಿಗೂ ಬ್ರಹ್ಮಕ್ಕೂ ಪ್ರಿಯವಾಗಿರುವದೆಂಬ ರೂಪದಿಂದ ಭೇದವಿಲ್ಲ; ಏಕೆಂದರೆ ಪ್ರಿಯವಾಗಿರುವದು ಬೇರೆಬೇರೆ ಎಂಬುದಕ್ಕೆ ಪ್ರಮಾಣವಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಜೀವಪರಮಾತ್ಮನಿಗೆ ಸತ್ತಾರೂಪದಿಂದ ಭೇದವಿಲ್ಲ. ಏಕೆಂದರೆ ಎರಡೂ ಸತ್ತೇ ಆಗಿರುವಲ್ಲಿ ಭೇದಕ್ಕೆ ಕಾರಣವಿರುವದಿಲ್ಲ. ಸತ್ತಿಗಿಂತ ಬೇರೆಯಾದದ್ದು ಅಸತ್ತೇ ಆಗಿರುತ್ತದೆ. ಹೀಗೆಯೇ ಚಿತ್ತಿಗಿಂತ ಬೇರೆಯೆಂದು ಕಲ್ಪಿಸಬಹುದಾದ ಚಿತ್ತಿನಲ್ಲಿ ವಿಶೇಷವನ್ನು ತೋರಿಸುವದಕ್ಕೆ ಬರುವದಿಲ್ಲ; ಚಿತ್ತಿಗಿಂತ ಬೇರೆಯಾದದ್ದು ಜಡವೇ ಆಗಿರಬೇಕಾಗಿರುತ್ತದೆ. ಚಿತ್ತೆಂಬ ದ್ರವ್ಯಕ್ಕೆ ಗುಣವೂ ಇದೆಯೆಂದೂ ಗುಣದ ಹೆಚ್ಚುಕಡಿಮೆಗಳಿಂದ ಚಿದ್ದ್ರವ್ಯದಲ್ಲಿಯೂ ಭೇದವಿರಬಹುದೆಂದೂ ಕಲ್ಪಿಸುವದು ಸರಿಯಲ್ಲ. ಏಕೆಂದರೆ ದ್ರವ್ಯ, ಗುಣ, ಹೆಚ್ಚು, ಕಡಿಮೆ- ಮುಂತಾದ ವಿಕಲ್ಪಗಳು ಜಡವಸ್ತುವಿನಲ್ಲಿರುವದು ಕಂಡಿದೆಯೇ ಹೊರತು ಚಿತ್ತಿನಲ್ಲಿ ಕಂಡಿಲ್ಲ; ಯಾವದು ಕಾಣುತ್ತದೆಯೋ ಅದು ಚಿತ್ತಿಗಿಂತ ಬೇರೆಯೇ ಆಗಿರಬೇಕಾದ್ದರಿಂದ ಅದು ಅಚಿತ್ತೇ ಆಗುವದು. ಚಿತ್ತನ್ನೇ ವಸ್ತುಗಳಲ್ಲಿ ತೋರಿಕೆ ಎಂದು ಕರೆಯುತ್ತಿರುವೆವಾದ್ದರಿಂದ ತೋರಿಕೆಯಲ್ಲಿಯೂ ಯಾವ ಭೇದವೂ ಇಲ್ಲ. ಹೀಗೆಯೇ ಪ್ರಿಯವಾಗಿರುವದು

ಸುಖವಾಗಿರಬೇಕಾದ್ದರಿಂದಲೂ ಆತ್ಮನಿಗಿಂತ ಬೇರೆಯಾದದ್ದು ಯಾವದೂ ಇನ್ನಿಲ್ಲವೆಂಬಷ್ಟು ಪ್ರಿಯವಾಗಿರಲಾರದಾದ್ದರಿಂದಲೂ ಆತ್ಮನೇ ಆನಂದಸ್ವರೂಪನು. ಬ್ರಹ್ಮವು ಆತ್ಮನೇ ಎಂದು ಶ್ರುತಿಗಳಲ್ಲಿ ಸಾರಿರುವದರಿಂದ ಜೀವಪರಮಾತ್ಮರುಗಳಿಗೆ ಆನಂದರೂಪದಿಂದಲೂ ಭೇದವಿರುವದಿಲ್ಲ. ಅಂತೂ ಹೀಗೆ ಜೀವಬ್ರಹ್ಮಗಳೆರಡೂ ಸಚ್ಚಿದಾನಂದಸ್ವರೂಪವೇ ಆಗಿರುವದರಿಂದ ಅವೆರಡಕ್ಕೂ ಈ ವಿಷಯದಲ್ಲಿ ಯಾವ ಭೇದವೂ ಇಲ್ಲವೆಂದು ಸಿದ್ಧವಾಯಿತು.

**ನ ಜೀವಬ್ರಹ್ಮಣೋರ್ಭೇದೋ ನಾಮ್ನಾ ರೂಪೇಣ ವಿದ್ಯತೇ ।**
**ನಾಮ್ನೋ ರೂಪಸ್ಯ ಮಿಥ್ಯಾತ್ವಾದಿತಿ ವೇದಾನ್ತಡಿಣ್ಡಿಮಃ ॥೬೪॥**

೬೪. ಜೀವನಿಗೂ ಬ್ರಹ್ಮಕ್ಕೂ ನಾಮದಿಂದಲಾಗಲಿ ರೂಪದಿಂದಲಾಗಲಿ ಭೇದವಿಲ್ಲ. ಏಕೆಂದರೆ ನಾಮವೂ ರೂಪವೂ ಮಿಥ್ಯೆಯಾಗಿರುವವು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಜೀವಬ್ರಹ್ಮಗಳಿಗೆ ಸಚ್ಚಿದಾನಂದರೂಪದಿಂದ ಭೇದವಿಲ್ಲದೆ ಇದ್ದರೂ ನಾಮರೂಪಗಳಿಂದ ಭೇದವು ಇರಬಹುದಲ್ಲ! ನಾಮದಿಂದ ನೋಡಿದರೆ ಒಬ್ಬನು ಜೀವನು, ವಾಗಾದಿಪ್ರಾಣಗಳನ್ನು ಧರಿಸಿರುವವನು; ಇನ್ನೊಬ್ಬನೊ, ಈಶ್ವರನು, ಎಲ್ಲಾ ಭೂತಗಳನ್ನೂ ಆಳುವ ಸ್ವಭಾವವುಳ್ಳವನು. ರೂಪದಿಂದ ನೋಡಿದರೆ ಒಬ್ಬನು ಕರ್ತೃ, ಭೋಕ್ತೃ, ಸಂಸಾರದಲ್ಲಿ ತೊಳಲುತ್ತಿರುವವನು; ಇನ್ನೊಬ್ಬನೊ, ನಿತ್ಯಮುಕ್ತನು, ಯಾವ ದೋಷಗಳ ಕಲಂಕವೂ ಇಲ್ಲದವನು, ಆದಿತ್ಯಮಂಡಲವೇ ಮುಂತಾದ ಸ್ಥಾನಗಳಲ್ಲಿ ಥಳಥಳಿಸುವ ಹಿರಣ್ಯವರ್ಣದಿಂದ ಬೆಳಗುತ್ತಿರುವ ರೂಪದವನೆಂದು ಶ್ರುತ್ಯುಕ್ತನಾಗಿರುವವನು. ಹೀಗಿರುವಲ್ಲಿ ಇವರಿಬ್ಬರಿಗೂ ಯಾವ ಭೇದವೂ ಇಲ್ಲವೆಂಬುದು ಹೇಗೆ?

ಈ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳಿದೆ : ನಾಮವೂ ರೂಪವೂ ಮಿಥ್ಯೆಯಾಗಿವೆ, ಅವಿದ್ಯೆಯಿಂದ ಕಲ್ಪಿತವಾಗಿರುವ ಬರಿಯ ತೋರಿಕೆಯಾಗಿವೆ. ಆದ್ದರಿಂದ ನಾಮರೂಪಗಳಿಂದ ಇಬ್ಬರಿಗೂ ಭೇದವಿದೆ ಎಂಬುದು ಸಲ್ಲದು. ಆದ್ದರಿಂದಲೇ ಶ್ರುತಿಡಿಂಡಿಮವು ಹೀಗೆನ್ನುತ್ತಿದೆ: 'ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ ॥' (ಈ ಪುರುಷನಲ್ಲಿರುವನಲ್ಲ ಇವನೂ, ಆ ಆದಿತ್ಯನಲ್ಲಿರುವನಲ್ಲ ಅವನೂ, ಒಬ್ಬನೇ, ತೈ. ೨-೮), 'ಸ ಯೋ ಹ ವೈ ತದಚ್ಛಾಯಮಶರೀರಮಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಃ ಸರ್ವೋ ಭವತಿ' (ಅಪ್ರ,

ಯಾವನಾದರೆ ಆ ನೆರಳಿಲ್ಲದ, ಶರೀರವಿಲ್ಲದ, ಕೆಂಪಿಲ್ಲದ, ಶುಭ್ರವಾದ, ಅಕ್ಷರವನ್ನು ಅರಿತುಕೊಳ್ಳುತ್ತಾನೋ ಅವನು ಸರ್ವಜ್ಞನೂ ಸರ್ವನೂ ಆಗುತ್ತಾನೆ, ಪ್ರ. ೪-೧೦), 'ಏವಮೇವಾಸ್ಯ ಪರಿದ್ರಷ್ಟುರಿಮಾಃ ಷೋಡಶಕಲಾಃ ಪುರುಷಾಯಣಾಃ ಪುರುಷಂ ಪ್ರಾಪ್ಯಾಸ್ತಂ ಗಚ್ಛಸ್ತಿ ಭಿದ್ಯೇತೇ ಚಾಸಾಂ ನಾಮರೂಪೇ ಪುರುಷ ಇತ್ಯೇವಂ ಪ್ರೋಚ್ಯತೇ' (ಈ ಕಡಲಿಗೆ ಬೀಳುವ ನದಿಗಳಂತೆಯೇ ಈ ಜ್ಞಾನಿಯ ಈ ಹದಿನಾರು ಕಲೆಗಳೂ ಪುರುಷನಲ್ಲಿಗೆ ಹೋಗಿ ಪುರುಷನನ್ನು ಸೇರಿ ಅಸ್ತವಾಗುವವು; ಇವುಗಳ ನಾಮರೂಪಗಳು ನಾಶವಾಗುವವು, ಎಲ್ಲವೂ ಪುರುಷನೆಂದೇ ಎನ್ನಿಸಿಕೊಳ್ಳುತ್ತದೆ, ಪ್ರ. ೬-೫).

**ನ ನಾಮರೂಪೇ ನಿಯತೇ ಸರ್ವತ್ರ ವ್ಯಭಿಚಾರತಃ ।**
**ಅನಾಮರೂಪಃ ಸರ್ವಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೬೫॥**

೬೫. ನಾಮರೂಪಗಳು ಒಂದೇ ಆಗಿರುವದಿಲ್ಲ, ಏಕೆಂದರೆ ಎಲ್ಲೆಲ್ಲಿಯೂ ಅವು ಬೇರ್ಪಡುತ್ತಿರುತ್ತವೆ. ಆದ್ದರಿಂದ ಯಾರೊಬ್ಬರಿಗೂ ನಾಮರೂಪಗಳಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ನಾಮರೂಪಗಳು ಮಿಥ್ಯೆಯೆಂಬುದು ಹೇಗೆ? ಜೀವರುಗಳಿಗೆ ನಾಮರೂಪಗಳಿರುವದು ಪ್ರತ್ಯಕ್ಷಾನುಭವದಲ್ಲಿಯೇ ಇದೆಯಲ್ಲ! ಈಶ್ವರನಿಗೆ ನಾಮಗಳನ್ನು ಶ್ರುತಿಯಲ್ಲಿಯೂ ಹೇಳಿದೆಯಲ್ಲ!

ಈ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳಿರುತ್ತದೆ: ಜೀವರುಗಳಿಗೆ ನಾಮರೂಪಗಳು ಇಂಥವೇ ಎಂದು ಗೊತ್ತಾಗಿ ಇರುವದಿಲ್ಲ, ಜೀವನಿಗೆ ಎಚ್ಚರದಲ್ಲಿರುವ ನಾಮರೂಪಗಳೇ ಬೇರೆ, ಕನಸುಗಳಲ್ಲಿ ತೋರುವ ನಾಮರೂಪಗಳೇ ಬೇರೆ, ತನಿನಿದ್ರೆಯಲ್ಲಂತೂ ನಾಮರೂಪಗಳಿರುವದೇ ಇಲ್ಲ. ಹೀಗೆ ತೋರಿ ಹಾರುತ್ತಿರುವ ನಾಮರೂಪಗಳು ಸತ್ಯವೆಂದು ಹೇಗೆ ಹೇಳುವದು? ಆದ್ದರಿಂದ ಜೀವನಿಗೆ ನಾಮರೂಪಗಳಿರುವವೆಂಬುದು ಸುಳ್ಳೆಂದಾಯಿತು.

ಹೀಗೆಯೇ ಈಶ್ವರನಿಗೂ ನಿಜವಾಗಿ ನಾಮರೂಪಗಳಿಲ್ಲ. ಕೆಲವು ಶ್ರುತಿಗಳಲ್ಲಿ ಈಶ್ವರನಿಗೆ ಸ್ಥಾನವಿಶೇಷವನ್ನೂ ನಾಮರೂಪಗಳನ್ನೂ ಹೇಳಿರುವದು ನಿಜವಾದರೂ ಆ ಶ್ರುತಿಗಳು ಈಶ್ವರನ ಸ್ವರೂಪವನ್ನು ಹೇಳುವದಕ್ಕೆ ಬಂದಿರುವದಿಲ್ಲ; ಈಶ್ವರನನ್ನು ಹಾಗೆ ಉಪಾಸನೆಮಾಡಬೇಕೆಂದು ಹೇಳುವದಕ್ಕೆ ಬಂದಿರುತ್ತದೆ. ಅಷ್ಟೆ. ಈಶ್ವರನು

ಸಾಧಕರನ್ನು ಅನುಗ್ರಹಿಸುವದಕ್ಕಾಗಿ ಸಂಕಲ್ಪ ಮಾತ್ರದಿಂದ ಮಾಯಾಮಯವಾದ ಶರೀರವನ್ನು ಧರಿಸಬಹುದಾಗಿದೆ. ಆದರೆ ನಿಜವಾಗಿ ಈಶ್ವರನಿಗೆ ಗೊತ್ತಾಗಿರುವ ಒಂದಾನೊಂದು ಶರೀರವಿದೆ ಎಂದು ಶ್ರುತಿಯಲ್ಲಿ ಎಲ್ಲಿಯೂ ಹೇಳಿಲ್ಲ. ಉಪಾಸನೆಮಾಡುವ ರೂಪವು ನಿಜವಾದ ಬ್ರಹ್ಮರೂಪವಲ್ಲ ಎಂದು 'ನೇದಂ ಯದಿದಮುಪಾಸತೇ' (ಇದು ಎಂದು ಉಪಾಸನೆಮಾಡುವದು ಬ್ರಹ್ಮವಲ್ಲ, ಕೇ. ೧-೫) ಮುಂತಾದ ಕಡೆಯಲ್ಲಿ ಹೇಳಿರುತ್ತದೆ. ನಿರುಪಾಧಿಕವಾದ ರೂಪವು 'ಅಶಬ್ದಮಸ್ಪರ್ಶಮರೂಪಮ್' (ಶಬ್ದವಿಲ್ಲದ್ದು, ಸ್ಪರ್ಶವಿಲ್ಲದ್ದು, ರೂಪವಿಲ್ಲದ್ದು.... ಕ. ೧-೩-೧೫), 'ನ ಸಂದೃಶೇ ತಿಷ್ಠತಿ ರೂಪಮಸ್ಯ' (ಈತನಿಗೆ ಯಾವ ರೂಪವೂ ಕಾಣಿಸುವದಿಲ್ಲ, ಕ. ೨-೩-೯) ಎಂದು ಶ್ರುತಿಗಳು ಸಾರುತ್ತಿರುವವು.

ಆದ್ದರಿಂದ ನಾಮರೂಪಗಳಿಂದ ಭೇದವಿದೆ ಎಂಬ ಶಂಕೆ ಸರಿಯಲ್ಲ. ನಾಮರೂಪಗಳು ನಿಯತವಾಗಿರುವದಿಲ್ಲವಾದ್ದರಿಂದ ಉಪಾಧಿಕೃತವಾದ ನಾನಾತ್ವವುಕೂಡ ನಿಜವಾಗಿ ಜೀವರುಗಳಲ್ಲಿಲ್ಲ. ಹೀಗಿರುವದರಿಂದ ಅನೇಕರಾದ ಜೀವರುಗಳಿಗೂ ಏಕನಾದ ಈಶ್ವರನಿಗೂ ಐಕ್ಯವು ಹೇಗೆ?- ಎಂಬ ಶಂಕೆಗೂ ಅವಕಾಶವಿಲ್ಲ. ಆದ್ದರಿಂದಲೇ ಜೀವನಿಗೂ ಬ್ರಹ್ಮಕ್ಕೂ ಯಾವ ಬಗೆಯ ಭೇದವೂ ಇಲ್ಲ- ಎಂದೇ ವೇದಾಂತಗಳ ಡಂಗುರವಿದೆ. ಉದಾಹರಣೆಗೆ- 'ಯತ್ರೈತತ್ಪುರುಷಃ ಸ್ವಪಿತಿ ನಾಮ ಸತಾ ಸೋಮ್ಯ ತದಾ ಸಂಪನ್ನೋ ಭವತಿ ಸ್ವಮಪೀತೋ ಭವತಿ ತಸ್ಮಾದೇನಂ ಸ್ವಪಿತೀತ್ಯಾಚಕ್ಷತೇ ಸ್ವಂ ಹ್ಯಪೀತೋ ಭವತಿ' (ಅಪ್ಪ, ಯಾವಾಗ ಇವನಿಗೆ ಸ್ವಪಿತಿ-ನಿದ್ರಿಸುತ್ತಾನೆ ಎಂಬ ಹೆಸರು ಬರುವದೋ ಆಗ ಇವನು ಸತ್ತಿನೊಡನೆ ಬೆರೆತವನಾಗಿರುತಾನೆ. ತನ್ನಲ್ಲಿ ತಾನು ಲಯವಾಗಿರುತ್ತಾನೆ; ಆದ್ದರಿಂದಲೇ ಇವನನ್ನು ಸ್ವಪಿತಿ ಎನ್ನುತ್ತಾರೆ. ಸ್ವಮ್- ತನ್ನನ್ನು ಅಪೀತ- ಸೇರಿ ಲಯವಾದವನಲ್ಲವೆ, ಆಗಿರುತ್ತಾನೆ? ಛಾಂ. ೬-೮-೧) ಎಂದು ಸುಷುಪ್ತಿಯಲ್ಲಿ ಯಾವ ನಾಮರೂಪಗಳೂ ಇಲ್ಲದಿರುವದರಿಂದ ಜೀವನು ತನ್ನ ಸ್ವರೂಪದಲ್ಲಿ ಲಯವಾಗಿರುತ್ತಾನೆಂದು ಶ್ರುತಿಯು ಹೇಳುತ್ತಿರುವದರಿಂದ ನಾಮರೂಪಗಳು ನಿಯತವಲ್ಲವೆಂಬುದನ್ನು ತಿಳಿಸುತದೆ. ಇದರಂತೆ 'ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್' (ಈ ನದಿಗಳಂತೆಯೇ ಜ್ಞಾನಿಯು ನಾಮರೂಪಗಳಿಂದ ಮುಕ್ತನಾಗಿ ಪರಾತ್ಪರನಾದ ದಿವ್ಯಪುರುಷನನ್ನು ಸೇರಿಕೊಳ್ಳುವನು, ಮುಂ. ೩-೨-೮) ಎಂದು ನಾಮರೂಪಗಳು ಅವಿದ್ಯಾಕಲ್ಪಿತವೆಂದು ತಿಳಿಸುತಾರೆ. ಮತು 'ಸರ್ವಾಣಿ ರೂಪಾಣಿ ವಿಚಿತ್ಯ ಧೀರೋ ನಾಮಾನಿ ಕೃತ್ವಾಭಿವದನ್ಯದಾಸ್ತೇ' (ಆ ಸರ್ವಜ್ಞನು ಸರ್ವರೂಪಗಳನ್ನೂ ಕಂಡು ಅವುಗಳಿಗೆ ನಾಮಗಳನ್ನು ಇಟ್ಟು ಕರೆಯುತಿರುವನು,

ತೈ. ಆ. ೩-೧೨-೭) ಎಂದು ಪರಮಾತ್ಮನು ನಾಮರೂಪಗಳನ್ನು ನಿರ್ಮಿಸುತ್ತಾನೆಂದಿರುವದರಿಂದ ಸ್ವತಃ ಅವನಲ್ಲಿ ಯಾವ ನಾಮರೂಪಗಳೂ ಇಲ್ಲವೆಂದು ತಿಳಿಸುತ್ತದೆ.

**ನ ಜೀವಬ್ರಹ್ಮಣೋರ್ಭೇದಃ ಪಿಣ್ಡಬ್ರಹ್ಮಾಣ್ಡಭೇದತಃ ।**
**ವ್ಯಷ್ಟೇಃ ಸಮಷ್ಟೇರೇಕತ್ವಾದಿತಿ ವೇದಾನ್ತಡಿಣ್ಡಿಮಃ ॥೬೬॥**

೬೬. ಜೀವನಿಗೂ ಬ್ರಹ್ಮಕ್ಕೂ ಪಿಂಡಬ್ರಹ್ಮಾಂಡಗಳ ಭೇದದಿಂದ ಭೇದವಿಲ್ಲ; ಏಕೆಂದರೆ ವ್ಯಷ್ಟಿಯೂ ಸಮಷ್ಟಿಯೂ ಒಂದೇ. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

(ಶಂಕೆ): ಜೀವನು ಅಲ್ಪಜ್ಞನಾಗಿರುತ್ತಾನೆ, ಅಲ್ಪಶಕ್ತಿಗಳುಳ್ಳವನೂ ಆಗಿರುತ್ತಾನೆ; ಏಕೆಂದರೆ ಇವನಿಗೆ ಶರೀರವು ಮಾತ್ರವೇ ಸ್ವಾಧೀನದಲ್ಲಿದೆ. ಆದರೆ ಈಶ್ವರನು ಸರ್ವಜ್ಞನು, ಸರ್ವಶಕ್ತಿವಂತನು; ಏಕೆಂದರೆ ಅವನು ಬ್ರಹ್ಮಾಂಡವನ್ನೆಲ್ಲ ಸೃಷ್ಟಿಸ್ಥಿತಿ ಸಂಹಾರಮಾಡುವವನಾಗಿರುತ್ತಾನೆ. ಹೀಗಿರುವದರಿಂದ ಮೇರುಪರ್ವತಕ್ಕೂ ಸಾಸಿವೆಕಾಳಿಗೂ ಇರುವಷ್ಟು ಭೇದವಿರುತ್ತಿರುವಲ್ಲಿ, ಇವರಿಬ್ಬರಿಗೂ ಅಭೇದವೆಂಬುದು ಹೇಗೆ ಒಪ್ಪೀತು?

ಇದಕ್ಕೆ ಪರಿಹಾರವೇನೆಂದರೆ, ಪಿಂಡ (ಶರೀರ), ಬ್ರಹ್ಮಾಂಡ (ಸಕಲ ಜಗತ್ತು)-ಇವೆರಡೂ ಬೇರೆಬೇರೆಯಲ್ಲ. ಹೇಗೆಂದರೆ ಪಿಂಡವು ವ್ಯಷ್ಟಿ, ಬ್ರಹ್ಮಾಂಡವು ಸಮಷ್ಟಿ. ವ್ಯಷ್ಟಿಯಾದ ಮರಗಳೆಲ್ಲ ಸೇರಿ ಕಾಡು ಎಂಬ ಸಮಷ್ಟಿಯಾಗಿರುವಂತೆಯೂ ವ್ಯಷ್ಟಿಯಾಗಿರುವ ಅಲೆಗಳೇ ಸಮಷ್ಟಿಯಾದ ಸಮುದ್ರವಾಗಿರುವಂತೆಯೂ ಬ್ರಹ್ಮಾಂಡವೆಂಬುದರಲ್ಲಿ ಶರೀರಗಳೆಲ್ಲವೂ ಅಡಕವಾಗಿರುತ್ತವೆ. ವ್ಯಷ್ಟಿಗೆ ಸಾಕ್ಷಿಯಾಗಿರುವ ಆತ್ಮನೇ ಸಮಷ್ಟಿಗೂ ಸಾಕ್ಷಿಯಾಗಿರುತ್ತಾನೆ; ಸಾಕ್ಷಿಗಳು ಅನೇಕರೆಂಬುದಕ್ಕೆ ಯಾವ ಪ್ರಮಾಣವೂ ಇರುವದಿಲ್ಲ. ಇದೂ ಅಲ್ಲದೆ ನಾಮರೂಪಗಳೇ ಮಿಥ್ಯೆಯಾಗಿರುವವೆಂದು (೬೪ರಲ್ಲಿ) ತಿಳಿಸಿಕೊಟ್ಟದ್ದಾಗಿರುವದರಿಂದ ನಾಮರೂಪಕೃತವಾದ ಈ ವ್ಯಷ್ಟಿ ಸಮಷ್ಟಿಗಳು ಮಿಥ್ಯೆಯೇ ಆಗಿರುತ್ತವೆ. ಆದ್ದರಿಂದಲೂ ಜೀವನಿಗೂ ಬ್ರಹ್ಮಕ್ಕೂ ಭೇದವಿರುವದಿಲ್ಲ.

ಈ ವಿಷಯಕ್ಕೂ ವೇದಾಂತಗಳ ಡಂಗುರವಿದೆ. 'ನವದ್ವಾರೇ ಪುರೇದೇಹೀ ಹಂಸೋ ಲೇಲಾಯತೇ ಬಹಿಃ । ವಶೀ ಸರ್ವಸ್ಯ ಲೋಕಸ್ಯ ಸ್ಥಾವರಸ್ಯ ಚರಸ್ಯ ಚ ॥' (ಒಂಬತ್ತು ಬಾಗಿಲಿನ ಪುರವಾದ ಶರೀರದಲ್ಲಿ ಶರೀರಿಯಾದ ಆತ್ಮನಿದ್ದುಕೊಂಡು

ಬಹಿರ್ವ್ಯಾಪಾರವನ್ನು ಮಾಡುತ್ತಿರುತ್ತಾನೆ. ಅವನೇ ಸರ್ವಲೋಕಕ್ಕೂ ಒಡೆಯನು, ಶ್ವೇ. ೩-೧೮), 'ಜಾಗರಿತಸ್ಥಾನೋ ಬಹಿಃಪ್ರಜ್ಞಃ ಸಪ್ತಾಙ್ಗ ಏಕೋನವಿಂಶತಿಮುಖಃ ಸ್ಥೂಲಭುಗ್ವೈಶ್ವಾನರಃ ಪ್ರಥಮಃ ಪಾದಃ'' (ಎಚ್ಚರವೆಂಬ ಅವಸ್ಥೆಯುಳ್ಳವನಾಗಿ ಬಹಿಷ್ಪ್ರಜ್ಞನೂ ಸಪ್ತಾಂಗನೂ ಹತ್ತೊಂಬತ್ತು ದ್ವಾರಗಳುಳ್ಳವನೂ ಸ್ಥೂಲಭೋಕ್ತೃವೂ ಆಗಿರುವ ವೈಶ್ವಾನರನು ಆತ್ಮನ ಮೊದಲನೆಯ ಪಾದವು, ಮಾಂ. ೩)- ಇವೇ ಮುಂತಾದ ವಚನಗಳು ಹೀಗೆಂದು ಸಾರುತ್ತಿರುವವು.

ಆರನೆಯ ಶ್ಲೋಕದಲ್ಲಿ ಆತ್ಮಚೈತನ್ಯವು ಒಂದೇ ಎಂಬ ವಾದದಲ್ಲಿಯೂ ಜೀವೇಶ್ವರವ್ಯವಹಾರವು ಹೊಂದುತ್ತದೆ ಎಂದಿಷ್ಟನ್ನೇ ತಿಳಿಸಲಾಗಿತ್ತು. ಅಲ್ಲಿ ವ್ಯಷ್ಟಿಸಮಷ್ಟಿಗಳಿಗೆ ಭೇದವಿಲ್ಲದ್ದರಿಂದ ಅವುಗಳಿಂದಾಗಿರುವ ಭೇದವು ನಿಜವಲ್ಲ ಎಂದು ತಿಳಿಸಿದೆ. ಆದ್ದರಿಂದ ಇಲ್ಲಿ ಪುನರುಕ್ತಿಯಿಲ್ಲ.

ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ।
ಜೀವನ್ಮುಕ್ತಸ್ತು ತದ್ವಿದ್ವಾನಿತಿ ವೇದಾನ್ತಡಿಣ್ಡಿಮಃ ॥೬೭॥

೬೭. ಬ್ರಹ್ಮವು ಸತ್ಯವು, ಜಗತ್ತು ಮಿಥ್ಯೆ; ಜೀವನು ಬ್ರಹ್ಮವೇ ಹೊರತು ಬೇರೆಯಲ್ಲ. ಇದನ್ನು ತಿಳಿದವನು ಜೀವನ್ಮುಕ್ತನು. ಹೀಗೆಂದು ವೇದಾಂತಗಳ ಡಂಗುರವು.

## ವಿವರಣೆ

ಇಲ್ಲಿಯವರೆಗಿನ ಗ್ರಂಥಭಾಗದಲ್ಲಿ 'ಎರಡನ್ನು ಬಿಟ್ಟು' (೪೨) ಎಂಬಿದರ ವಿವರಣೆಯನ್ನು ಮಾಡಿದ್ದಾಯಿತು. ಇನ್ನು 'ಒಂದನು ಆಶ್ರಯಿಸಬೇಕು' (೪೨) ಎಂಬುದನ್ನು ವಿವರಿಸಲಾಗುವದು.

ಸಚ್ಚಿದಾನಂದರೂಪವೂ ನಿತ್ಯಶುದ್ಧಮುಕ್ತಸ್ವಭಾವವುಳ್ಳದ್ದೂ ಆಗಿರುವ ಬ್ರಹ್ಮವೊಂದೇ ನಿಜವಾಗಿ ಸತ್ಯವು; ಏಕೆಂದರೆ ಅದರ ಆತ್ಮಸ್ವರೂಪವು ಎಂದಿಗೂ ಬೇರ್ಪಡುತ್ತಿಲ್ಲ. ನಾಮರೂಪಾತ್ಮಕವೂ, ಅನೇಕ ಕರ್ತೃಭೋಕ್ತೃಗಳಿಂದೊಡಗೂಡಿದ್ದೂ, ಗೊತ್ತಾದ ದೇಶಕಾಲನಿಮಿತ್ತಗಳಿಂದ ಕ್ರಿಯೆಗಳ ಫಲವನ್ನು ತೋರಿಸುತ್ತಿರುವದೂ ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿಯಬರುತ್ತಿರುವದೂ ಆಗಿರುವ ಜಗತ್ತು ಮಿಥ್ಯೆಯು; ಏಕೆಂದರೆ ಅದು ಬೇರ್ಪಡುತ್ತಲೇ ಇರುತ್ತದೆ. ವಾಗಾದಿಪ್ರಾಣಗಳನ್ನು ಧರಿಸಿರುವ ಜೀವನು ಕರ್ತೃಭೋಕ್ತೃರೂಪನೆಂದು ತೋರುತ್ತಿದ್ದರೂ ನಿಜವಾಗಿ ಕರ್ತೃತ್ವಭೋಕ್ತೃತ್ವಗಳಿಲ್ಲದ ಪರಮಾತ್ಮನೇ, ಅವನು ಸಂಸಾರಿಯಲ್ಲ. ಇದನ್ನು

ಅರಿತುಕೊಂಡ ಅದ್ವಿತೀಯಬ್ರಹ್ಮಾತ್ಮಜ್ಞಾನಿಯು ಜೀವನ್ಮುಕ್ತನು, ಲೋಕದೃಷ್ಟಿಯಿಂದ ಸಂಸಾರಿಯಂತೆಯೇ ಜೀವಿಸುತ್ತಿದ್ದರೂ ತನ್ನ ದೃಷ್ಟಿಯಿಂದ ಯಾವ ಸಂಸಾರಧರ್ಮವೂ ಇಲ್ಲದ ಮುಕ್ತನೇ.

ಹೀಗೆಂಬುದು ವೇದಾಂತಗಳ ಡಂಗುರವು. 'ತತ್ಸತ್ಯಂ ಸ ಆತ್ಮಾ ತತ್ತ್ವಮಸಿ' (ಅದೇ ಸತ್ಯವು, ಅದೇ ಆತ್ಮನು, ಅದೇ ನೀನಾಗಿರುವೆ, ಛಾಂ. ೬-೮-೭), 'ನೇಹ ನಾನಾಸ್ತಿ ಕಿಂಚನ' (ಅಲ್ಲಿ ನಾನಾತ್ವವೆಂಬುದು ಎಳ್ಳಷ್ಟೂ ಇರುವದಿಲ್ಲ , ಕ. ೨-೧-೧೧), 'ಅಥ ಸೋऽಭಯಂ ಗತೋ ಭವತಿ' (ಇನ್ನು ಅವನು ಅಭಯವನ್ನು ಹೊಂದಿದವನಾಗುವನು, ತೈ. ೨-೭), 'ಅಶರೀರಂ ಶರೀರೇಷ್ವನವಸ್ಥೇಷ್ವವಸ್ಥಿತಮ್ । ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥' (ಅಶರೀರನೂ ತಾವು ಬೇರ್ಪಡುತ್ತಲೇ ಇರುವ ಶರೀರಗಳೊಳಗೆ ಇರುವವನೂ ಮಹಾಂತನೂ ವಿಭುವೂ ಆದ ಆತ್ಮನನ್ನು ಅರಿತುಕೊಂಡ ವಿವೇಕಿಯು ಶೋಕಿಸುವದಿಲ್ಲ, ಕ. ೧-೨-೨೨), 'ತದ್ಯಥಾऽಹಿನಿರ್ಲ್ವಯಿನೀ ವಲ್ಮೀಕೇ ಮೃತಾ ಪ್ರತ್ಯಸ್ತಾ ಶಯೀತೈವಮೇವೇದಂ ಶರೀರಂ ಶೇತೇ । ಅಥಾಯಮಶರೀರೋऽಮೃತಃ ಪ್ರಾಣೋ ಬ್ರಹ್ಮೈವ ತೇಜ ಏವ ॥' (ಒಣಕಲಾಗಿ ಕೆಳಕ್ಕೆ ಬಿಸುಟ ಹಾವಿನ ಪೊರೆಯು ಹೇಗೆ ಹುತ್ತದಲ್ಲಿ ಬಿದ್ದಿರುವದೋ ಹಾಗೆಯೇ ಈ ಶರೀರವು ಇದ್ದುಕೊಂಡಿರುವದು. ಇನ್ನು ಅವನು ಅಶರೀರಿಯೇ, ಅಮೃತನೇ, ಪ್ರಾಣನೇ, ಬ್ರಹ್ಮವೇ, ತೇಜಸ್ಸೆ, ಬೃ. ೪-೪-೭) ಇವೇ ಮುಂತಾದ ಶ್ರುತಿಗಳನ್ನು ಇಲ್ಲಿ ಉದಾಹರಿಸಬಹುದು.

**ಅನಾಮರೂಪಂ ಸಕಲಂ ಸನ್ಮಯಂ ಚಿನ್ಮಯಂ ಪ್ರಿಯಮ್ ।**
**ಕುತೋ ಭೇದಃ ಕುತೋ ಬನ್ಧ ಇತಿ ವೇದಾನ್ತಡಿಣ್ಡಿಮಃ ॥೬೮॥**

೬೮. ಯಾವದಕ್ಕೂ ನಾಮರೂಪಗಳಿಲ್ಲ, ಎಲ್ಲವೂ ಸದ್ರೂಪವೂ ಚಿದ್ರೂಪವೂ ಪ್ರಿಯರೂಪವೂ ಆಗಿರುತ್ತದೆ. ಭೇದವೆಲ್ಲಿಯದು, ಬಂಧವೆಲ್ಲಿಯದು? ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ನಾಮರೂಪಗಳೆಲ್ಲವೂ ಮಿಥ್ಯೆಯಾಗಿರುವದರಿಂದ ಯಾವದಕ್ಕೂ ನಾಮರೂಪಗಳಿಲ್ಲ. ಸಚ್ಚಿದಾನಂದಬ್ರಹ್ಮದಿಂದ ಹುಟ್ಟಿ, ಅದರಲ್ಲಿಯೇ ಇದ್ದು, ಅದನ್ನೇ ಸೇರುತ್ತಿರುವದರಿಂದ ಎಲ್ಲವೂ ಸಚ್ಚಿದಾನಂದರೂಪವೇ ಆಗಿದೆ. ಇನ್ನು ಭೇದವೆಲ್ಲಿಯದು, ಬಂಧವೆಲ್ಲಿಯದು?

ಹೀಗೆಂದು ವೇದಾಂತಗಳು ಸಾರುತ್ತಿರುವವು: 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನ್'

(ಇವೆಲ್ಲವೂ ಬ್ರಹ್ಮವೇ; ಆ ಬ್ರಹ್ಮದಿಂದ ಹುಟ್ಟಿರುತ್ತದೆ. ಅದರಲ್ಲಿಯೇ ಲಯವಾಗುತ್ತದೆ, ಅದರಲ್ಲಿಯೇ ವ್ಯಾಪಾರಮಾಡುತ್ತಿದೆ, ಛಾಂ. ೩-೧೪-೧), 'ಸಚ್ಚ ತ್ಯಚ್ಚಾಭವತ್ । ನಿರುಕ್ತಂ ಚಾನಿರುಕ್ತಂ ಚ । ನಿಲಯನಂ ಚಾನಿಲಯನಂ ಚ । ವಿಜ್ಞಾನಂ ಚಾವಿಜ್ಞಾನಂ ಚ । ಸತ್ಯಂ ಚಾನೃತಂ ಚ ಸತ್ಯಮಭವತ್ । ಯದಿದಂ ಕಿಂಚ॥' (ಇದೂ, ಅದೂ; ನಿರ್ವಚನಮಾಡಬಹುದಾದದ್ದೂ, ಆಗದ್ದೂ; ಆಶ್ರಯವಾಗಿರುವದೂ, ಇಲ್ಲದ್ದೂ; ಚೇತನವೂ, ಅಚೇತನವೂ; ಸತ್ಯವೂ, ಅನೃತವೂ- ಸತ್ಯವೇ ಆಯಿತು, ತೈ. ೨-೬)- ಇವೇ ಮುಂತಾದ ಶ್ರುತಿಗಳು ಇದಕ್ಕೆ ಉದಾಹರಣೆ ಇರಬೇಕು.

**ನ ಸತ್ಯಃ ಕಥ್ಯತೇ ಲೋಕೋ ನಾಮಾದೇರ್ವ್ಯಭಿಚಾರತಃ ।**
**ವಟುಃ ಕುಲಟ ಇತ್ಯಾದೇರಿತಿ ವೇದಾನ್ತಡಿಣ್ಡಿಮಃ ॥೬೯॥**

೬೯. ಈ ಲೋಕವು ಸತ್ಯವಲ್ಲ, ಏಕೆಂದರೆ ಬ್ರಹ್ಮಚಾರಿ, ವ್ಯಭಿಚಾರಿ- ಎಂಬುದೇ ಮುಂತಾದ ನಾಮಗಳು ಬೇರ್ಪಡುತ್ತಿರುವವು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಈ ನಾಮರೂಪಾತ್ಮಕವಾದ ಲೋಕವು ಸತ್ಯವಲ್ಲ. ಏಕಂದರೆ ಇದು ಬೇರ್ಪಡುತ್ತಲೇ ಇರುತ್ತದೆ. ಬ್ರಹ್ಮವು ಸಚ್ಚಿದಾನಂದಸ್ವರೂಪವೆಂಬುದು ಯಾವಾಗಲೂ ಬದಲಾಯಿಸುವದಿಲ್ಲ. ಆದರೆ ನಾಮರೂಪಗಳು ಹೀಗಲ್ಲ. ಏಕೆಂದರೆ ಈಗ ಬ್ರಹ್ಮಚಾರಿ ಎನ್ನಿಸಿಕೊಂಡಿರುವವನೇ ಕಾಲಾಂತರದಲ್ಲಿ ವ್ಯಭಿಚಾರಿ ಎನ್ನಿಸಿಕೊಳ್ಳುತ್ತಾನೆ. ಆದ್ದರಿಂದ ಲೋಕವು ಸತ್ಯವಲ್ಲ.

ಹೀಗೆಂದು 'ವಾಚಾರಮ್ಭಣಂ ವಿಕಾರೋ ನಾಮಧೇಯಮ್' (ಕಾರ್ಯವು ಮಾತಿನಿಂದ ಉಂಟಾಗಿರುವದು, ಹೆಸರು ಮಾತ್ರ, ಛಾಂ. ೬-೧-೪) ಮುಂತಾದ ವೇದಾಂತಗಳು ಸಾರುತ್ತಿರುವವು.

**ನಾಮರೂಪಾತ್ಮಕಂ ವಿಶ್ವಮಿನ್ದ್ರಜಾಲಂ ವಿದುರ್ಬುಧಾಃ ।**
**ಅನಾಮತ್ವಾದರೂಪತ್ವಾದಿತಿ ವೇದಾನ್ತಡಿಣ್ಡಿಮಃ ॥೭೦॥**

೭೦. ನಾಮರೂಪಾತ್ಮಕವಾಗಿರುವ ಪ್ರಪಂಚವನ್ನು ಜ್ಞಾನಿಗಳು ಇಂದ್ರಜಾಲವೆನ್ನುವರು. ಏಕೆಂದರೆ ಇದಕ್ಕೆ ನಿಜವಾಗಿ ನಾಮವೂ ಇಲ್ಲ, ರೂಪವೂ ಇಲ್ಲ. ಹೀಗೆಂಬುದು ವೇತಾಂತಗಳ ಡಂಗುರವು.

## ವಿವರಣೆ

ವ್ಯಾಸರೇ ಮುಂತಾದ ಬ್ರಹ್ಮಜ್ಞಾನಿಗಳು ನಾಮರೂಪಾತ್ಮಕವಾಗಿ ತೋರುತ್ತಿರುವ ಈ ಜಗತ್ತು ಇಂದ್ರಜಾಲವೇ ಎನ್ನುವರು. ಏಕೆಂದರೆ ಇದರ ತೋರಿಕೆಯು ಯುಕ್ತಿವಿರುದ್ಧವಾಗಿರುತ್ತದೆ; ನಿಜವಾಗಿ ಇದು ನಾಮರೂಪಗಳಿಲ್ಲದ ಬ್ರಹ್ಮವೇ ಆಗಿರುತ್ತದೆ. 'ತಮಃಶ್ವಭ್ರನಿಭಂ ದೃಷ್ಟ್ವಾ ವರ್ಷ ಬುದ್ಬುದಸಂನಿಭಮ್' (ಕತ್ತಲೆಯಲ್ಲಿ ಕಾಣುವ ಗುಂಡಿಯಂತೆಯೂ ಮಳೆಯ ಗುಳ್ಳೆಯಂತೆಯೂ ಈ ಪ್ರಪಂಚವಿರುವದೆಂಬುದನ್ನು ಕಂಡುಕೊಂಡು, ಮೋ. ೩೦೧-೬೦) 'ಪರಮಾರ್ಥಸ್ತ್ವಮೇವೈಕೋ ನಾನ್ಯೋಽಸ್ತಿ ಜಗತಃ ಪರಃ। ತವೈಷ ಮಹಿಮಾ ಯೇನ ವ್ಯಾಪ್ತಮೇತಚ್ಚರಾಚರಮ್ । ಯದೇ ತದ್ದೃಶ್ಯತೇ ಮೂರ್ತಮೇತಜ್ಜ್ಞಾನಾತ್ಮನಸ್ತವ । ಭ್ರಾನ್ತಿಜ್ಞಾನೇನ ಪಶ್ಯನ್ತಿ ಜಗದ್ರೂಪಮಯೋಗಿನಃ ॥' (ನಿಜವಾಗಿ ನೀನೊಬ್ಬನೇ ಪರಮಾರ್ಥವು, ಜಗತ್ತಿಗಿಂತಲೂ ಆಚೆಯಿರುವವನು ಮತ್ತೆ ಯಾರೊಬ್ಬನೂ ಇಲ್ಲ; ಈ ಚರಾಚರಪ್ರಪಂಚವೆಲ್ಲವೂ ವ್ಯಾಪ್ತವಾಗಿರುವದು ನಿನ್ನ ಈ ಮಹಿಮೆಯಿಂದಲೇ. ಜ್ಞಾನಾತ್ಮನಾಗಿರುವ ನಿನ್ನ ಮೂರ್ತರೂಪವು ಕಾಣುತ್ತಿದೆಯಲ್ಲ, ಇದು ಜಗದ್ರೂಪವಾಗಿದೆಯೆಂದು ಅಯೋಗಿಗಳಾದವರು ಭ್ರಾಂತಿಜ್ಞಾನದಿಂದ ತಿಳಿಯುತ್ತಿರುವರು, ವಿ. ಪು. ೧-೪-೩೮) ಮುಂತಾದ ಸ್ಮೃತಿಗಳು ಇದಕ್ಕೆ ಪ್ರಮಾಣವು.

ಆದ್ದರಿಂದಲೇ 'ಯ ಏಕೋ ಜಾಲವಾನೀಶತ ಈಶನೀಭಿಃ' (ಯಾವನೊಬ್ಬ ಜಾಲವಂತನೇ ಆಳುವ ಶಕ್ತಿಗಳಿಂದ ಎಲ್ಲವನ್ನೂ ಆಳುತ್ತಿರುವನೋ, ಶ್ವೇ. ೩-೧), 'ಯತೋ ವಾಚೋ ನಿವರ್ತನ್ತೇ' (ಯಾವನನ್ನು ಮುಟ್ಟಲಾರದೆ ವಾಕ್ಕುಗಳು ಮನಸ್ಸಿನೊಡನೆ ಹಿಂತಿರುಗುವವೋ, ತೈ. ೨-೯), 'ನ ಸಂದೃಶೇ ತಿಷ್ಠತಿ ರೂಪಮಸ್ಯ' (ಈತನಿಗೆ ಕಣ್ಣಿಗೆ ಕಾಣುವಂಥ ರೂಪವೇ ಇಲ್ಲ, ತೈ. ನಾ. ೨)- ಎಂದು ಮುಂತಾದ ವೇದಾಂತಗಳ ಡಂಗುರವಿರುತ್ತದೆ.

**ಅಭೇದದರ್ಶನಂ ಮೋಕ್ಷಃ ಸಂಸಾರೋ ಭೇದದರ್ಶನಃ ।**
**ಸರ್ವವೇದಾನ್ತಸಿದ್ಧಾನ್ತ ಇತಿ ವೇದಾನ್ತಡಿಣ್ಡಿಮಃ ॥೭೧॥**

೭೧. ಅಭೇದವನ್ನು ಕಂಡುಕೊಳ್ಳುವದೇ ಮೋಕ್ಷವು, ಭೇದವನ್ನು ಕಾಣುತ್ತಿರುವದೇ ಸಂಸಾರವು. ಇದೇ ಸರ್ವವೇದಾಂತಗಳ ಸಿದ್ಧಾಂತವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಈವರೆಗೆ ಹೇಳಿದ ಪ್ರಕಾರ ಜೀವನಿಗೂ ಬ್ರಹ್ಮಕ್ಕೂ ಪರಮಾರ್ಥದೃಷ್ಟಿಯಿಂದ ಭೇದವಿಲ್ಲವೆಂದೇ ಆಯಿತು. ಆದ್ದರಿಂದ ಅಭೇದದರ್ಶನವು, ಎಂದರೆ ಈಶ್ವರ, ಜೀವ, ಜಗತ್ತು- ಇವೆಲ್ಲವೂ ಬ್ರಹ್ಮರೂಪದಿಂದ ಅಭಿನ್ನವೇ ಎಂದು ತಿಳಿಯುವದೇ ಮೋಕ್ಷಕ್ಕೆ ಹೇತು; ಅವು ಭಿನ್ನಭಿನ್ನವೆಂದು ತಿಳಿಯುವದೇ ಸಂಸಾರಕ್ಕೆ ಕಾರಣವು- ಎಂದು ಏರ್ಪಡುತ್ತದೆ.

ಇದೇ ಸರ್ವವೇದಾಂತಗಳಲ್ಲಿಯೂ ಸಾರಿರುವ ಸಿದ್ಧಾಂತವು. 'ಯ ಏತದ್ವಿದುರಮೃತಾಸ್ತೇ ಭವನ್ತ್ಯಥೇತರೇ ದುಃಖಮೇವಾಪಿಯನ್ತಿ' (ಯಾರು ಇದನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು, ಇನ್ನುಳಿದವರು ದುಃಖವನ್ನೇ ಹೊಂದುವರು, ಶ್ವೇ. ೩-೧೦), 'ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ' (ಯಾವನು ಈ ಬ್ರಹ್ಮದಲ್ಲಿ ನಾನಾತ್ವವಿರುವಂತೆ ತಪ್ಪಾಗಿ ತಿಳಿಯುವನೋ ಅವನು ಸಾವಿನ ಮೇಲೆ ಸಾವನ್ನು ಹೊಂದುವನು, ಬೃ. ೪-೪-೧೯)- ಎಂಬಿವೇ ಮುಂತಾದ ವೇದಾಂತವಾಕ್ಯಗಳು ಹೀಗೆಂದು ಸಾರುತ್ತಿವೆ.

## ಆತ್ಮಜ್ಞಾನದಿಂದಲೇ ಮುಕ್ತಿ

**ನ ಮತಾಭಿನಿವೇಶೇನ ನ ಭಾಷಾವೇಷಮಾತ್ರತಃ ।**
**ಮುಕ್ತಿರ್ವಿನಾಽಽತ್ಮವಿಜ್ಞಾನಮಿತಿ ವೇದಾನ್ತಡಿಣ್ಡಿಮಃ ॥೭೨॥**

೭೨. ಮತಾಭಿಮಾನದಿಂದಲಾಗಲಿ, ಭಾಷಾವೇಷಗಳಿಂದಲಾಗಲಿ ಆತ್ಮಜ್ಞಾನ ವಿಲ್ಲದೆ ಮುಕ್ತಿಯು ಆಗಲಾರದು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ನಾನು ಅದ್ವೈತಿಯು ಎಂಬ ಮತಾಭಿಮಾನಮಾತ್ರದಿಂದ ಎಂದಿಗೂ ಮುಕ್ತಿಯಾಗುವದಿಲ್ಲ. 'ನ ನಾಮ್ನಾಭಿನಿವೇಶೇನ' ಎಂದೂ ಪಾಠಾಂತರವುಂಟು. ನಾನು ವೇದಾಂತಿ, ನಾನು ಶಾಸ್ತ್ರಿ ಎಂದು ಹೆಸರಿಟ್ಟುಕೊಂಡ ಮಾತ್ರದಿಂದಲಾಗಲಿ ಅದ್ವೈತಾಭಿನಿವೇಶದಿಂದಲಾಗಲಿ ಮುಕ್ತಿಯಾಗಲಾರದು- ಎಂದು ಆ ಪಾಠಕ್ಕೆ ಅರ್ಥ. ಭಾಷೆಯಿಂದ ಎಂದರೆ ಆತ್ಮ , ಅನಾತ್ಮ , ಬ್ರಹ್ಮ , ಸತ್ಯ , ಮಿಥ್ಯೆ , ಶುಕ್ತಿ , ರಜತ , ಸ್ವಪ್ನ- ಎಂದು ಮುಂತಾಗಿ ಕೆಲವು ಶಬ್ದಗಳನ್ನು ಬಳಸಿದಮಾತ್ರದಿಂದ ಮುಕ್ತಿಯಾಗದು. ವೇಷದಿಂದ ಎಂದರೆ ಕಾವಿಯಬಟ್ಟೆ, ದಂಡ, ಕಮಂಡಲು, ಮುಂಡನ- ಮುಂತಾದವುಗಳನ್ನು ಸ್ವೀಕರಿಸಿದ ಮಾತ್ರದಿಂದಲೂ ಆಗದು, ಆತ್ಮಜ್ಞಾನವಿಲ್ಲದೆ

ಹೊರಗಿನ ಯಾವ ಚಿಹ್ನೆಗಳಿಂದಲೂ ಮುಕ್ತಿಯಾಗದು ಎಂದರ್ಥ. 'ಯದಾ ಚರ್ಮವದಾಕಾಶಂ ವೇಷ್ಟಯಿಷ್ಯನ್ತಿ ಮಾನವಾಃ । ತದಾ ದೇವಮವಿಜ್ಞಾಯ ದುಃಖಸ್ಯಾನ್ತೋ ಭವಿಷ್ಯತಿ ॥' (ಜನರು ಆಕಾಶವನ್ನು ಚರ್ಮದಂತೆ ಸುತ್ತಬಲ್ಲರಾದರೆ, ಆಗ ಪರಮಾತ್ಮನ ಜ್ಞಾನವಿಲ್ಲದೆ ದುಃಖದ ನಾಶವಾದೀತು, ಶ್ವೇ. ೬-೨೦) ಎಂದು ಮುಂತಾದ ವೇದಾಂತದ ಡಂಗುರಗಳು ಹೀಗೆಂದು ಸಾರುತ್ತಿರುವವು.

## ಮುಮುಕ್ಷುತ್ವವು ಈಶ್ವರಾನುಗ್ರಹದಿಂದಲೇ ಉಂಟಾಗುವದು

**ನ ಕಾಮ್ಯಪ್ರತಿಷಿದ್ಧಾಭಿಃ ಕ್ರಿಯಾಭಿರ್ಮೋಕ್ಷವಾಸನಾ ।**
**ಈಶ್ವರಾನುಗ್ರಹಾತ್ ಸಾ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೭೩॥**

೭೩. ಕಾಮ್ಯ ಪ್ರತಿಷಿದ್ಧ ಕರ್ಮಗಳಿಂದ ಮೋಕ್ಷವಾಸನೆಯುಂಟಾಗಲಾರದು. ಅದು ಈಶ್ವರನ ಅನುಗ್ರಹದಿಂದಲೇ ಆದೀತು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ನಿತ್ಯ, ನೈಮಿತ್ತಿಕ, ಕಾಮ್ಯ, ಪ್ರತಿಷಿದ್ಧ- ಎಂದು ವೈದಿಕಕರ್ಮಗಳು ಮುಖ್ಯವಾಗಿ ನಾಲ್ಕು ಬಗೆ. ಕಾಮ್ಯಕರ್ಮಗಳನ್ನು ಮಾಡಿದ್ದರಿಂದ ಸ್ವರ್ಗಪ್ರಾಪ್ತಿಯೂ ಪ್ರತಿಷಿದ್ಧ ಕರ್ಮಗಳನ್ನು ಮಾಡಿದರೆ ಸ್ಥಾವರಾಂತವಾದ ಅಧೋಗತಿಯೂ ಆಗುವದು. ಆದ್ದರಿಂದ ಅವುಗಳನ್ನು ಮಾಡಿದರೆ ಮತ್ತೆಮತ್ತೆ ಸಂಸಾರವಾಸನೆಯೇ ಹೆಚ್ಚುವದು; ಅವುಗಳಿಂದ ಮೋಕ್ಷವಾಸನೆಯು ದೂರವೇ ಆಗುವದು.

ಆದರೆ ನಿತ್ಯನೈಮಿತ್ತಿಕಕರ್ಮಗಳನ್ನು ಭಗವಂತನಿಗೆ ಅರ್ಪಣವಾಗಲಿ ಎಂಬ ಬುದ್ಧಿಯಿಂದ ಸಂಗವನ್ನೂ, ಫಲವನ್ನೂ ಬಿಟ್ಟು ಮಾಡಿದರೆ ಈಶ್ವರನ ಅನುಗ್ರಹದಿಂದ ಮೋಕ್ಷವಾಸನೆಯು ತಲೆದೋರಿಕೊಳ್ಳುವದು.

ಹೀಗೆಂದು ವೇದಾಂತಗಳು ಸಾರುತ್ತಿವೆ : 'ಸ ಕಾಮಭಿರ್ಜಾಯತೇ ತತ್ರ ತತ್ರ' (ಕಾಮಿಯಾದವನು ಆಯಾ ಕಾಮಗಳು ಪ್ರಾಪ್ತವಾಗುವದಕ್ಕೆಂದು ಅಲ್ಲಲ್ಲಿ ಜನಿಸುತ್ತಿರುವನು, ಮು. ೩-೨-೨), 'ನಾವಿರತೋ ದುಶ್ಚರಿತಾತ್' (ಕೆಟ್ಟನಡತೆಯನ್ನು ಬಿಡದವನು ಪರಮಾತ್ಮನನ್ನು ಹೊಂದಲಾರನು, ಕ. ೧-೨-೨೪), 'ತಂ ಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ' (ಆತ್ಮಜ್ಞಾನವನ್ನು ಬೆಳಗಿ ತೋರಿಸುವ ಆ ದೇವನನ್ನು ಮುಮುಕ್ಷುವಾದ ನಾನು ಶರಣುಹೊಕ್ಕಿದ್ದೇನೆ, ಶ್ವೇ. ೬-೧೮)- ಈ ವಚನಗಳು ಇಲ್ಲಿ ಉದಾಹರಣೆ.

## ಜ್ಞಾನದಿಂದಲೇ ಜನ್ಮಸಾರ್ಥಕ್ಯ

**ಅವಿಜ್ಞಾತೇ ಜನ್ಮ ನಷ್ಟಂ ವಿಜ್ಞಾತೇ ಜನ್ಮ ಸಾರ್ಥಕಮ್ ।**
**ಜ್ಞಾತುರಾತ್ಮಾ ನ ದೂರೇ ಸ್ಯಾದಿತಿ ವೇದಾನ್ತಡಿಣ್ಡಿಮಃ ॥೭೪॥**

೭೪. ಇದನ್ನು ಅರಿಯದಿದ್ದರೆ ಜನ್ಮವೇ ಹಾಳಾಯಿತು; ಅರಿತುಕೊಂಡರೆ ಜನ್ಮವು ಸಾರ್ಥಕವಾಯಿತು. ಅರಿತವನಿಗೆ ಆತ್ಮನು ದೂರದಲ್ಲಿರುವದಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಅರಿತುಕೊಳ್ಳದಿದ್ದರೆ ಬಹಳ ನಷ್ಟ; ಅರಿತರೆ ಜನ್ಮಸಾರ್ಥಕವು; ಏಕೆಂದರೆ ಅದೇ ಪರಮಪುರಷಾರ್ಥಸಾಧನವು. ಆತ್ಮಜ್ಞಾನಕ್ಕೆ ಬಹಳ ಕಷ್ಟಪಡಬೇಕಾದದ್ದು ಇಲ್ಲ; ಏಕೆಂದರೆ ಈ ಅಮೃತಸ್ವರೂಪನಾದ ಪರಮಾತ್ಮನು ಅರಿಯುವವನ ಆತ್ಮನೇ, ದೂರದಲ್ಲಿಲ್ಲ. ಹೀಗೆ ಪ್ರತ್ಯಕ್ಷವೂ ನಿತ್ಯವೂ ಆದ ಮೋಕ್ಷವು ಜ್ಞಾನದಿಂದಲೇ ಆಗುವದು.

ಹೀಗೆಂದು ವೇದಾಂತಗಳ ಡಂಗುರವೂ ಇದೆ. ಉದಾಹರಣೆಗೆ ನೋಡಿ: 'ಇಹ ಚೇದವೇದಿದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತೀ ವಿನಷ್ಟಿಃ' (ಈ ಜನ್ಮದಲ್ಲಿಯೇ ಅರಿತುಕೊಂಡರೆ ಸಾರ್ಥಕ್ಯವುಂಟು, ಇಲ್ಲಿ ಅರಿತುಕೊಳ್ಳದಿದ್ದರೆ ಹೆಚ್ಚಿನ ನಷ್ಟವು, ಕೇ. ೨-೫), 'ಯ ಏತದ್ವಿದುರಮೃತಾಸ್ತೇ ಭವನ್ತ್ಯಥೇತರೇ ದುಃಖಮೇವಾಪಿ ಯನ್ತಿ' (ಯಾರು ಇದನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು, ಇನ್ನು ಯಾರು ಅರಿಯದೆ ಇರುವರೋ ಅವರು ದುಃಖವನ್ನೇ ಹೊಂದುವರು, ಬೃ. ೪-೪-೧೪), 'ತದಿಹಾನ್ತಿಕೇ ಚ ಪಶ್ಯತ್ಸ್ವಿಹೈವ ನಿಹಿತಂ ಗುಹಾಯಾಮ್' (ಅದು ಹತ್ತಿರದಲ್ಲೂ ಇರುವದು, ಚೆನ್ನಾಗಿ ನೋಡಿದರೆ ಇಲ್ಲಿಯೇ ಹೃದಯಗುಹೆಯಲ್ಲಿ ಇದ್ದುಕೊಂಡಿರುವದು, ಮು. ೩-೧-೭).

## ಬ್ರಹ್ಮಜ್ಞಾನವನ್ನು ಸಂಪಾದಿಸುವದು ಬಹುಸುಲಭ

**ದಶಮಸ್ಯ ಪರಿಜ್ಞಾನೇ ನಾಯಾಸೋಽಸ್ತಿ ಯಥಾ ತಥಾ ।**
**ಸ್ವಸ್ಯ ಬ್ರಹ್ಮಾತ್ಮವಿಜ್ಞಾನ ಇತಿ ವೇದಾನ್ತಡಿಣ್ಡಿಮಃ ॥೭೫॥**

೭೫. ಹತನೆಯವನನ್ನು ಅರಿತುಕೊಳ್ಳುವದರಲಿ ಹೇಗೆ ಯಾವ ಆಯಾಸವೂ ಇಲ್ಲವೋ ಅದರಂತೆ ತಾನು ಬ್ರಹ್ಮಾತ್ಮನೆಂಬುದನ್ನು ಅರಿತುಕೊಳ್ಳುವದರಲ್ಲಿಯೂ ಇಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಹತ್ತು ಜನ ಮಂಕರು ನದಿಯನ್ನು ದಾಟಿದ ಬಳಿಕ ತಾವೆಲ್ಲರೂ ಸುರಕ್ಷಿತವಾಗಿರುವೆವೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವದಕ್ಕಾಗಿ ಇರುವವರನ್ನು ಎಣಿಸಲು ಒಂಬತ್ತು ಜನರೇ ಇದ್ದರು. ಪ್ರತಿಯೊಬ್ಬನೂ ತನ್ನನ್ನು ಬಿಟ್ಟುಕೊಂಡೇ ಎಣಿಸಿದ್ದರಿಂದ ನಾವು ಒಂಬತ್ತು ಜನರೇ ಇರುವೆವು- ಎಂಬ ಭ್ರಾಂತಿಯುಂಟಾಗಿ ದುಃಖಕ್ಕೆ ಕಾರಣವಾಗಿತ್ತು. ದಾರಿಹೋಕನೊಬ್ಬನು ಅವರ ಗೋಳಿಗೆ ಕಾರಣವನ್ನು ಅರಿತುಕೊಂಡು ಒಬ್ಬನಿಗೆ 'ನೀನೇ ಹತ್ತನೆಯವನೊ!' ಎಂದು ತಿಳಿಯಹೇಳಲು ಅವರಿಗೆ ಕೂಡಲೇ ದುಃಖವು ಹೋಯಿತು.

ಈ ಕಥೆಯಲ್ಲಿ ಹತ್ತನೆಯವನನ್ನು ಅರಿತುಕೊಳ್ಳುವದು ಎಷ್ಟು ಸುಲಭವಾಗಿತ್ತೋ 'ನಾನು ಬ್ರಹ್ಮವು' ಎಂದು ಅರಿತುಕೊಳ್ಳುವದೂ ಅಷ್ಟೇ ಸುಲಭ.

ಹೀಗೆಂದು ವೇದಾಂತದ ಡಂಗುರವೂ ಇದೆ: 'ತತ್ಸತ್ಯಂ ಸ ಆತ್ಮಾ ತತ್ತ್ವಮಸಿ' (ಅದೇ ಸತ್ಯವು, ಅದೇ ಆತ್ಮನು, ನೀನು ಅದಾಗಿರುವೆ, ಛಾ. ೬-೧೫-೩) ಎಂದು ತಂದೆಯು ಶ್ವೇತಕೇತುವಿಗೆ ಉಪದೇಶಿಸಿ 'ತದ್ಧಾಸ್ಯ ವಿಜಜ್ಞೌ' (ಆ ತಂದೆಯ ಉಪದೇಶವನ್ನು ತಿಳಿದುಕೊಂಡನು, ಛಾ. ೬-೧೬-೩) ಎಂದು ಉಪನಿಷತ್ತಿನಲ್ಲಿದೆ.

**ಉಪೇಕ್ಷ್ಯೌಪಾಧಿಕಾನ್ ದೋಷಾನ್ಗೃಹ್ಯನ್ತೇ ವಿಷಯಾ ಯಥಾ ।**
**ಉಪೇಕ್ಷ್ಯ ದೃಶ್ಯಂ ತದ್ಬ್ರಹ್ಮ ಇತಿ ವೇದಾನ್ತಡಿಣ್ಡಿಮಃ ॥೭೬॥**

೭೬. ಉಪಾಧಿಕೃತವಾದ ದೋಷಗಳನ್ನು ಬಿಟ್ಟು ವಿಷಯಗಳನ್ನು ಹೇಗೆ ತೆಗೆದುಕೊಳ್ಳುತ್ತಾರೋ ಹಾಗೆ ದೃಶ್ಯವನ್ನು ಬಿಟ್ಟು ಆ ಬ್ರಹ್ಮವನ್ನು ಗ್ರಹಿಸಬೇಕು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಲೋಕದಲ್ಲಿ ಕಣ್ಣಿನ ದೋಷದಿಂದ ಶಂಖವು ಹಳದಿಯಾಗಿ ಕಂಡರೂ ಅದು ಬೆಳ್ಳಗಿರುವದೆಂದೇ ಅರಿಯುತ್ತಾರೆ; ಜ್ವರದಿಂದ ಬೆಲ್ಲವು ಕಹಿಯಾಗಿ ಕಂಡರೂ ಅದು ಸಿಹಿಯಾಗಿದೆಯೆಂದೇ ತಿಳಿಯುತ್ತಾರೆ, ಇದರಂತೆ ನಾಮರೂಪಕರ್ಮಗಳೆಂಬ ದೃಶ್ಯಗಳೊಡನೆ ಬ್ರಹ್ಮವು ತೋರಿದರೂ ಅವುಗಳನ್ನು ಬಿಟ್ಟು ಅವನ್ನರಿಯುವ ಆತ್ಮನೇ ಬ್ರಹ್ಮವು ಎಂದು ಗ್ರಹಿಸಬೇಕು.

ಹೀಗೆಂದು ವೇದಾಂತಡಿಂಡಿಮವಿದೆ. 'ತ್ರಯಂ ವಾ ಇದಂ ನಾಮ ರೂಪಂ ಕರ್ಮ' (ಇದೆಲ್ಲವೂ ನಾಮ, ರೂಪ, ಕರ್ಮ- ಎಂಬ ಮೂರೇ, ಬೃ. ೧-೬-೧),

'ತದೇತದಮೃತಂ ಸತ್ಯೇನಚ್ಛನ್ನಂ ಪ್ರಾಣೋ ವಾ ಅಮೃತಂ ನಾಮರೂಪೇ ಸತ್ಯಂ ತಾಭ್ಯಾಮಯಂ ಪ್ರಾಣಶ್ಛನ್ನಃ' (ಈ ಅಮೃತವು ಸತ್ಯದಿಂದ ಮರೆಯಾಗಿರುವದು, ಪ್ರಾಣನೇ ಅಮೃತವು, ನಾಮರೂಪಗಳು ಸತ್ಯ; ಅವೆರಡರಿಂದ ಈ ಪ್ರಾಣನು ಮರೆಯಾಗಿರುವನು' ಬೃ. ೧-೬-೩), 'ಅಥಾತ ಆದೇಶೋ ನೇತಿ ನೇತಿ ನ ಹ್ಯೇತಸ್ಮಾದಿತಿ ನೇತ್ಯನ್ಯತ್ಪರ ಮಸ್ತ್ಯಥ ನಾಮಧೇಯಂ ಸತ್ಯಸ್ಯ ಸತ್ಯಮಿತಿ ಪ್ರಾಣಾ ವೈ ಸತ್ಯಂ ತೇಷಾ ಮೇಷ ಸತ್ಯಮ್' (ಇನ್ನು ಈ ಪರಮಾತ್ಮನ ಉಪದೇಶವು ಹೀಗಿಲ್ಲ , ಹೀಗಿಲ್ಲ . ಹೀಗೆ 'ಹೀಗಿಲ್ಲ' ಎಂಬುದಕ್ಕಿಂತ ಬೇರೊಂದು ಹೆಚ್ಚಿನ ಉಪದೇಶಪ್ರಕಾರವಿಲ್ಲ. ಇನ್ನು ಬ್ರಹ್ಮದ ನಾಮಧೇಯವು: 'ಸತ್ಯದ ಸತ್ಯವು' ಎಂದು. ಪ್ರಾಣಗಳು ಸತ್ಯವಷ್ಟೆ? ಅವುಗಳಿಗೂ ಇದು 'ಸತ್ಯವು', ಬೃ. ೨-೩-೬), ಇಲ್ಲಿ ನಾಮರೂಪಕರ್ಮೋಪಾಧಿಗಳನ್ನು ಬಿಟ್ಟು ಬ್ರಹ್ಮವನ್ನೇ ಪರಮಾರ್ಥವೆಂದು ಗ್ರಹಸಬೇಕೆಂತ ಸ್ಪಷ್ಟವಾಗಿ ಹೇಳಿರುತ್ತದೆ.

## ಬ್ರಹ್ಮಜ್ಞಾನದಿಂದಲೇ ಪರಮಪುರುಷಾರ್ಥ

**ಸುಖಮಲ್ಪಂ ಬಹುಕ್ಲೇಶಂ ವಿಷಯಗ್ರಾಹಿಣಾಂ ನೃಣಾಮ್ ।**
**ಅನನ್ತಂ ಬ್ರಹ್ಮನಿಷ್ಠಾನಾಮಿತಿ ವೇದಾನ್ತಡಿಣ್ಡಿಮಃ ॥೭೭॥**

೭೭. ವಿಷಯವನ್ನು ಗ್ರಹಿಸುವವರಿಗೆ ಸುಖವು ಅಲ್ಪ, ಬಹಳ ಕ್ಲೇಶದಿಂದ ದೊರಕತಕ್ಕದ್ದು . ಬ್ರಹ್ಮನಿಷ್ಠರಿಗೆ ದೊರಕತಕ್ಕದ್ದು ಅನಂತವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಹೊರಗಡೆಗೇ ನೋಡುತಾ ವಿಷಯಗಳನ್ನೇ ಗ್ರಹಿಸುತ್ತಿರುವವರಿಗೆ ಎಲ್ಲಿಯೋ ಸ್ವಲ್ಪ ಸುಖವು ದೊರಕುವದು, ಅದೂ ಬಹಳ ಕ್ಲೇಶದಿಂದ ದೊರಕತಕ್ಕದ್ದು ಈ ವಿಷಯಸುಖವೆಂಬುದೂ ನಿಜವಾಗಿ ಬ್ರಹ್ಮಾನಂದ ಸ್ವರೂಪವಾಗಿಯೇ ಇದ್ದುಕೊಂಡಿದೆ. ಪುಣ್ಯಕರ್ಮದ ಫಲವಾಗಿ ಇಷ್ಟ ವಿಷಯವು ಎದುರಿಗೆ ಬಂದಾಗ ನಿಶ್ಚಲವಾದ ಅಂತಃಕರಣದಲ್ಲಿ ಆ ಸುಖವು ಕಾಣಿಸಿಕೊಳ್ಳುತ್ತದೆ. ಪುಣ್ಯವನ್ನು ಮಾಡುವದಕ್ಕೆ ಇರುವ ಕಷ್ಟವು ಬಹಳ, ಆದರೆ ಅದರಿಂದ ಸಿಕ್ಕುವ ಸುಖವು ಸ್ವಲ್ಪಕಾಲದವರೆಗೆ ಇರತಕ್ಕದ್ದು.

ಇನ್ನು ಬ್ರಹ್ಮನಿಷ್ಠರಿಗೋ ಎಂದರೆ ಅವರು ಆನಂದರೂಪವಾದ ಬ್ರಹ್ಮವನ್ನು ತಮ್ಮ ಸ್ವರೂಪವೆಂದೇ ಅರಿತುಕೊಂಡು ಅದರಲ್ಲಿಯೇ ನೆಲೆನಿಂತಿರುವದರಿಂದ ಅವರಿಗೆ ದೊರಕುವ ಸುಖವು ಎಂದೆಂದಿಗೂ ಇರುತ್ತದೆ. ಏಕೆಂದರೆ ಬ್ರಹ್ಮಕ್ಕೆ ಕಾಲಕೃತವಾದ ಪರಿಚ್ಛೇದವೇ ಇಲ್ಲ .

ಹೀಗೆಂದು 'ಏತಸ್ಯೈವಾನನ್ದ ಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ' (ಈ ಆನಂದದ ಚೂರನ್ನೇ ಮಿಕ್ಕ ಪ್ರಾಣಿಗಳು ಉಪಜೀವಿಸಿಕೊಂಡಿರುವವು, ಬೃ. ೪-೩-೩೨), 'ಸೋऽಶ್ನುತೇ ಸರ್ವಾನ್ ಕಾಮಾನ್ಸಹ' (ಆ ಜ್ಞಾನಿಯು ಎಲ್ಲಾ ಕಾಮಗಳನ್ನೂ ಒಮ್ಮೆಗೇ ಪಡೆದುಕೊಂಡಿರುವನು, ಶ್ವೇ. ೨-೧), 'ಆನನ್ದಂ ಬ್ರಹ್ಮಣೋ ವಿದ್ವಾನ್ನ ಬಿಭೇತಿ ಕುತಶ್ಚನ' (ಬ್ರಹ್ಮದ ಆನಂದವನ್ನು ಅರಿತುಕೊಂಡವನು ಏತಕ್ಕೂ ಅಂಜನು, ತೈ. ೨-೯) ಎಂಬಿವೇ ಮುಂತಾದ ಶ್ರುತಿಗಳು ಸಾರುತ್ತಿರುವವು.

**ಧನೈರ್ವಾ ಧನದೈಃ ಪುತ್ರೈರ್ದಾರಾಗಾರಸಹೋದರೈಃ ।**
**ಧ್ರುವಂ ಪ್ರಾಣಹರೈರ್ದುಃಖಮಿತಿ ವೇದಾನ್ತಡಿಣ್ಡಿಮಃ ॥೭೮॥**

೭೮. ಧನ, ಧನವನ್ನು ಕೊಡುವವರು, ಮಕ್ಕಳು, ಹೆಂಡತಿ, ಮನೆ, ಅಣ್ಣತಮ್ಮಂದಿರು- ಇವರೆಲ್ಲರೂ ಪ್ರಾಣವನ್ನು ಅಪಹರಿಸುವವರೇ ಆಗಿರುವದರಿಂದ ಇವರಿಂದ ದುಃಖವುಂಟಾಗುವದು ನಿಶ್ಚಯ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಧನದಿಂದಲೂ ಪುತ್ರಾದಿಗಳಿಂದಲೂ ಧರ್ಮವೂ ಸುಖವೂ ಸಿಕ್ಕುತ್ತದೆ ಎಂದು ಶಾಸ್ತ್ರಗಳಲ್ಲಿ ಹೇಳಿರುವದು ನಿಜವಾದರೂ ತನ್ಮಯರಾಗಿ ಅವುಗಳಲ್ಲಿಯೇ ಆಸಕ್ತರಾದವರಿಗೆ ಪ್ರಾಣಾಪಹಾರವೇ ಫಲವಾಗುವದು ; ಏಕೆಂದರೆ ಆಗ ಅವರಿಗಾಗಿಯೇ ತಮ್ಮ ಬಾಳನ್ನೆಲ್ಲ ಸವೆಯಿಸಿದಂತೆ ಆಗುತ್ತದೆ.

ಆದ್ದರಿಂದಲೇ 'ಮೃತ್ಯುನಾಪ್ತಂ ಸರ್ವಂ ಮೃತ್ಯುನಾಭಿಪನ್ನಮ್' (ಎಲ್ಲವೂ ಮೃತ್ಯುವಿನಿಂದ ವ್ಯಾಪ್ತವಾಗಿ ವಶೀಕೃತವಾಗಿರುತ್ತದೆ, ಬೃ. ೩-೧-೩), 'ಪುನಃಪುನರ್ವಶಮಾಪದ್ಯತೇ ಮೇ' (ಮತ್ತೆ ಮತ್ತೆ ಯಮನಾದ ನನಗೆ ವಶನಾಗುತ್ತಿರುವನು, ಕ. ೧-೨-೬), 'ತೇ ಮೃತ್ಯೋರ್ಯನ್ತಿ ವಿತತಸ್ಯ ಪಾಶಮ್' (ಅವರು ಹರಡಿಕೊಂಡಿರುವ ಮೃತ್ಯುವಿನ ಬಲೆಗೆ ಬೀಳುವರು, ಕ. ೨-೧-೨)- ಎಂದು ಮುಂತಾಗಿ ವೇದಾಂತವಚನಗಳು ಸಾರುತ್ತಿವೆ.

**ಸುಪ್ತೇರುತ್ಥಾಯ ಸುಪ್ತ್ಯನ್ತಂ ಬ್ರಹ್ಮೈಕಂ ಪ್ರವಿಚಿನ್ತ್ಯತಾಮ್ ।**
**ನಾತಿದೂರೇ ನೃಣಾಂ ಮೃತ್ಯುರಿತಿ ವೇದಾನ್ತಡಿಣ್ಡಿಮಃ ॥೭೯॥**

೭೯. ನಿದ್ರೆಯಿಂದೆದ್ದು ಮತ್ತೆ ನಿದ್ರೆ ಬರುವವರೆಗೂ ಬ್ರಹ್ಮವೊಂದನ್ನೇ ಚಿಂತಿಸುತ್ತಿರಬೇಕು, ಏಕೆಂದರೆ ಜನರಿಗೆ ಮೃತ್ಯುವು ದೂರದಲ್ಲಿಲ್ಲ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಶ್ಲೋಕದ ಅಭಿಪ್ರಾಯವು ಸ್ಪಷ್ಟ. ವಿಷಯಚಿಂತನೆಯಿಂದ ಮೃತ್ಯುವಿನ ಹಿಡಿತಕ್ಕೆ ಸಿಕ್ಕಿದಂತಾಗುವದರಿಂದ ಬ್ರಹ್ಮಚಿಂತನೆಯೊಂದೇ ಅದರಿಂದ ಬಿಡುಗಡೆಯಾಗುವದಕ್ಕೆ ಉಪಾಯವೆಂದು ಭಾವ. ಬ್ರಹ್ಮವನ್ನು ಎಡೆಬಿಡದೆ ಚಿಂತಿಸುತ್ತಿದ್ದರೇ ಬ್ರಹ್ಮಪ್ರಾಪ್ತಿ ಎಂಬುದನ್ನು ಇಲ್ಲಿ ತಿಳಿಸಿದೆ. 'ಯಮೇವೈಷವೃಣತೇ ತೇನ ಲಭ್ಯಃ' (ಪರಮಾತ್ಮನನ್ನೇ ಎಡೆಬಿಡದೆ ಚಿಂತಿಸುತ್ತಾನಲ್ಲ, ಅದರಿಂದಲೇ ಆತನು ಸಿಕ್ಕುವನು, ಮುಂ. ೩-೨-೩) ಎಂಬ ಶ್ರುತಿಡಿಂಡಿಮವು ಇದಕ್ಕೆ ಪ್ರಮಾಣವು.

## ಪ್ರಕರಣಾರ್ಥೋಪಸಂಹಾರ

**ಪಣ್ಣಾಮಪಿ ಕೋಶಾನಾಂ ಮಾಯಾನರ್ಥಾತ್ಮತೋಚಿತಾ ।**
**ತತ್ಸಾಕ್ಷಿಬ್ರಹ್ಮವಿಜ್ಞಾನಾದಿತಿ ವೇದಾನ್ತಡಿಣ್ಡಿಮಃ ॥೮೦॥**

೮೦. ಐದು ಕೋಶಗಳೂ ಮಾಯಾರೂಪವಾಗಿರುವವು, ಅನರ್ಥರೂಪವಾಗಿರುವವು- ಎಂದು ಅವುಗಳ ಸಾಕ್ಷಿಯಾದ ಆತ್ಮನೇ ಬ್ರಹ್ಮವೆಂದು ಅರಿಯುವದರಿಂದ ತೋರುವದು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಐದು ಕೋಶಗಳೂ ಸ್ವಪ್ನದಲ್ಲಿ ತೋರುವ ದೇಹಾದಿಗಳಂತೆ ತೋರುವದರಿಂದಲೂ ಸುಷುಪ್ತಿಯಲ್ಲಿ ಇಲ್ಲವೇ ಇಲ್ಲವಾದ್ದರಿಂದಲೂ ಮಾಯಾರೂಪವೇ ಆಗಿರುತ್ತವೆ. ಅವು ಕರ್ತೃತ್ವಭೋಕ್ತೃತ್ವದ ಅಧ್ಯಾಸಕ್ಕೆ ಹೇತುವಾಗಿರುವದರಿಂದ ಅನರ್ಥರೂಪವಾಗಿಯೂ ಇವೆ. 'ಆತ್ಮೇನ್ದ್ರಿಯಮನೋ ಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ' (ದೇಹ, ಇಂದ್ರಿಯ್ಗಃ ಮನಸ್ಸು- ಇವುಗಳಿಂದೊಡಗೂಡಿರುವವನೇ ಭೋಕ್ತೃವೆಂದು ಬಲ್ಲವರು ಹೇಳುತ್ತಾರೆ, ಕ. ೧-೨-೪) ಎಂಬ ಶ್ರುತಿಯು ಇದಕ್ಕೆ ಆಧಾರವು.

ಇದು ಈ ಐದು ಕೋಶಗಳಿಗೂ ಸಾಕ್ಷಿಯಾಗಿರುವ ಆತ್ಮನೇ ಬ್ರಹ್ಮವೆಂಬ ಅನುಭವವು ಬಂದಾಗ ಸ್ಪಷ್ಟವಾಗುವದು. ನಾನು ನಿತ್ಯಶುದ್ಧಬುದ್ಧ ಮುಕ್ತಸ್ವಭಾವನಾದ ಆತ್ಮನು ಎಂದು ಅರಿತುಕೊಂಡಾಗ ಶರೀರಾದಿಗಳ ಅಧ್ಯಾಸದಿಂದಾಗಿರುವ ಅನರ್ಥಗಳ ಅನುಭವವು ನಿಂತು ಹೋಗುವದು ಎಂದು ಭಾವ.

ಹೀಗೆಂದು 'ಅಥಾऽಯಮಶರೀರೋऽಮೃತಃ' (ಇನ್ನು ಇವನು ಅಶರೀರನು, ಅಮೃತನು, ಬೃ. ೪-೪-೭), 'ಅಶರೀರಂ ವಾ ಸನ್ತಂ ನ ಪ್ರಿಯಾಪ್ರಿಯೇ ಸ್ಪೃಶತಃ' (ಅಶರೀರನಾಗಿರುವವನನ್ನು ಪ್ರಿಯಾಪ್ರಿಯಗಳು ಸೋಂಕವು, ಛಾಂ. ೮-೧೨-೧)- ಇವೇ ಮುಂತಾದ ಶ್ರುತಿಗಳ ಡಂಗುರವಿರುತ್ತದೆ.

**ದಶಮಸ್ಯ ಪರಿಜ್ಞಾನಾನ್ನವಜ್ಞಸ್ಯ ಯಥಾ ಸುಖಮ್ ।**
**ತಥಾ ಜೀವಸ್ಯ ಸತ್ಪ್ರಾಪ್ತೇರಿತಿ ವೇದಾನ್ತಡಿಣ್ಡಿಮಃ ॥೮೧॥**

೮೧. ಹತ್ತನೆಯವನನ್ನು ಅರಿತುಕೊಳ್ಳುವದರಿಂದ ಒಂಬತ್ತು ಮಂದಿಯನ್ನೇ ತಿಳಿದುಕೊಂಡಿದ್ದವನಿಗೆ ಹೇಗೆ ಸುಖವಾಯಿತೋ ಹಾಗೆ ಸದ್ರೂಪಬ್ರಹ್ಮದ ಪ್ರಾಪ್ತಿಯಿಂದ ಜೀವನಿಗೆ (ಸುಖವು) ಆಗುವದು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಹಿಂದೆ ಹೇಳಿದ ದಶಮನ ಕಥೆಯಲ್ಲಿ ಹತ್ತನೆಯವನನ್ನು ಪಡೆದುಕೊಂಡ ಸುಖವು ಹೇಗೆ ಪ್ರಾಪ್ತಪ್ರಾಪ್ತಿಯೋ ಹಾಗೆಯೇ ಬ್ರಹ್ಮವನ್ನರಿತುಕೊಂಡದ್ದರಿಂದಾಗುವ ಸುಖವೂ ಪ್ರಾಪ್ತಪ್ರಾಪ್ತಿಯೇ, ಹೊಸದಾಗಿ ದೊರಕುವದಲ್ಲ . ಆದ್ದರಿಂದ ಅದು ನಿತ್ಯವಾಗಿರುತ್ತದೆ ಎಂದು ಅಭಿಪ್ರಾಯ.

'ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ ಯ ಆತ್ಮಾ ಸರ್ವಾನ್ತರಃ' (ಯಾವದು ನೇರಾಗಿರುವ ಅಪರೋಕ್ಷಬ್ರಹ್ಮವೋ, ಯಾವನು ಎಲ್ಲಕ್ಕೂ ಒಳಗಿರುವ ಆತ್ಮನೋ, ಬೃ. ೩-೪-೧), 'ಅತ್ರ ಬ್ರಹ್ಮ ಸಮಶ್ನುತೇ' (ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ, ಬೃ. ೪-೪-೭), 'ವಿಜ್ಞಾನಮಾನನ್ದಂ ಬ್ರಹ್ಮ ರಾತಿರ್ದಾತುಃ ಪರಾಯಣಂ ತಿಷ್ಠಮಾನಸ್ಯ ತದ್ವಿದಃ' (ವಿಜ್ಞಾನವೂ ಆನಂದವೂ ಆದದ್ದು ಬ್ರಹ್ಮವು; ಧನದ ದಾತೃವಿಗೆ ಪರಾಯಣವು, ಅದನ್ನರಿತುಕೊಂಡ ಬ್ರಹ್ಮನಿಷ್ಠನಿಗೂ ಪರಾಯಣವು, ಬೃ. ೩-೯-೨೮) ಎಂದು ವೇದಾಂತಗಳ ಡಂಗುರವಿದೆ.

**ನವಭ್ಯೋऽಸ್ತಿ ಪರಃ ಪ್ರತ್ಯಙ್ಙೈವ ವೇದ ಪರಂ ಪರಮ್ ।**
**ತದ್ವಿಜ್ಞಾನಾದ್ಭವೇತ್ತುಲ್ಯಾ ಮುಕ್ತಿರ್ವೇದಾನ್ತಡಿಣ್ಡಿಮಃ ॥೮೨॥**

೮೨. ಒಂಬತ್ತು ಜನರಿಗಿಂತ ಹೆಚ್ಚಿನವನು ಇದ್ದನು; ಆದರೆ (ಅಜ್ಞನು)

ಅವನನ್ನು ಅರಿತಿರಲಿಲ್ಲ. (ಹೀಗೆ ಪ್ರತ್ಯಗಾತ್ಮನೂ ಇರುತ್ತಾನೆ, ಆದರೆ ಮೂಢನು ಅವನನ್ನು ಅರಿಯನು.) ಅವನನ್ನು ಅರಿತುಕೊಂಡದ್ದರಿಂದ ಆಗುವ ಮುಕ್ತಿಯು ಸಮಾನವು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಹಿಂದಿನ ಶ್ಲೋಕದ ಅರ್ಥವನ್ನು ಇಲ್ಲಿ ಸ್ಪಷ್ಟಪಡಿಸಿದೆ. 'ಆತ್ಮಾನಂ ಚೇದ್ವಿಜಾನೀಯಾದಯಮಸ್ಮೀತಿ ಪೂರುಷಃ । ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್ ॥' (ಆತ್ಮನನ್ನು ಇವನೇ ನಾನು ಎಂದು ಮನುಷ್ಯನು ಅರಿತುಕೊಂಡರೆ ಏತರ ಇಚ್ಛೆಯಿಂದ ಯಾವ ಕಾಮಕ್ಕಾಗಿ ಶರೀರವನ್ನು ವ್ಯಥೆಗೊಳಿಸಿಯಾನು? ಬೃ. ೪-೪-೧೨), 'ತರತಿ ಶೋಕಮಾತ್ಮವಿತ್ (ಆತ್ಮಜ್ಞನು ಶೋಕವನ್ನು ದಾಟುವನು, ಛಾಂ. ೭-೧-೩) ಮುಂತಾದ ವೇದಾಂತವಚನಗಳ ಡಂಗುರವಿದು.

ನವಾಭಾಸಾನ್ನವ ಜ್ಞಾತ್ವಾ ನವೋಪಾಧೀನ್ನವಾತ್ಮನಾ ।
ಮಿಥ್ಯಾ ಜ್ಞಾತ್ವಾವಶಿಷ್ಟೇ ತು ಮೌನಂ ವೇದಾನ್ತಡಿಣ್ಡಿಮಃ ॥೮೩॥

೮೩. (ದೃಷ್ಟಾಂತದ) ಒಂಬತ್ತು ಜನರಂತಿರುವ ಒಂಬತ್ತು ಉಪಾಧಿಗಳನ್ನು ಒಂಬತ್ತೇ ಎಂದು ತಿಳಿದು, ಮಿಥ್ಯೆಯೆಂದೂ ತಿಳಿದು ಉಳಿದದ್ದರ ವಿಷಯದಲ್ಲಿ ಮೌನವೇ. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ದಶಮನ ಕಥೆಯಲ್ಲಿ ಒಂಬತ್ತು ಜನರಲ್ಲಿ ಯಾರೊಬ್ಬನೂ ಹತ್ತನೆಯವನಲ್ಲವೆಂದು ತಿಳಿದು ಆಪ್ತೋಕ್ತಿಯಿಂದ ತಾನೇ ಹತ್ತನೆಯವನೆಂದು ಅರಿತ ಮೇಲೆ ಮಾಡತಕ್ಕದ್ದೇನೂ ಹೇಗೆ ಇರಲಿಲ್ಲವೋ ಹಾಗೆಯೇ ವಿಷಯ, ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ವಿಜ್ಞಾನ- ಎಂಬೀ ಒಂಬತ್ತನ್ನು ಅನಾತ್ಮವೆಂದೂ ವ್ಯಭಿಚರಿತರೂಪವಾಗಿರುವದರಿಂದ ಮಿಥ್ಯೆಯೆಂದೂ ನಿಶ್ಚಯಿಸಿಕೊಂಡ ಬಳಿಕ ಉಳಿದ ಆತ್ಮನೇ ನಾನು ಎಂಬುದನ್ನು 'ತತ್ತ್ವಮಸಿ' ಮುಂತಾದ ವಾಕ್ಯಗಳಿಂದ ಅರಿತುಕೊಂಡಮೇಲೆ ಮೌನವೇ, ಆತ್ಮಪ್ರಾಪ್ತಿಗಾಗಿ ಮತ್ತೆ ಮಾಡತಕ್ಕದ್ದು ಏನೂ ಉಳಿದಿರುವದಿಲ್ಲ. ಏಕೆಂದರೆ ಆ ತತ್ತ್ವವು ನಿತ್ಯಪ್ರಾಪ್ತವಾಗಿರುತ್ತದೆ.

'ತಸ್ಮಾದ್ಬ್ರಹ್ಮಣಃ ಪಾಣ್ಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್ ಬಾಲ್ಯಂ ಚ ಪಾಣ್ಡಿತ್ಯಂ

ಚ ನಿರ್ವಿದ್ಯಾಥ ಮುನಿರಮೌನಂ ಚ ಮೌನಂ ಚ ನಿರ್ವಿದ್ಯಾಥ ಬ್ರಾಹ್ಮಣಃ (ಆದ್ದರಿಂದ ಬ್ರಾಹ್ಮಣನಾದವನು ಪಾಂಡಿತ್ಯವನ್ನು ನಿಃಶೇಷವಾಗಿ ಮಾಡಿಕೊಂಡು ಬಾಲ್ಯದಿಂದ ನಿಲ್ಲಲೆಳಸಬೇಕು. ಬಾಲ್ಯವನ್ನೂ ಪಾಂಡಿತ್ಯವನ್ನೂ ಮುಗಿಸಿಕೊಂಡು ಇನ್ನು ಮುನಿಯಾಗಬೇಕು. ಮೌನವನ್ನೂ ಅಮೌನವನ್ನೂ ಮುಗಿಸಿದರೆ ಇನ್ನು ಬ್ರಾಹ್ಮಣನು, ಬೃ. ೩-೫-೧)- ಮುಂತಾದ ವೇದಾಂತಗಳ ಡಂಗುರವಿದೆ.

**ಪರಮೇ ಬ್ರಹ್ಮಣಿ ಸ್ವಸ್ಮಿನ್ ಪ್ರವಿಲಾಪ್ಯಾಖಿಲಂ ಜಗತ್ ।**
**ಗಾಯನ್ನದ್ವೈತಮಾತ್ಮಾನಮಾಸ್ತೇ ವೇದಾನ್ತಡಿಣ್ಡಿಮಃ ॥೮೪॥**

೮೪. ಪರಬ್ರಹ್ಮವಾದ ತನ್ನಲ್ಲಿ ಜಗತ್ತೆಲ್ಲವನ್ನೂ ಲಯಗೊಳಿಸಿ ಅದ್ವೈತಾತ್ಮನನ್ನು ಗಾನಮಾಡುತ್ತಾ ಇರುವನು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ನಿತ್ಯಶುದ್ಧನಾದ ತನ್ನ ಆತ್ಮನೇ ಪರಮಬ್ರಹ್ಮವು. ಅದರಲ್ಲಿಯೇ ಮಿಕ್ಕದ್ದೆಲ್ಲವೂ ಅಧ್ಯಾರೋಪಿತವಾಗಿರುವದರಿಂದ, ಅದಕ್ಕಿಂತ ವ್ಯತಿರಿಕ್ತವಾಗಿ ಏನೊಂದೂ ಇಲ್ಲ ಎಂದು ಅರಿತುಕೊಳ್ಳುವದೇ ಜಗತ್ತಿನ ಪ್ರವಿಲಯವು. ಪೃಥಿವ್ಯಾದಿಗಳು ತಮ್ಮತಮ್ಮ ಕಾರಣವಾದ ಅಬಾದಿಗಳಿಗಿಂತ ಬೇರೆಯಿಲ್ಲ; ಅವು ಯಾವವೂ ಪರಮಕಾರಣವಾದ ಬ್ರಹ್ಮಕ್ಕಿಂತ ಬೇರೆಯಿಲ್ಲ. ಇದಕ್ಕೆ 'ವಾಚಾರಮ್ಭಣಂ ವಿಕಾರೋ ನಾಮಧೇಯಮ್' (ವಿಕಾರವು ವಾಕ್ಕಿನಿಂದಾದದ್ದು, ನಾಮಮಾತ್ರವು, ಛಾಂ. ೬-೧-೪), 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ' (ಇದೇ ಎಲ್ಲಕ್ಕೂ ಆತ್ಮವು, ಅದೇ ಸತ್ಯವು, ಅದೇ ಆತ್ಮನು; ನೀನು ಅದಾಗಿರುವೆ, ಛಾಂ. ೬-೮-೭), 'ಇದಂ ಸರ್ವಂ ಯದಯಮಾತ್ಮಾ' (ಇದೆಲ್ಲವೂ ಈ ಆತ್ಮನೆಂಬುದೇ, ಬೃ. ೨-೪-೬)- ಮುಂತಾದ ಶ್ರುತಿಗಳೇ ಪ್ರಮಾಣವು.

ಅಥವಾ ಎಚ್ಚರದ ಪ್ರಪಂಚವು ಕನಸಿನಲ್ಲಿಲ್ಲ. ಕನಸಿನ ಪ್ರಪಂಚವು ಎಚ್ಚರದಲ್ಲಿಲ್ಲ; ಸುಷುಪ್ತಿಯಲ್ಲಿ ದೃಶ್ಯಸಾಮಾನ್ಯವೇ ಆತ್ಮನಲ್ಲಿ ಲಯವಾಗಿರುತ್ತದೆ. ಹೀಗೆ ನೋಡಿದರೆ ಆತ್ಮನಿಗಿಂತ ಬೇರೆಯಾಗಿ ಜಗತ್ತಿಗೆ ಇರವೇ ಇಲ್ಲ ಎಂಬ ತಿಳಿವಳಿಕೆಯಿಂದ ಜಗತ್ತೆಲ್ಲವನ್ನೂ ಆತ್ಮನಲ್ಲಿ ಲಯಮಾಡಿಕೊಂಡು- ಎಂದಾದರೂ ಮೊದಲನೆಯ ಶ್ಲೋಕಾರ್ಧಕ್ಕೆ ಅರ್ಥವನ್ನು ಮಾಡಬಹುದು.

ಹೀಗೆ ಜ್ಞಾನಿಯು ಪ್ರಪಂಚವನ್ನು ಅದ್ವೈತಾತ್ಮನಲ್ಲಿ ಲಯಮಾಡಿಕೊಂಡು ಅದ್ವೈತಾತ್ಮನನ್ನೇ ಗಾನಮಾಡುತ್ತಾ ಇದ್ದುಕೊಂಡಿರುವನು. ಈ ವಿಷಯಕ್ಕೆ 'ಏತತ್ಸಾಮ

ಗಾಯನ್ನಾಸ್ತೇ ಅಹಮನ್ನಮಹಮನ್ನಮ್...' (ನಾನೇ ಅನ್ನವು, ನಾನೇ ಅನ್ನವು, ನಾನೇ ಅನ್ನಾದನು, ನಾನೇ ಅನ್ನಾದನು- ಎಂಬೀ ಸಾಮವನ್ನು ಗಾನಮಾಡುತ್ತಾ ಇರುವನು, ತೈ. ೩-೯) ಎಂಬಿದೇ ಮುಂತಾದ ವೇದಾಂತಗಳ ಡಂಗುರವಿದೆ.

**ಪ್ರತಿಲೋಮಾನುಲೋಮಾಭ್ಯಾಂ ವಿಶ್ವಾರೋಪಾಪವಾದಯೋಃ ।**
**ಚಿನ್ತನೇ ಶಿಷ್ಯತೇ ತತ್ತ್ವಮಿತಿ ವೇದಾನ್ತಡಿಣ್ಡಿಮಃ ॥೮೫॥**

೮೫. ಪ್ರತಿಲೋಮಾನುಲೋಮಗಳಿಂದ ವಿಶ್ವದ ಅಧ್ಯಾರೋಪಾಪವಾದಗಳನ್ನು ಚಿಂತನೆಮಾಡುತ್ತಿದ್ದರೆ ತತ್ತ್ವವು ಉಳಿದುಕೊಳ್ಳುವದು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಹಿಂದಿನ ಶ್ಲೋಕದಲ್ಲಿ ತಿಳಿಸಿಕೊಟ್ಟಿರುವ ಅನಾತ್ಮಪ್ರಲಯದ ಕ್ರಮವನ್ನು ಇಲ್ಲಿ ವಿಶದಗೊಳಿಸಲಾಗಿದೆ. 'ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ' (ಆ ಈ ಆತ್ಮನಿಂದ ಆಕಾಶವುಂಟಾಯಿತು, ತೈ. ೨-೧) ಎಂಬ ಶ್ರುತಿಯಲ್ಲಿ ಹೇಳಿರುವದು ಅನುಲೋಮಕ್ರಮದಿಂದ ಉತ್ಪತ್ತಿ- ಅದಕ್ಕೆ ವಿಪರೀತವಾಗಿ ಎಂದರೆ ಪೃಥಿವಿಯನ್ನು ಅಪ್ಪಿನಲ್ಲಿ, ಅಪ್ಪನ್ನು ತೇಜಸ್ಸಿನಲ್ಲಿ - ಈ ಪ್ರತಿಲೋಮಕ್ರಮದಲ್ಲಿ ಲಯಮಾಡಿಕೊಳ್ಳಬೇಕು. 'ಜಗತ್ಪ್ರತಿಷ್ಠಾ ದೇವರ್ಷೇ ಪೃಥಿವ್ಯಪ್ಸು ಪ್ರಲೀಯತೇ । ಜ್ಯೋತಿಷ್ಯಾಪಃ ಪ್ರಲೀಯನ್ತೇ ಜ್ಯೋತಿರ್ವಾಯೌ ಪ್ರಲೀಯತೇ । ಖೇ ವಾಯುಃ ಪ್ರಲಯಂ ಯಾತಿ ಮನಸ್ಯಾಕಾಶಮೇವ ಚ । ಮನೋ ಹಿ ಪರಮಂ ಭೂತಂ ತದವ್ಯಕ್ತೇ ಪ್ರಲೀಯತೇ । ಅವ್ಯಕ್ತಂ ಪುರುಷೇ ಬ್ರಹ್ಮನ್ನಿರ್ಗುಣೇ ಪ್ರವಿಲೀಯತೇ । ನಾಸ್ತಿ ತಸ್ಮಾತ್ಪರತರಃ ಪುರುಷಾದ್ವೈ ಸನಾತನಾತ್ ॥' (ಎಲೈ ದೇವರ್ಷಿಯಾದ ನಾರದನೆ, ಎಲ್ಲಕ್ಕೂ ಪ್ರತಿಷ್ಠೆಯಾಗಿರುವ ಪೃಥ್ವಿಯು ಅಪ್ಪಿನಲ್ಲಿ ಪ್ರಲಯವಾಗುವದು; ಅಪ್ಪು ಜ್ಯೋತಿಯಲ್ಲಿ ಲಯವಾಗುವದು; ಜ್ಯೋತಿಯು ವಾಯುವಿನಲ್ಲಿ ಪ್ರಲಯವಾಗುವದು; ವಾಯು ಆಕಾಶದಲ್ಲಿ ಪ್ರಲಯವಾಗುವದು; ಆಕಾಶವು ಮನಸ್ಸಿನಲ್ಲಿ ಲಯವಾಗುವದು. ಪರಮಸೂಕ್ಷ್ಮವಾದ ಮನಸ್ಸು ಅವ್ಯಕ್ತದಲ್ಲಿ ಲಯವಾಗುವದು. ಎಲೈ ಬ್ರಾಹ್ಮಣನೇ, ಅವ್ಯಕ್ತವು ನಿರ್ಗುಣನಾದ ಪುರುಷನಲ್ಲಿ ಪ್ರಲಯವಾಗಿಬಿಡುವದು. ಆ ಸನಾತನಪುರುಷನಿಗಿಂತ ಮುಂದಿನ ತತ್ತ್ವವು ಇನ್ನಿಲ್ಲ, ಮೋ. ಧ. ೩೩೮-೨೯, ३೦, ೩೧) ಎಂದು ಮುಂತಾಗಿ ಸ್ಮೃತಿಯಲ್ಲಿ ತಿಳಿಸಿರುವ ರೀತಿಯಿಂದ ಪ್ರಪಂಚವನ್ನು ಲಯಮಾಡಿಕೊಳ್ಳಬೇಕು- ಎಂದರ್ಥ.

ಅಥವಾ 'ಏಷ ಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಮ್' (ಈತನೇ ಸರ್ವಕ್ಕೂ ಯೋನಿಯು; ಭೂತಗಳಿಗೂ ಉತ್ಪತ್ತಿಪ್ರಲಯ ಕಾರಣನಲ್ಲವೆ? ಮಾಂ. ೬) ಎಂದು ಮುಂತಾಗಿ ಶ್ರುತಿಯಲ್ಲಿ ತಿಳಿಸಿಕೊಟ್ಟಿರುವ ಪ್ರಕಾರದಿಂದ ಆತ್ಮನಿಂದಲೇ ಎಲ್ಲವೂ ಹುಟ್ಟಿ ಎಚ್ಚರಕನಸುಗಳಲ್ಲಿ ಕಾಣುತ್ತಿರುವದು; ತನಿನಿದ್ರೆಯಲ್ಲಿ ಅದೆಲ್ಲವೂ ಆತ್ಮನಲ್ಲಿಯೇ ಲಯವಾಗುವದು- ಎಂದು ಅನುಲೋಮವಾಗಿಯೂ ಪ್ರತಿಲೋಮ ವಾಗಿಯೂ ವಿಶ್ವದ ಅಧ್ಯಾರೋಪಾಪವಾದಗಳನ್ನು ಚಿಂತನೆಮಾಡುತ್ತಿದ್ದರೆ ತತ್ತ್ವವೇ ಉಳಿದುಕೊಳ್ಳುವದು. ಇಲ್ಲಿ ಮಿಥ್ಯಾರೂಪವಾದ ಜಗತ್ತು ತೋರಿಕೊಳ್ಳುವ ಕ್ರಮವನ್ನು ಚಿಂತಿಸುವದೇ ಅಧ್ಯಾರೋಪವು; ಆ ತೋರಿಕೆಯು ಬಾಧಿತವಾಗುವದರ ಚಿಂತೆಯೇ ಅಪವಾದವು. ಹೇಗೆ ಹಗ್ಗದಲ್ಲಿ ಹಾವು ತೋರಿಕೊಳ್ಳುವ ಬಗೆಯನ್ನೂ ಅದು ಬಾಧಿತವಾಗುವ ಬಗೆಯನ್ನೂ ಮನಸ್ಸಿನಲ್ಲಿ ಹೊರಳಾಡಿಸಿದರೆ ಹಗ್ಗವೊಂದೇ ಪರಮಾರ್ಥತತ್ತ್ವವಾಗಿ ಉಳಿದುಕೊಳ್ಳುವದೋ ಹಾಗೆಯೇ ಇಲ್ಲಿಯೂ ಪ್ರಪಂಚದ ಅಧ್ಯಾರೋಪ, ಅಪವಾದ- ಇವುಗಳನ್ನು ಚಿಂತನೆ ಮಾಡುವದರಿಂದ ಅದ್ವಿತೀಯತತ್ತ್ವವೊಂದೇ ಉಳಿದುಕೊಳ್ಳುವದು- ಎಂದು ಅಭಿಪ್ರಾಯ.

'ಅಸ್ತೀತ್ಯೇವೋಪಲಬ್ಧಸ್ಯ ತತ್ತ್ವಭಾವಃ ಪ್ರಸೀದತಿ' (ಇದೆಯೆಂದೇ ಅರಿತುಕೊಂಡರೆ ಅದರ ತತ್ತ್ವಭಾವವು ಪ್ರಸನ್ನವಾಗುವದು, ಕ. ೨-೩-೧೩) ಎಂದು ಮುಂತಾದ ಶ್ರುತಿಡಿಂಡಿಮದಿಂದ ಹೀಗೆಂದು ಏರ್ಪಡುತ್ತದೆ.

**ನಾಮರೂಪಾಭಿಮಾನಃ ಸ್ಯಾತ್ಸಂಸಾರಃ ಸರ್ವದೇಹಿನಾಮ್ ।**
**ಸಚ್ಚಿದಾನನ್ದದೃಷ್ಟಿಃ ಸ್ಯಾನ್ಮುಕ್ತಿರ್ವೇದಾನ್ತಡಿಣ್ಡಿಮಃ ॥೮೬॥**

೮೬. ಸರ್ವಜೀವರುಗಳಿಗೂ ನಾಮರೂಪಾಭಿಮಾನವೇ ಸಂಸಾರವಾಗಿರು ವದು; ಸಚ್ಚಿದಾನಂದದೃಷ್ಟಿಯೇ ಮುಕ್ತಿಯಾಗಿರುವದು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಆತ್ಮನಿಗೆ ಸಂಸಾರಬಂಧವಾಗಲಿ ಅದರಿಂದ ಬಿಡುಗಡೆಯಾಗಲಿ ನಿಜವಾಗಿಯೇ ಆಗುವದಿಲ್ಲ, ದೃಷ್ಟಿಭೇದದಿಂದಲೇ ಬಂಧಮುಕ್ತಿಗಳು ತೋರುತ್ತಿರುವವು. ಹೇಗೆಂದರೆ: ನಾಮರೂಪಗಳು ಇವೆ ಎಂಬ ದೃಷ್ಟಿಯಿಂದ ಅವುಗಳಲ್ಲಿ ಅಭಿಮಾನವಿರುವದೆಂಬ

ಸಂಸಾರವು ಕಾಣಿಸಿಕೊಳ್ಳುವದು, ಆ ಮಿಥ್ಯಾದೃಷ್ಟಿಯು ಹೋಗುವದರಿಂದ ಸಚ್ಚಿದಾನಂದ ದೃಷ್ಟಿಯನ್ನು ಅವಲಂಬಿಸಿದರೆ ಮುಕ್ತಿಯು ತೋರುವದು.

'ಸ್ವೇನ ರೂಪೇಣಾಭಿನಿಷ್ಪದ್ಯತೇ' (ತನ್ನ ರೂಪದಿಂದ ಸಿದ್ಧನಾಗುತ್ತಾನೆ, ಛಾಂ. ೮-೧೨-೩) ಎಂದಲ್ಲವೆ ವೇದಾಂತದ ಡಂಗುರವು?

**ಸಚ್ಚಿದಾನನ್ದಸತ್ಯತ್ವೇ ಮಿಥ್ಯಾತ್ವೇ ನಾಮರೂಪಯೋಃ ।**
**ವಿಜ್ಞಾತೇ ಕಿಮಿದಂ ಜ್ಞೇಯಮಿತಿ ವೇದಾನಡಿಣಿಮಃ ॥೮೭॥**

೮೭. ಸಚ್ಚಿದಾನಂದಸ್ವರೂಪವು ಸತ್ಯವೆಂದೂ ನಾಮರೂಪಗಳು ಮಿಥ್ಯೆಯೆಂದೂ ತಿಳಿದುಕೊಂಡರೆ ಇನ್ನು ತಿಳಿದುಕೊಳ್ಳಬೇಕಾಗಿರುವದೆಂಬಿದು ಏನಿದೆ? ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಇಷ್ಟೇ ತಿಳಿಯಬೇಕಾದದ್ದು, ಮತ್ತೇನೂ ಇಲ್ಲ- ಎಂದರ್ಥ 'ಆತ್ಮನೋ ವಾ ಅರೇ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನೇದಗ್ಂ ಸರ್ವಂ ವಿದಿತಮ್' (ಎಲೆ, ಆತ್ಮನನ್ನೇ ಕಂಡುಕೊಂಡರೆ, ಶ್ರವಣಮಾಡಿದರೆ, ಮನನಮಾಡಿದರೆ, ನಿದಿಧ್ಯಾಸನದಿಂದ ಅರಿತುಕೊಂಡರೆ ಇದೆಲ್ಲವನ್ನೂ ಅರಿತಂತಾಯಿತು, ಬೃ. ೨-೪-೫), 'ಏತಾವದ್ಧ್ಯನುಶಾಸನಮ್' (ಇಷ್ಟೇ ತಿಳಿಸಿಕೊಡಬೇಕಾದದ್ದು, ಕ. ೨-೩-೧೫), 'ನಾತಃ ಪರಮಸ್ತಿ' (ಇದಕ್ಕಿಂತ ಹೆಚ್ಚಿನದೇನೂ ಇಲ್ಲ, ಪ್ರ. ೬-೭) ಇವೇ ಮುಂತಾದ ವೇದಾಂತಗಳಲ್ಲಿ ಹೀಗೆಂದು ಸಾರಿಸಾರಿ ಹೇಳಿರುತ್ತದೆ.

**ಸಾಲಮ್ಬನಂ ನಿರಾಲಮ್ಬಂ ಸರ್ವಾಲಮ್ಬಾವಲಮ್ಬಿತಮ್ ।**
**ಅವಲಮ್ಬೇನಾಖಿಲಾಲಮ್ಬ ಇತಿ ವೇದಾನ್ತಡಿಣ್ಡಿಮಃ ॥೮೮॥**

೮೮. ಸಾಲಂಬನವೂ ನಿರಾಲಂಬವೂ ಆಗಿರುವ ಆಲಂಬನೆಗಳಿಗೆಲ್ಲ ಅವಲಂಬನೆಯಾಗಿರುವ, ಬ್ರಹ್ಮವನ್ನು ಆಶ್ರಯಿಸಿದರೆ ಎಲ್ಲವನ್ನೂ ಅವಲಂಬಿಸಿದಂತೆ ಆಯಿತು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಆಲಂಬನವು ಎಂದರೆ ಮತ್ತೊಂದನ್ನು ಆಶ್ರಯಿಸಿಕೊಂಡೇ ಬಾಳಬೇಕಾಗಿರುವ ಜಗತ್ತು, ಅದರೊಡನಿರುವದರಿಂದ ಬ್ರಹ್ಮವು ಸಾಲಂಬನವೆನಿಸುವದು. ಏಕೆಂದರೆ ಬ್ರಹ್ಮದ

ಆಲಂಬನೆಯಿಲ್ಲದೆ ಜಗದ್ಭ್ರಾಂತಿಯು ಹುಟ್ಟಲಾರದು. ಆದರೆ ಆ ಬ್ರಹ್ಮವು ತಾನುತಾನು ನಿರಾಲಂಬನವು, ಎಂದರೆ ಮತ್ತೊಂದನ್ನು ಆಶ್ರಯಿಸಿಕೊಂಡಿರುವದಿಲ್ಲ, 'ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ ಯದಿ ವಾ ನ ಮಹಿಮ್ನಿ' (ಭಗವಂತನೆ ಆ ಪರಮಾತ್ಮನು ಏತರ ಮೇಲೆ ನಿಂತಿರುವನು? ತನ್ನ ಮಹಿಮೆಯಮೇಲೆ, ಅಥವಾ ಮಹಿಮೆಯ ಮೇಲೂ ಅಲ್ಲ, ಛಾಂ. ೭-೨೪-೧) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.

ಇದೂ ಅಲ್ಲದೆ ಈ ಬ್ರಹ್ಮವು ಆಲಂಬನೆಗಳಿಗೆಲ್ಲ ಅವಲಂಬನೆಯಾಗಿರುತ್ತದೆ. ಎಲ್ಲರಿಗೂ ಆಶ್ರಯವಾಗಿರುವ ಇಂದ್ರಾದಿದೇವತೆಗಳಿಗೂ ಆಶ್ರಯವಾಗಿರುತ್ತದೆ. 'ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ' (ಯಾವದರ ಮೇಲೆಯೇ ದೇವತೆಗಳೆಲ್ಲರೂ ಅವಲಂಬಿಸಿಕೊಂಡು ಕುಳಿತಿರುವರೋ, ಶ್ವೇ. ೪-೮) ಎಂಬ ಶ್ರುತಿಯು ಹೀಗೆಂದು ಹೇಳುತ್ತಿದೆ.

ಇಂಥ ಎಲ್ಲ ಆಶ್ರಯಗಳಿಗೂ ಆಲಂಬನವಾದ ಬ್ರಹ್ಮವೇ ನಾನು ಎಂದು ಅದನ್ನು ಅವಲಂಬಿಸಿದರೆ ಎಲ್ಲವನ್ನೂ ಅವಲಂಬಿಸಿದಂತೆ ಆಯಿತು. ಆದ್ದರಿಂದ ಬೇರೆಬೇರೆಯ ಒಂದೊಂದು ದೇವತೆಯನ್ನು ಆಶ್ರಯಿಸುವದನ್ನು ಬಿಟ್ಟು ಸರ್ವಾಶ್ರಯವಾಗಿರುವ ಬ್ರಹ್ಮವನ್ನೇ ಆಶ್ರಯಿಸಬೇಕು ಎಂದು ಅಭಿಪ್ರಾಯ. 'ತದ್ಯದಿದಮಾಹುರಮುಂ ಯಜಾಮುಂ ಯಜ್ಯೇತ್ಯೇಕೈಕಂ ದೇವಮೇತಸ್ಯೈವ ಸಾ ವಿಸೃಷ್ಟಿರೇಷ ಉ ಹ್ಯೇವ ಸರ್ವೇ ದೇವಾಃ' (ಈ ದೇವತೆಯನ್ನು ಪೂಜಿಸಿರಿ, ಇದನ್ನು ಪೂಜಿಸಿರಿ- ಎನ್ನುವರಲ್ಲ, ಎಲ್ಲವೂ ಈತನ ವಿವಿಧಸೃಷ್ಟಿಯೇ. ಈತನೇ ಎಲ್ಲಾ ದೇವತೆಗಳೂ ಆಗಿರುತ್ತಾನೆ, ಬೃ. ೧-೪-೬)- ಎಂಬಿದೇ ಮುಂತಾದ ವೇದಾಂತಡಿಂಡಿಮಗಳು ಹಾಗೆಂದು ಸಾರುತ್ತಿವೆ.

**ನ ಕುರ್ಯಾನ್ನ ವಿಜಾನೀಯಾತ್ಸರ್ವಂ ಬ್ರಹ್ಮೇತ್ಯನುಸ್ಮರನ್ ।**
**ಯಥಾ ಸುಖಂ ತಥಾ ತಿಷ್ಠೇದಿತಿ ವೇದಾನ್ತಡಿಣ್ಡಿಮಃ ॥೮೯॥**

೮೯. ಏನನ್ನೂ ಮಾಡತಕ್ಕದ್ದಿಲ್ಲ, ಏನನ್ನೂ ತಿಳಿಯತಕ್ಕದ್ದು ಇಲ್ಲ; ಎಲ್ಲವೂ ಬ್ರಹ್ಮವೇ ಎಂದು ಭಾವಿಸುತ್ತಾ ಹೇಗೆ ಸುಖವೋ ಹಾಗೆ ಇರಬಹುದು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಎಲ್ಲವನ್ನೂ ಬ್ರಹ್ಮವೆಂದು ಅರಿತುಕೊಂಡಮೇಲೆ ಜ್ಞಾನಿಯ ವ್ಯವಹಾರವು ಹೇಗಿರುತ್ತದೆ?- ಎಂಬ ಪ್ರಶ್ನೆಗೆ ಇದು ಉತ್ತರ. ಅವನಿಗೆ ಹೊರಗಿನ ವ್ಯವಹಾರವು ಹೀಗೆ

ಇರಬೇಕೆಂಬ ನಿಯಮವೇನೂ ಇರುವದಿಲ್ಲ. ಅವನು ಯಾವಾಗಲೂ ಆತ್ಮರತಿಯಾಗಿಯೇ ಇರುತ್ತಾನೆ ಎಂದು ಶ್ಲೋಕದ ಅಭಿಪ್ರಾಯ.

ಆದ್ದರಿಂದಲೇ 'ಕಾಮಾನ್ನೀ ಕಾಮರೂಪ್ಯನುಸಂಚರನ್' (ತನಗೆ ಬೇಕಾದ ಆಹಾರವನ್ನುಣ್ಣುತ್ತಾ ತನಗೆ ಇಷ್ಟವಾದಂತೆ ರೂಪವನ್ನು ಧರಿಸಿ ಸಂಚರಿಸುತ್ತಾ... ತೈ. ೩-೧೦) 'ಆತ್ಮೈವೇದಂ ಸರ್ವಮಿತಿ ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನಾತ್ಮರತಿರಾತ್ಮಕ್ರೀಡ ಆತ್ಮ ಮಿಥುನ ಆತ್ಮಾನನ್ದಃ ಸ ಸ್ವರಾಡ್ಭವತಿ' (ಆ ಈ ಜ್ಞಾನಿಯು ಹೀಗೆ ಕಂಡುಕೊಂಡು ಹೀಗೆ ಚಿಂತಿಸುತ್ತಾ, ಹೀಗೆ ಅರಿತುಕೊಳ್ಳುತ್ತಾ, ಆತ್ಮರತಿಯೂ ಆತ್ಮಕ್ರೀಡನೂ ಆತ್ಮನಲ್ಲಿ ಬೆರೆತವನೂ ಆತ್ಮಾನಂದವುಳ್ಳವನೂ ಆಗಿರುತ್ತಾನೆ. ಅವನು ಸ್ವರಾಜನಾಗಿರುತ್ತಾನೆ, ಛಾಂ. ೭-೨೫-೨) ಎಂದು ಶ್ರುತಿಗಳ ಡಂಗುರವು.

**ಸ್ವಕರ್ಮಪಾಶವಶಗಃ ಪ್ರಾಜ್ಞೋಽನ್ಯೋ ವಾ ಜನೋ ಧ್ರುವಮ್ ।**
**ಪ್ರಾಜ್ಞಃ ಸುಖಂ ನಯೇತ್ಕಾಲಮಿತಿ ವೇದಾನ್ತಡಿಣ್ಡಿಮಃ ॥೯೦॥**

೯೦. ಜ್ಞಾನಿಯಾಗಲಿ ಮತ್ತೊಬ್ಬನಾಗಲಿ ನಿಶ್ಚಯವಾಗಿ ತಮ್ಮ ತಮ್ಮ ಕರ್ಮದ ಪಾಶಕ್ಕೆ ವಶರಾಗಿರುವರು. ಜ್ಞಾನಿಯಾದರೆ ಸುಖವಾಗಿ ಕಾಲವನ್ನು ಕಳೆಯುತ್ತಿರುವನು. ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಅಜ್ಞನಾದವನು ಕ್ಲೇಶಪಡುತ್ತಿರುವನು, ಜ್ಞಾನಿಯಾದರೋ ಪ್ರಾರಬ್ಧ ಕರ್ಮದ ವಶದಿಂದ ಬಂದೊದಗಿದ್ದನ್ನು ಅನುಭವಿಸುತ್ತಾ ಸುಖವಾಗಿ ಕಾಲವನ್ನು ಕಳೆಯುತ್ತಿರುವನು ಎಂದರ್ಥ.

ಇದೂ ವ್ಯವಹಾರದ ದೃಷ್ಟಿಯಿಂದ ಹೇಳಿದ ಮಾತು. ಪರಮಾರ್ಥ ದೃಷ್ಟಿಯಿಂದ ನೋಡಿದರೆ ಜ್ಞಾನಿಯು ನಿಜವಾಗಿ ಏನನ್ನೂ ಮಾಡುತ್ತಿರುವದಿಲ್ಲ, ಕರ್ಮಫಲವನ್ನು ಅನುಭವಿಸುತ್ತಿರುವದೂ ಇಲ್ಲ. 'ಪುಣ್ಯಕರ್ಮದಿಂದ ಹೆಚ್ಚಿಗೆಯೂ ಇಲ್ಲ' (೨೮) ಎಂದು ಮುಂತಾಗಿ ಈ ವಿಷಯವನ್ನು ಹಿಂದೆಯೇ ಹೇಳಿರುತ್ತದೆ.

**ನ ವಿದ್ವಾಂಸಂ ತಪೇಚ್ಚಿತ್ತಂ ಕರಣೇಽಕರಣೇ ಧ್ರುವಮ್ ।**
**ಸರ್ವಮಾತ್ಮೇತಿ ವಿಜ್ಞಾನಾದಿತಿ ವೇದಾನ್ತಡಿಣ್ಡಿಮಃ ॥೯೧॥**

೯೧. ಕರ್ಮವನ್ನು ಮಾಡಿದರು ಮಾಡದಿದ್ದರೂ ಚಿತ್ತವು ಜ್ಞಾನಿಯನ್ನು

ತಾಪಗೊಳಿಸದು. ಏಕೆಂದರೆ ಅವನು ಎಲ್ಲವೂ ಪರಮಾತ್ಮನೇ ಎಂದು ತಿಳಿದುಕೊಂಡಿರುವನು. ಹೀಗೆಂಬುದು ವೇದಾಂತಗಳ ಡಂಗುರವು.

### ವಿವರಣೆ

ಪಾಪವನ್ನು ಮಾಡಿದ್ದರಾಗಲಿ ಪುಣ್ಯವನ್ನು ಮಾಡದಿದ್ದರಾಗಲಿ 'ಅಯ್ಯೋ, ನಾನೇಕೆ ಪುಣ್ಯಕರ್ಮವನ್ನು ಮಾಡಲಿಲ್ಲ! ಪಾಪವನ್ನೇಕೆ ಮಾಡಿದೆನು? ಸತ್ತಮೇಲೆ ನನಗೇನು ಗತಿಯಾಗುವದೋ!' ಎಂದು ಚಿತ್ತವು ಜ್ಞಾನಿಯನ್ನು ತಾಪಗೊಳಿಸದು. ಅದೇಕೆ? ಎಂದರೆ ಪಾಪ, ಪುಣ್ಯ, ಅವುಗಳ ಫಲ- ಎಲ್ಲವೂ ಆತ್ಮನೇ ಎಂದು ಅವನು ಅರಿತುಕೊಂಡುಬಿಟ್ಟಿರುತ್ತಾನೆ. ಜ್ಞಾನಕ್ಕಿಂತ ಮೊದಲು ಅವನು ಮಾಡಿದ್ದ ಅಥವಾ ಮಾಡದೆ ಇದ್ದ ಕರ್ಮವು ಅವನನ್ನು ತಾಪಗೊಳಿಸುವದಿಲ್ಲ. ಜ್ಞಾನವುಂಟಾದ ಮೇಲಂತೂ ಅವನಿಗೆ ಕರ್ತೃತ್ವಾಭಿಮಾನವೇ ಇರುವದಿಲ್ಲವಾಗಿ ಅವನನ್ನು ತಾಪಗೊಳಿಸದು ಎಂದು ಭಾವ. ಜ್ಞಾನಿಯು ಯಥೇಚ್ಛೆಯಿಂದ ನಡೆಯುವನೆಂದೇನೂ ಇದರ ಅಭಿಪ್ರಾಯವಲ್ಲ, ಏಕೆಂದರೆ ಸ್ವೇಚ್ಛೆಯಿಂದ ನಡೆಯುವದು ಕಾಮಿಗಳ ವಿಷಯ. ಜ್ಞಾನಿಗೆ ಅವಿದ್ಯೆ, ಕಾಮ, ಕರ್ಮ- ಎಲ್ಲವೂ ಮಿಥ್ಯೆಯಾಗಿ ಪರಮಾರ್ಥದೃಷ್ಟಿಯಿಂದ ಆತ್ಮಸ್ವರೂಪವೇ ಆಗಿಬಿಟ್ಟಿರುತ್ತದೆ. ಆದ್ದರಿಂದ ಅವನು ಸ್ವೇಚ್ಛಾಚಾರಿಯಾದಾನೆಂಬ ಶಂಕೆಯು ಸ್ವಪ್ನದಲ್ಲಿಯೂ ಉಂಟಾಗಲಾರದು.

ಮೇಲೆ ಹೇಳಿದ ವಿಷಯಕ್ಕೂ ವೇದಾಂತದ ಡಂಗುರವಿದೆ. ಉದಾಹರಣೆಗೆ ನೋಡಿರಿ. 'ಏತಂ ಹ ವಾವ ನ ತಪತಿ । ಕಿಮಹಂ ಸಾಧು ನಾಕರವಮ್ । ಕಿಮಹಂ ಪಾಪಮಕರವಮಿತಿ । ಸ ಯ ಏವಂ ವಿದ್ವಾನೇತೇ ಆತ್ಮಾನಂ ಸ್ಪೃಣುತೇ' (ನಾನು ಪುಣ್ಯವನ್ನೇಕೆ ಮಾಡಲಿಲ್ಲ? ಪಾಪವನ್ನೇಕೆ ಮಾಡಿದೆನು?- ಎಂದು ಈತನನ್ನು ಮನಸ್ಸು ಸಂಕಟಗೊಳಿಸುವದಿಲ್ಲ. ಈ ರೀತಿಯಾಗಿ ಆರಿತಿರುವವನು ಇವೆರಡನ್ನೂ ಆತ್ಮನನ್ನಾಗಿಯೇ ಮಾಡಿಕೊಂಡಿರುವನು, ತೈ. ೩-೯) ಎಂದು ಶ್ರುತಿಯು ಸಾರುತ್ತಿದೆ.

**ನೈವಾಭಾಸಂ ಸ್ಪೃಶೇತ್ಕರ್ಮ ಮಿಥ್ಯೋಪಾಧಿಮಪಿ ಸ್ವಯಮ್ ।**
**ಕುತೋಽಧಿಷ್ಠಾನಮತ್ಯಚ್ಛಮಿತಿ ವೇದಾನ್ತಡಿಣ್ಡಿಮಃ ॥೯೨॥**

೯೨. ಕರ್ಮವು ಚಿದಾಭಾಸನನ್ನು ಮುಟ್ಟಲಾರದು; ಮಿಥ್ಯೋಪಾಧಿಯನ್ನೂ ತಾನು ಮುಟ್ಟಲಾರದು. ಇನ್ನು ಅತ್ಯಂತನಿರ್ಮಲವಾಗಿರುವ ಅಧಿಷ್ಠಾನವನ್ನು ಹೇಗೆ ಮುಟ್ಟೀತು? ಹೀಗೆಂಬುದು ವೇದಾಂತಗಳ ಡಂಗುರವು.

## ವಿವರಣೆ

ಕರ್ಮದಿಂದ ಶುಭಾಶುಭಫಲಗಳುಂಟಾಗುವವೆಂಬುದು ಅವಿದ್ಯಾದೃಷ್ಟಿಯಿಂದಲೇ. ನಿಜವಾಗಿ ವಿವೇಚನೆಮಾಡಿ ನೋಡಿದರೆ ಅಂತಃಕರಣವೆಂಬ ಉಪಾಧಿಯನ್ನಾಗಲಿ, ಅದರಲ್ಲಿ ಪ್ರತಿಬಿಂಬಿಸಿರುವ ಚಿದಾಭಾಸವನ್ನಾಗಲಿ ಅದು ಏನನ್ನೂ ಮಾಡಲಾರದು. ಏಕೆಂದರೆ ಚಿದಾಭಾಸವೂ ಮಿಥ್ಯೆ, ಅಂತಃಕರಣವೂ ಮಿಥ್ಯೆ- ಹುಸಿಯಾದ ಇವೆರಡಕ್ಕೂ ಕರ್ಮದ ಸಂಬಂಧವು ಹೇಗೆ ಇದ್ದೀತು?

ಇನ್ನು ದ್ವಿತೀಯವಸ್ತುವಿನ ಸಂಬಂಧವೇ ಇಲ್ಲದ ಅತಿನಿರ್ಮಲವಾದ ಅಸಂಗಾತ್ಮನಿಗೆ ಕರ್ಮವು ಹೇಗೆ ಅಂಟೀತು? ಎಂದಿಗೂ ಅಂಟಲಾರದು.

ಕರ್ಮವು ತಾನೂ ಹುಸಿಯಾದದ್ದು; ಅದಕ್ಕೆ ಆಶ್ರಯವಾಗಿರುವ ಚಿದಾಭಾಸ, ಅಂತಃಕರಣ-ಇವೆರಡೂ ಹುಸಿಯೇ. ಆದ್ದರಿಂದ ಇವುಗಳಲ್ಲಿ ಯಾವದಕ್ಕೂ ಒಂದೊಂದಕ್ಕೂ ನಿಜವಾದ ಸಂಬಂಧವು ಇರುವದಿಲ್ಲ. ಪರಮಾರ್ಥವಾಗಿ ಆತ್ಮನು ನಿತ್ಯಶುದ್ಧಬುದ್ಧಮುಕ್ತನು, ಅವನಿಗಂತೂ ಹುಸಿಯಾದ ಕರ್ಮದ ಸಂಬಂಧವು ಇಲ್ಲವೇ ಇಲ್ಲ. ಹೀಗೆ ಪರಮಾರ್ಥದೃಷ್ಟಿಯಿಂದ ನೋಡಿದಾಗ ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರವು ಯಾರಿಗೂ ಇಲ್ಲ, ಅದು ಮಿಥ್ಯೆಯೆಂಬಿದೇ ಪರಮಾರ್ಥವು. ಆದ್ದರಿಂದಲೇ 'ನಾಯಂ ಹನ್ತಿ ನ ಹನ್ಯತೇ' (ಈ ಆತ್ಮನು ಕೊಲ್ಲುವದೂ ಇಲ್ಲ. ಕೊಲ್ಲಿಸಿಕೊಳ್ಳುವದೂ ಇಲ್ಲ, ಕ. ೧-೨-೧೯) ಎಂದು ಶ್ರುತಿಯ ಡಂಗುರವು ಸಾರುತ್ತಿದೆ.

**ಅಹೋಽಸ್ಮಾಕಮಲಂ ಮೋಹೈರಾತ್ಮಾ ಬ್ರಹ್ಮೇತಿ ನಿರ್ಭಯಮ್ ।**
**ಶ್ರುತಿಭೇರೀರವೋಽದ್ಯಾಪಿ ಶ್ರೂಯತೇ ಶ್ರುತಿರಞ್ಜನಃ ॥೯೩॥**

೯೩. ಆಹಾ! ಇನ್ನು ಮೋಹಗಳು ಸಾಕು; ಆತ್ಮನೇ ನಿರ್ಭಯವಾದ ಬ್ರಹ್ಮವು ಎಂಬ ಶ್ರುತಿಯ ನಗಾರಿಯ ಶಬ್ದವು ಈಗಲೂ ಕಿವಿಗಿಂಪಾಗಿ ಕೇಳಬರುತಲೇ ಇದೆ!

## ವಿವರಣೆ

'ಕೋ ಮೋಹಃ ಕಃ ಶೋಕಃ' (ಮೋಹವೆಲ್ಲಿಯದು? ಶೋಕವೆಲ್ಲಿಯದು? ಈ. ೭), 'ಅಯಮಾತ್ಮಾ ಬ್ರಹ್ಮ' (ಈ ಆತ್ಮನು ಬ್ರಹ್ಮವು, ಬೃ. ೨-೮-೧೬) ಎಂಬಿವೇ ಮುಂತಾದ ಶ್ರುತಿಯ ವಚನಗಳು ನಗಾರಿಯನ್ನು ಹೊಡೆದಂತೆ ಸಾರುತ್ತಲೇ ಇರುತ್ತವೆ. ಆದರೂ ಸಂಸಾರಿಗಳು ವಿಷಯಾಸಕ್ತಚಿತ್ತರಾಗಿರುವದರಿಂದ ಅವು ಅವರಿಗೆ ಕೇಳಿಸದೆ ಇರುತ್ತವೆ. ವಿವೇಕಿಗಳು ಏತಕ್ಕೆ ಮೋಹಪಟ್ಟಾರು?

**ವೇದಾನ್ತಭೇರೀಝುಙ್ಕಾರಃ ಪ್ರತಿವಾದಿಭಯಂಕರಃ ।**
**ಶ್ರೂಯತಾಂ ಬ್ರಾಹ್ಮಣೈಃ ಶ್ರೀಮದ್ದಕ್ಷಿಣಾಮೂರ್ತ್ಯನುಗ್ರಹಾತ್ ॥೯೪॥**

೯೪. ವೇದಾಂತವೆಂಬ ಭೇರಿಯ ಝುಂಕಾರವು ಪ್ರತಿವಾದಿಗಳಿಗೆ ಭಯಂಕರವಾಗಿರುವದು, ಶ್ರೀಮದ್ದಕ್ಷಿಣಾಮೂರ್ತಿಯ ಅನುಗ್ರಹದಿಂದ ಬ್ರಾಹ್ಮಣರು ಅದನ್ನು ಕೇಳಬೇಕು.

## ವಿವರಣೆ

ದ್ವೈತವು ಸತ್ಯವೆನ್ನುವ ವಾದಿಗಳಿಗೆ 'ಇದೆಲ್ಲ ಮಿಥ್ಯೆ, ಇದೆಲ್ಲ ಬ್ರಹ್ಮವೊಂದೇ'- ಎಂದು ವೇದಾಂತದ ಭೇರಿಯು ಢಣಾರಾ! ಎಂದು ಶಬ್ದಮಾಡುತ್ತಿರುವದರಿಂದ ಇದು ಭಯಂಕರವಾಗಿರುತ್ತದೆ. ವಿರಕ್ತರಾದ ಮುಮುಕ್ಷುಗಳಿಗೆ ಇದು ಪರಮೇಶ್ವರನ ಅನುಗ್ರಹದಿಂದ ಕೇಳಬರುವದು. ಇದರಿಂದಲೇ ಅವರಿಗೆ ಪರಮಪುರುಷಾರ್ಥವು ದೊರಕುವದು- ಎಂದರ್ಥ.

ಪರಮೇಶ್ವರನನ್ನೇ ಶರಣುಹೊಕ್ಕವರಿಗೆ ಸದ್ಗುರುಮುಖದಿಂದ ಸಚ್ಛಾಸ್ತ್ರಶ್ರವಣವೂ ಮನನನಿದಿಧ್ಯಾಸನಗಳಿಂದ ಜ್ಞಾನಪ್ರಾಪ್ತಿಯೂ ಮುಕ್ತಿಯೂ ದೊರಕುವದೆಂದು ಶ್ರುತಿಡಿಂಡಿಮವಿದೆ. 'ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ ॥' (ಯಾವಾತನಿಗೆ ಪರಮೇಶ್ವರನಲ್ಲಿಯೂ ಪರಮೇಶ್ವರನಲ್ಲಿರುವಂತೆ ಗುರುವಿನಲ್ಲಿಯೂ ಪರಭಕ್ತಿಯಿರುವದೋ ಆ ಮಹಾತ್ಮನಿಗೆ ಈ ಹೇಳಿದ ಅರ್ಥಗಳು ಬೆಳಗಿ ತೋರುವವು, ಶ್ವೇ. ೬-೨೩).

ಇಂತು ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ
ಶ್ರೀಮನ್ನೃಸಿಂಹಸರಸ್ವತೀತೀರ್ಥಪ್ರಣೀತವಾದ
ವೇದಾಂತಡಿಂಡಿಮ ಪ್ರಕರಣವು
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿ ಕೃತ ವಿವರಣದೊಡನೆ
ಸಂಪೂರ್ಣವಾಯಿತು.
ಓಂ ತತ್ಸತ್

# ಶ್ಲೋಕಗಳ ವರ್ಣಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಮೊದಲನೆಯದು ಶ್ಲೋಕಸಂಖ್ಯೆ;
ಎರಡನೆಯದು ಪುಟಸಂಖ್ಯೆ


| | ಶ್ಲೋ. | ಪುಟ |
|---|---|---|
| ಅದ್ವೈತದ್ವೈತವಾದೌ... | 19 | 18 |
| ಅನಾಮರೂಪಂ... | 67 | 67 |
| ಅಬೇದದರ್ಶನಂ ... | 71 | 21 |
| ಅಲಂ ಯಾಗ್ಯೈಃ... | 23 | 23 |
| ಅಲಂ ವೇದ್ಯೈಃ... | 24 | 24 |
| ಅವಸ್ಥಾತ್ರಿತಯಂ ಯಸ್ಯ ... | 37 | 35 |
| ಅವಿಜ್ಞಾತೇ ಜನ್ಮ... | 74 | 73 |
| ಅವಿದ್ಯೋಪಾಧಿಕೋ ಜೀವಃ | 31 | 30 |
| ಅಸತ್ಯಃ ಸರ್ವಸಂಸಾರಃ... | 13 | 13 |
| ಅಹೋಽಸ್ಮಾಕಮ್... | 93 | 87 |
| ಅಹಂ ಸಾಕ್ಷೀತಿ... | 48 | 48 |
| ಆತ್ಮಾನಾತ್ಮಪದಾರ್ಥೌ... | 2 | 2 |
| ಉಪೇಕ್ಷ್ಯೌಪಾಧಿಕಾನ್... | 76 | 74 |
| ಐಹಿಕಂ ಚಾಮುಷ್ಮಿಕಂ ಚ ... | 18 | 18 |
| ಕರ್ಮಾಣಿ ಚಿತ್ತಶುದ್ಧ್ಯರ್ಥಮ್ | 26 | 25 |
| ಕರ್ಮಿಣೋ ವಿನಿವರ್ತನ್ತೇ... | 20 | 19 |
| ಘಟಕುಡ್ಯಾದಿಕಮ್... | 36 | 35 |
| ಚಿನ್ಮಾಚಿನ್ಮಪದಾರ್ಥೌ... | 9 | 10 |
| ಜೀವೋ ಬ್ರಹ್ಮಾತ್ಮನಾ... | 16 | 16 |
| ಜ್ಞಾತೃಜ್ಞೇಯಪದಾರ್ಥೌ... | 4 | 4 |
| ಜ್ಞಾನಕರ್ಮಪದಾರ್ಥೌ... | 7 | 8 |
| ಜ್ಞಾನಾಜ್ಞಾನಪದಾರ್ಥೌ... | 3 | 3 |
| ದಶಮಸ್ಯ ಪರಿಜ್ಞಾನಾತ್... | 81 | 78 |
| ದಶಮಸ್ಯ ಪರಿಜ್ಞಾನೇ... | 75 | 73 |
| ದೃಗ್ದೃಶ್ಯೌ ದ್ವೌ ಪದಾರ್ಥೌ ತೌ.. | 30 | 29 |
| ದೇಹಾದಿಪಞ್ಚ ಕೋಶಸ್ಥಾ... | 51 | 52 |
| " " | 52 | 54 |
| " " | 53 | 54 |
| ದೇಹಾದಿಕೋಶಗಾ... | 57 | 57 |
| " " | 58 | 57 |
| " " | 59 | 57 |
| ದೇಹೋ ನಾಹಮ್... | 43 | 43 |
| ದ್ವಿಜತ್ವಂ ವಿಧ್ಯನುಷ್ಠಾನಾದ್ | 33 | 33 |
| ಧನ್ಯೈರ್ವಾ ಧನದೈಃ ... | 78 | 76 |
| ಧ್ಯೇಯಾಧ್ಯೇಯಪದಾರ್ಥೌ | 10 | 10 |
| ನ ಕಾಮ್ಯಪ್ರತಿಷಿದ್ಧಾಭಿಃ | 73 | 72 |
| ನ ಕುರ್ಯಾತ್... | 89 | 84 |
| ನ ಜೀವಬ್ರಹ್ಮಣೋರ್ಭೇದಃ | 61 | 62 |
| " " | 62 | 62 |
| " " | 63 | 62 |
| " " | 64 | 63 |
| " " | 66 | 66 |
| ನ ನಾಮರೂಪೇ ನಿಯತೇ | 65 | 64 |
| ನ ಪುಣ್ಯಕರ್ಮಣೋ ವೃದ್ಧಿಃ | 28 | 27 |
| ನ ಮತಾಭಿನಿವೇಶೇನ | 72 | 71 |

| | | |
|---|---|---|
| ನರ್ಚಾ ನ ಯಜುಷಾ | 25 | 24 |
| ನವಭ್ಯೋಽಸ್ತಿ | 82 | 78 |
| ನ ವರ್ಣಾಶ್ರಮಸಂಕೇತೈಃ | 12 | 12 |
| ನವಾಭಾಸಾನ್ | 83 | 79 |
| ನ ವಿದ್ವಾಂಸಮ್ | 91 | 85 |
| ನ ಸತ್ಯಃ ಕಥ್ಯತೇ | 69 | 69 |
| ನಾಜ್ಞಾನಂ ಸ್ಯಾಮ್ | 47 | 45 |
| ನಾಮರೂಪತ್ಮಕಮ್ | 70 | 69 |
| ನಾಮರೂಪಾಭಿಮಾನ... | 86 | 82 |
| ನಾಹಂ ಮಾಯಾ ... | 49 | 49 |
| ನಾಹಂ ಸರ್ವಮ್ ... | 50 | 50 |
| ನೈವಾಬಾಸಮ್ ... | 92 | 86 |
| ಪಞ್ಚಾನಾಮಪಿ ... | 80 | 77 |
| ಪರಮೇ ಬ್ರಹ್ಮಣಿ ... | 84 | 80 |
| ಪರೋಕ್ಷಾಸತ್ಫಲಮ್ ... | 21 | 21 |
| ಪುರುಷಾರ್ಥತ್ರಯಾವಿಷ್ಟಾಃ ... | 40 | 40 |
| ಪ್ರತಿಲೋಮಾನುಲೋಮಾಭ್ಯಾಂ | 85 | 81 |
| ಪ್ರಾಣೋ ನಾಹಮಹಂ ದೇವಃ... | 44 | 43 |
| ಬುದ್ಧಿರ್ನಾಮಹಂ ದೇವಃ ... | 46 | 45 |
| ಬುದ್ಧಿಪೂರ್ವಾಬುದ್ಧಿಪೂರ್ವಂ... | 29 | 28 |
| ಬ್ರಹ್ಮ ಸತ್ಯಂ ಜಗತ್ ... | 67 | 67 |
| ಮನೋ ನಾಹಮಹಮ್ ... | 45 | 44 |
| ಯದಸ್ತ್ಯಾದೌ ಯದಸ್ತಿ... | 39 | 39 |
| ಯನ್ನಾದೌ ಯಚ್ಚ ... | 38 | 37 |
| ಯೋಗಿನೋ ಭೋಗಿನೋ!... | 11 | 11 |
| ವೃಥಾ ಕ್ರಿಯಾ ವೃಥಾಲಾಪಾಃ... | 14 | 15 |
| ವೃಥಾ ಶ್ರಮೋಽಯಂ... | 22 | 22 |
| ವೇದಾನ್ತಡಿಣ್ಡಿಮಾಃ ... | 1 | 1 |
| ವೇದಾನ್ತಭೇರೀ ... | 94 | 88 |
| ವ್ಯೋಮಾದಿಪಞ್ಚಭೂತಸ್ಥಾ ... | 54 | 56 |
| ,, ,, | 55 | 56 |
| ,, ,, | 56 | 56 |
| ಶ್ರೋತವ್ಯಾಶ್ರಾವ್ಯರೂಪೌ ... | 8 | 9 |
| ಷಣ್ಣಿ ಹತ್ಯ ... | 41 | 41 |
| ಸತ್ತಾಸ್ಫುರಣಸೌಖ್ಯಾನಿ ... | 35 | 34 |
| ಸಚ್ಚಿದಾನನ್ದ ರೂಪತ್ವಾತ್ ... | 60 | 61 |
| ಸಚ್ಚಿದಾನನ್ದಸತ್ಯತ್ವೇ ... | 87 | 83 |
| ಸಞ್ಚಿತಾಗಾಮಿಕರ್ಮಾಣಿ ... | 27 | 26 |
| ಸಮಷ್ಟಿವ್ಯಷ್ಟಿರೂಪೌ ದ್ವೌ ... | 6 | 7 |
| ಸರ್ವಾತ್ಮತ್ವಾತ್ ... | 17 | 17 |
| ಸರ್ವಾತ್ಮನಾ ಸ್ಥಿತಮ್ ... | 34 | 33 |
| ಸಾಕಾರಂ ಚ ನಿರಾಕಾರಮ್ ... | 32 | 32 |
| ಸಾಲಮ್ಬನಂ ನಿರಾಲಮ್ಬಮ್ ... | 88 | 83 |
| ಸುಖದುಃಖಪದಾರ್ಥೌ ... | 5 | 5 |
| ಸುಖಮಲ್ಪಮ್ ... | 77 | 75 |
| ಸುಪ್ತೇರುತ್ಥಾಯ ... | 79 | 76 |
| ಸ್ಥಿತೋ ಬ್ರಹ್ಮಾತ್ಮನಾ ... | 15 | 16 |
| ಸಕರ್ಮಪಾಶವಶಗ ... | 90 | 85 |
| ಹಿತ್ವಾ ಷಟ್ ... | 42 | 41 |

# ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಪರಿಚಯ

ಸಂಸ್ಥಾಪಕರಾದ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು ತಮ್ಮ 70-80 ವರ್ಷಗಳ ವೇದಾಂತ - ವಿವಿಧತತ್ತ್ವಗಳ ಅವಿರತ ಅಧ್ಯಯನ, ಮನನ, ಬರಹಗಳ ಜ್ಞಾನ ತಪಸ್ಸಿನ ಫಲವಾಗಿ ಲಭ್ಯವಾದ ಅಪ್ರತಿಮ ಮಾಣಿಕ್ಯದ ಸೌರಭವನ್ನು, ಬೆಳಕನ್ನು, ಸಾಂಪ್ರದಾಯಿಕ ಶ್ರೇಯೋ ಜೀವನ ಸೊಬಗನ್ನು ಹತ್ತು ದಿಸೆಯಲ್ಲಿ ಹರಡುವ, ಅದರ ಅಮೃತ ಸವಿಯನ್ನು ಜನಸಾಮಾನ್ಯರಿಗೂ ಉಣಿಸುವ ಪರಮ ಲೋಕೋಪಕಾರದ ಕರುಣೆಯಿಂದ 1920 ರಲ್ಲಿ ಅಧ್ಯಾತ್ಮಪ್ರಕಾಶ ಕಾರ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಇದು ಸ್ಥಿರವಾಗಿ ನೆಲೆಯಾದದ್ದು 1937 ರಲ್ಲಿ ಹೊಳೇನರಸೀಪುರದಲ್ಲಿ. 1948 ರಲ್ಲಿ ಶ್ರೀಗಳ ಸಂನ್ಯಾಸದೊಡನೆ, ಕಾರ್ಯಸಮಿತಿಯ ಕೈಗೆ ಬಂದ ಕಾರ್ಯಾಲಯವು 1965ರಲ್ಲಿ ವಿಶ್ವಸ್ತಸಮಿತಿಯಾಗಿ, 1992 ರಲ್ಲಿ **ಸಾರ್ವಜನಿಕ ಧರ್ಮಾರ್ಥ** ಸಂಸ್ಥೆಯಾಯಿತು.

ಧ್ಯೇಯ : ಅಧ್ಯಾತ್ಮ ವಿದ್ಯೆಯಲ್ಲಿ ಜನರಿಗೆ ಆಸಕ್ತಿಯುಂಟು ಮಾಡಿ, ಜಾತಿ ಮತ ಭೇದಗಳಿಲ್ಲದೆ, ಸಕಲ ಮಾನವರಿಗೂ ಸುಖ, ಶಾಂತಿ, ಆನಂದವನ್ನು ಕೊಡುವ ವೇದ, ಉಪನಿಷತ್ತುಗಳಲ್ಲಿನ ನಮ್ಮ ಭಾರತೀಯ ಸಂಸ್ಕೃತಿಯನ್ನು ಪ್ರಚಾರ ಮಾಡುವುದೇ ಶ್ರೀ ಶ್ರೀಗಳವರ ಮುಖ್ಯ ಧ್ಯೇಯ. ಉದ್ದೇಶ ಕಾರ್ಯಕ್ಕೆ ಅವರು ಆರಿಸಿಕೊಂಡ ಸಾಧನಗಳು : ಗ್ರಂಥ ಪ್ರಕಟಣೆ, ಮಾಸಪತ್ರಿಕೆ, ಪ್ರವಚನ, ಅಧ್ಯಾತ್ಮ ಶಿಕ್ಷಣ.

ಗ್ರಂಥಪ್ರಕಟಣೆ : ಬರೀ ಭಾಷಾನುವಾದವಾಗದೆ ಪ್ರತಿಪಾದನೆಯ ಸರಳತೆ, ಸಂಶೋಧನಾ ರೂಪದ ಸುತರ್ಕದ ಜರಡಿಯಾಡಿ ಜೊಳ್ಳು ದೋಷಗಳಿಂದ ಶುದ್ಧವೇದಾಂತದ ಬೇರ್ಪಡೆ ಸುಲಭ ಶೈಲಿಯ ಬರವಣಿಗೆಗಳಿಂದ ಸಂಸ್ಕೃತದಲ್ಲಿರುವ ವೇದೋಪನಿಷದ್ಭಾಷ್ಯಗಳ ಸಿರಿ ಸಂಪತ್ತನ್ನು ಹಂಚಿರುವ ಗ್ರಂಥಗಳು ವಿದ್ವಾಂಸರ ಪ್ರಶಂಸೆಯನ್ನು ಮುಮುಕ್ಷುಗಳ ಪ್ರೀತಿ ಗೌರವವನ್ನು ಸಂಪಾದಿಸಿವೆ. ಈಚಿನ ಹತ್ತು ವರ್ಷಗಳಲ್ಲಿ 25,200 ಪುಟಗಳ 120 ಪುಸ್ತಕಗಳನ್ನು [18 ಹೊಸದು, 102 ಮರುಮುದ್ರಣ, ಮೌಲ್ಯ 30.53 ಲಕ್ಷ ರೂ.] ಪ್ರಕಟಿಸಿದೆ.

ಪತ್ರಿಕೆ : ಹೊಳೆನರಸೀಪುರದ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯು ಸುಮಾರು 40 ವರ್ಷಗಳ ಕಾಲ ಶ್ರೀ ಶ್ರೀಗಳವರೇ ನಡೆಸಿ, ಈಗಲೂ ಅದೇ ಸರಳ ಗಾಂಭೀರ್ಯವನ್ನು ಹೊತ್ತು ಬರುತ್ತಿದೆ. ಬೆಂಗಳೂರು ಶಾಖೆಯಿಂದ ಹೊರಬರುತ್ತಿರುವ ತ್ರೈಮಾಸಿಕ **'ಶಂಕರಭಾಸ್ಕರ'** ಸರ್ವಾಂಗ ಸುಂದರವಾಗಿ ಗ್ರಾಹಕರ ಪ್ರತಿಷ್ಠೆಯ ಲಾಂಛನವಾಗಿದೆ.

ಪ್ರವಚನಗಳು : ಶ್ರೀ ಶ್ರೀಗಳವರ ಶಿಷ್ಯರಾದ ಶ್ರೀಲಕ್ಷ್ಮೀನರಸಿಂಹ ಮೂರ್ತಿಗಳು, ಶ್ರೀ ಕೆ. ಜಿ. ಸುಬ್ರಾಯಶರ್ಮರು ವೇದಾಂತ ಪ್ರಸಾರ ಮಾಡುತ್ತಿದ್ದಾರೆ. ಇದಲ್ಲದೆ ವೇದಾಂತ ಸಪ್ತಾಹಗಳು, ಮತ್ತು ವೇದಾಂತ ಶಿಬಿರಗಳು ಹೊಳೆನರಸೀಪುರ ಮತ್ತು ಇತರ ಸ್ಥಳಗಳಲ್ಲಿ ನಡೆಯುತ್ತಾ ಇವೆ.

ಅಧ್ಯಾತ್ಮ ವಿದ್ಯಾನಿಲಯ : ಶ್ರೀ ಶ್ರೀಗಳು 1939ರಲ್ಲೇ ಸಿದ್ಧಪಡಿಸಿದ ಪಠ್ಯಕ್ರಮದಂತೆ ಆಗ ಮತ್ತು 1948ರಲ್ಲಿಯೇ ಪ್ರಯತ್ನಿಸಿ ಕೆಲವು ಶಿಷ್ಯರನ್ನು ತಯಾರಿಸಿದರು. ವಿದ್ಯಾರ್ಥಿಗಳ ಕೊರತೆ, ಅಡುಗೆ ವ್ಯವಸ್ಥೆ ಅಭಾವಗಳಿಂದ ಸ್ಥಗಿತವಾಗಿದ್ದ ಶಿಕ್ಷಣವನ್ನು ಮತ್ತೂರು ಶ್ರೀ ಚಂದ್ರಮೌಳಿ ಅವಧಾನಿಗಳು 2003 ರಿಂದ ಮುಂದುವರಿಸಿದ್ದಾರೆ. ಇರುವ ಹತ್ತು ವಿದ್ಯಾರ್ಥಿಗಳಿಗೆ ಕಾರ್ಯಾಲಯದಿಂದ ಊಟ, ವಸತಿ, ಶಿಕ್ಷಣ ಉಚಿತ. ನಿಸ್ವಾರ್ಥ ಮನೋಭಾವದಿಂದ ಸುತ್ತಲಿನ ಜನಗಳಿಗೆ ಸೇವೆ ಸಲ್ಲಿಸಿ, ವೇದಾಂತ ಪ್ರಚಾರವನ್ನೂ ಮಾಡುವಂಥ ತಯಾರಿಯೇ ವಿದ್ಯಾರ್ಥಿ ನಿಲಯದ ಉದ್ದೇಶ.